# ಲೂಕನು ಬರೆದ ಸುವಾರ್ತೆ

**ಬರಹಗಾರನು:**

ಲೂಕನು ವೈದ್ಯನಾಗಿದ್ದು, ಅಪೊಸ್ತಲನಾದ ಪೌಲನ ಸ್ನೇಹಿತನು ಮತ್ತು ಜೊತೆಯವನಾಗಿದ್ದನು, ಹಾಗೂ ಸಹಜವಾಗಿ ಆತನ ಸುವಾರ್ತಾ ಪ್ರಯಾಣಗಳಲ್ಲಿ ಪ್ರಯಾಣಿಸುತ್ತಿದ್ದನು. ಕೊಲೊ 4:14; 2 ತಿಮೊ 4:11; ಫಿಲೆ 24; ಅಪೊ 16:10-12; 20:5-6; 27:1.

**ದಿನಾಂಕ:**

ಕರ್ತನಾದ ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನವಾದ ಕೆಲವು ವರ್ಷಗಳ ನಂತರ ಮತ್ತು ಕ್ರಿಶ 70ರಲ್ಲಿ ಯೆರೂಸಲೇಮ್ ನಾಶವಾಗುವ ಮೊದಲು ಅಂದರೆ ಮೊದಲನೆಯ ಶತಮಾನದಲ್ಲಿಯೇ ಈ ಸುವಾರ್ತೆಯನ್ನು ಬರೆದಿದ್ದಾನೆ.

**ಧ್ಯೇಯ:**

ರಕ್ಷಕನಾಗಿರುವ ಯೇಸು ಕ್ರಿಸ್ತನನ್ನು ದೇವರು ಮಾನವರಿಗೆ ರಕ್ಷಣೆಯನ್ನು ದಯಪಾಲಿಸಲು ನೇಮಿಸಿದ್ದಾನೆ. ಈ ಸುವಾರ್ತೆಯಲ್ಲಿರುವ ಕೆಲವು ಪ್ರಮುಖವಾದ ಪದಗಳು ಯಾವುವೆಂದರೆ ರಕ್ಷಣೆ (1:69,77; 2:30; 3:6; 19:9), ಮತ್ತು ಸುವಾರ್ತೆ ಸಾರುವದು (4:18-19,43; 7:22; 8:1; 9:2,6,60; 20:1). ಆತನು ಯೆಶಾಯ 61:1-2 ವಾಕ್ಯದೊಂದಿಗೆ ಸೇವೆಯನ್ನು ಪ್ರಾರಂಭಿಸಿದನು ಮತ್ತು ನಾಶನದ ಮಾರ್ಗದಲ್ಲಿರುವವರನ್ನು ಹುಡುಕಿ ರಕ್ಷಿಸುವದೇ ತನ್ನ ಕೆಲಸ ಎಂಬದಾಗಿ ಪ್ರಕಟಿಸಿದನು (19:10). ಲೂಕನು ಯೇಸು ಕ್ರಿಸ್ತನನ್ನು ಮನುಷ್ಯಕುಮಾರನಾಗಿ ತೋರ್ಪಡಿಸಿದ್ದಾನೆ. ಯೇಸು ಕ್ರಿಸ್ತನ ಮರಣ ಮತ್ತು ಜೀವಿತದ ಬಗ್ಗೆ ಆತನು ಹೆಚ್ಚು ವಿವರವಾಗಿ ಬರೆದಿದ್ದಾನೆ ಹಾಗೂ ಇತರೆ ಸುವಾರ್ತಾ ಬರಹಗಾರರಿಗಿಂತ ಹೆಚ್ಚು ವಿವರವಾಗಿ ಆತನ ನಿಜವಾದ ಮಾನವ ಸ್ವಭಾವದ ಕುರಿತು ಹೇಳಿದ್ದಾನೆ.

# 1 1

**1:1** *“ಅನೇಕರು”*– ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನನಲ್ಲದೆ ಇನ್ನೂ ಅನೇಕರು ಯೇಸು ಕ್ರಿಸ್ತನ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಆದರೆ ಅವುಗಳನ್ನು

ಸತ್ಯವೇದದಲ್ಲಿ ಸೇರಿಸಿಕೊಳ್ಳುವ ಆಯ್ಕೆಯನ್ನು ದೇವರು ಮಾಡಲಿಲ್ಲ. **2**

**1:2** *"ಕಣ್ಣಾರೆ ಕಂಡವರು"*– ಅಂದರೆ ಯೇಸು ಕ್ರಿಸ್ತನು ಆರಿಸಿಕೊಂಡ ಹನ್ನೆರೆಡು ಮಂದಿ ಶಿಷ್ಯರು. ಯೋಹಾನ 15:27; ಇಬ್ರಿ 2:3-4; 2 ಪೇತ್ರ 1:16; 1 ಯೋಹಾನ 1:1; ಅಪೊ 4:20ರೊಂದಿಗೆ ಹೋಲಿಸಿ ನೋಡಿರಿ.

*"ಸುವಾರ್ತಾ ವಾಕ್ಯ"*– ದೇವರ ವಾಕ್ಯ. ದೇವರ ವಾಕ್ಯಗಳಿಗೆ ವಿಧೇಯರಾಗಿ ಅದನ್ನು ಪ್ರಕಟಿಸುವ ಮೂಲಕ ಶಿಷ್ಯರ ಅದರ ಸೇವಕರಾದರು. ಯೋಹಾನ 1:1,14ರಲ್ಲಿ ಯೇಸು ಕ್ರಿಸನನ್ನು "ವಾಕ್ಯವೆಂಬವನು" ಎಂದು ಕರೆಯಲಾಗಿದೆ. **3**

**1:3** ಲೂಕನು ಮಾಹಿತಿಯಿಲ್ಲದ ಕಥೆಗಳು, ನೀತಿಕಥೆಗಳು ಅಥವಾ ಅಜ್ಜೀ ಕಥೆಗಳನ್ನು ಬರೆದಿಲ್ಲ. ಈ ಘಟನೆಗಳು ಸಂಭವಿಸಿದ ಸಮಯದಲ್ಲಿ ಆತನು ಜೀವಿಸುತ್ತಿದ್ದನು ಮತ್ತು ಎಲ್ಲವನ್ನೂ ಕೂಲಂಕುಷವಾಗಿ ಪರೀಕ್ಷಿಸಿದನು. ಥಿಯೊಫಿಲನ ಬಗ್ಗೆ ನಮಗೆ ಏನೂ ಗೊತ್ತಿಲ್ಲ. "ದೇವರನ್ನು ಪ್ರೀತಿಸುವವನು" ಎಂಬದು ಅವನ ಹೆಸರಿನ ಅರ್ಥ. **4**

**1:4** *"ಯಥಾರ್ಥವಾದವುಗಳು"*– ಲೂಕನು ಬರೆದಿರುವ ಉದ್ದೇಶ ಮತ್ತು ಅವನು ಇದನ್ನು ಬರೆಯುವಂತೆ ಮಾಡಿರುವ ದೇವರ ಉದ್ದೇಶ ಇದುವೇ ಆಗಿದೆ. ಯೇಸು ಕ್ರಿಸ್ತನ ಜೀವನ, ಮರಣ ಮತ್ತು ಪುನರುತ್ಥಾನದ ಸಂಗತಿಗಳು, ಆತನ ಕಾರ್ಯಗಳು ಮತ್ತು ಮಾತುಗಳನ್ನು ನಮಗೆ ದೇವರಾತ್ಮನ ಪ್ರೇರಣೆಗೆ ಒಳಗಾದ ಪ್ರಾಮಾಣಿಕ ಚರಿತ್ರೆಗಾರನಿಂದ ತಿಳಿಯಪಡಿಸಲಾಗಿದೆ. ಈ ವಿಷಯಗಳ ಕುರಿತು ಜನರು ಅಪನಂಬಿಕೆಯುಳ್ಳವರಾಗಿ ಅಥವಾ ದೃಢತೆಯಿಲ್ಲದವರಾಗಿ ಇರುವದು ದೇವರಿಗೆ ಇಷ್ಟವಿಲ್ಲ. ಯೋಹಾನ 20:31; 21:24; 2 ಪೇತ್ರ 1:16ರೊಂದಿಗೆ ಹೋಲಿಸಿ ನೋಡಿರಿ. **5**

**1:5** *"ಹೆರೋದನು"*– ಮತ್ತಾಯ 2:1.

*"ಯಾಜಕ ವರ್ಗ"*– ಜಕರೀಯನು ಹುಟ್ಟುವದಕ್ಕಿಂತ ಸಾವಿರ ವರ್ಷಗಳ ಮುಂದೆ, ಇಸ್ರಾಯೇಲಿನ ಅರಸನಾದ ದಾವೀದನು, ಯಾಜಕರನ್ನು 24 ವರ್ಗಗಳಾಗಿ ವಿಂಗಡಿಸಿದನು. ಅವುಗಳಲ್ಲಿ ಒಂದಕ್ಕೆ ಅಬೀಯನು ಮೇಲ್ವಿಚಾರಕನಾಗಿದ್ದನು (1 ಪೂರ್ವ 24:10; ನೆಹೆ 12:12). ಆರೋನನು ಇಸ್ರಾಯೇಲಿನ ಮೊದಲನೆಯ ಮಹಾಯಾಜಕನು (ವಿಮೋ 28:1-3). **6**

**1:6** *“ತಪ್ಪಿಲ್ಲದವರು”*– ಇದರ ಅರ್ಥ ನಿಜವಾಗಿಯೂ ನಂಬಿಗಸ್ತರಾಗಿದ್ದರು. ಇದರ ಅರ್ಥ ಅವರು ಪಾಪಸ್ವಭಾವವಿಲ್ಲದವರು ಎಂಬದಾಗಿಯಲ್ಲ (ಮತ್ತಾಯ 7:11ರ ನೋಟ್ ನೋಡಿರಿ). **7**

**1:7** ವಚನ 25; ಆದಿ 16:2; 25:21; 30:23; 1 ಸಮು 1:2,5. **8-9**

**1:8-9** ಯಾಜಕರೆಲ್ಲರೂ ಎಲ್ಲಾ ಸಮಯಗಳಲ್ಲಿಯೂ ತಮ್ಮ ಉದ್ಯೋಗವನ್ನು ನಡೆಸುತ್ತಿರಲಿಲ್ಲ ಬದಲಾಗಿ ತಮ್ಮ ಮನೆಯಲ್ಲಿದ್ದು ಮನೆಯ ಜವಾಬ್ದಾರಿಕೆಗಳನ್ನೂ ನೋಡಿಕೊಳ್ಳುತ್ತಿದ್ದರು. **9**

**1:9** *“ಧೂಪ ಅರ್ಪಿಸುವದು”*– ವಿಮೋ 30:1,34-36. **11**

**1:11** *“ಕರ್ತನ ದುತನು”*– ಮತ್ತಾಯ 1:20; ಆದಿ 16:7ರ ನೋಟ್ಸ್ ನೋಡಿರಿ. **12**

**1:12** ನ್ಯಾಯ 6:22-23; 13:22 ರೊಂದಿಗೆ ಹೋಲಿಸಿ ನೋಡಿರಿ. **13**

**1:13** *“ಭಯ”*– ನೀತಿವಂತರು ಭಯಪಡುವ ಅವಶ್ಯಕತೆಯಿಲ್ಲ, ದುಷ್ಟರು ಎಲ್ಲವುಗಳಿಗೆ ಭಯಪಡುತ್ತಾರೆ. “ಯೋಹಾನ” ಎಂಬ ಹೆಸರು ಇಬ್ರಿಯ ಪದದಿಂದ ಬಂದದ್ದಾಗಿದೆ “ಯೆಹೋವನು ಕೃಪೆಯುಳ್ಳವನು” –ಎಂಬದು ಅದರ ಅರ್ಥ. **15**

**1:15** ಯೋಹಾನನ ಶ್ರೇಷ್ಠತೆಯ ಬಗ್ಗೆ ತಿಳಿಯಲು ಮತ್ತಾಯ 11:7-14 ನೋಡಿರಿ. ಆತನು ದ್ರಾಕ್ಷಾರಸವನ್ನು ಮುಟ್ಟಬಾರದೆಂಬ ಸಂಗತಿಯು ಆತನು ಜೀವನ ಪರ್ಯಂತರ ನಾಜೀರನಾಗಿದ್ದನು ಎಂಬದನ್ನು ಸೂಚಿಸುತ್ತದೆ. ಸಂಖ್ಯಾ 6:1-4 ನೋಡಿರಿ. ಹುಟ್ಟಿನಿಂದಲೇ ಪವಿತ್ರಾತ್ಮಭರಿತನಾಗಿದ್ದನು ಎಂಬದಾಗಿ ಇಡೀ ಸತ್ಯವೇದದಲ್ಲಿ ಯೋಹಾನನ ಬಗ್ಗೆ ಮಾತ್ರ ಹೇಳಲಾಗಿದೆ. ದೇವರು ಯೋಹಾನನಿಗೆ ವಿಶೇಷವಾದ ಕಾರ್ಯವನ್ನು ನೇಮಿಸಿದ್ದನು ಮತ್ತು ಹುಟ್ಟಿನಿಂದಲೇ ಅದನ್ನು ನೆರವೇರಿಸಲು ಆತನನ್ನು ಸಿದ್ಧಮಾಡುತ್ತಿದ್ದನು. ಪವಿತ್ರಾತ್ಮನ ಸಂಪೂರ್ಣತೆಯ ಬಗ್ಗೆ ತಿಳಿಯಲು ಅಪೊ 2:4; ಎಫೆ 5:18ರ ನೋಟ್ಸ್ ನೋಡಿರಿ. **16**

- **1:16** 3:4-6; ಮತ್ತಾಯ 3:1-6 ನೋಡಿರಿ.

*“ಎಲೀಯ”*– ಮತ್ತಾಯ 11:14; 17:10-13. ಮಲಾಕಿ 4:5-6 ನೋಡಿರಿ. **18**

**1:18** ಈ ಮಾತುಗಳು ಅಪನಂಬಿಕೆಯನ್ನು ಸೂಚಿಸುತ್ತವೆ (ವ 20). ಉತ್ತಮರು ಮತ್ತು ಅತ್ಯಂತ ನೀತಿವಂತರು ಸಹ ಕೆಲವೊಮ್ಮೆ ಸಂದೇಹಗಳು ಮತ್ತು ಅಪನಂಬಿಕೆಗಳಿಗೆ ಒಳಗಾಗುತ್ತಾರೆ ಎಂಬ ಸತ್ಯವನ್ನು ಪ್ರಕಟಪಡಿಸುವ ಇದು ಮತ್ತೊಂದು

ಉದಹಾರಣೆಯಾಗಿದೆ. ಆದಿ 17:17-18; 18:9-12; ಸಂಖ್ಯಾ 20:12; 1 ಸಮು 27:1; ಮತ್ತಾಯ 14:31; 17:17; ಯೋಹಾನ 20:25 ನೋಡಿರಿ. ದೇವರು ಏನಾದರೂ ಹೇಳುವಾಗ, ಮಾನವರಿಗೆ ಸಂದೇಶವನ್ನು ಕಳುಹಿಸುವಾಗ, ಅದು ಖಂಡಿತವಾಗಿಯೂ ಸತ್ಯವಾಗಿರುತ್ತದೆ ಮತ್ತು ಅದರ ವಿಷಯದಲ್ಲಿ ಸಂದೇಹಪಡುವದು ಮನುಷ್ಯರಿಗೆ ಸರಿಯಲ್ಲ. **19**

**1:19** ಜೆಕರೀಯನಿಗೆ "ಗಬ್ರಿಯೇಲನು" ಎಂಬ ಹೆಸರು ಗೊತ್ತಿದ್ದಿರಬಹುದು – ದಾನಿ 8:16; 9:21. **20**

**1:20** ಇದು ಅಪನಂಬಿಕೆಗೆ ಶಿಕ್ಷೆ ಮತ್ತು ಗಬ್ರಿಯೇಲನು ತಿಳಿಸಿದ ಮಾತು ಸತ್ಯ (ನಂಬಿಕೆಯನ್ನು ಹೆಚ್ಚಿಸುತ್ತದೆ) ಎಂಬ ಎರಡೂ ವಿಷಯಗಳಿಗೆ ಗುರುತಾಗಿದೆ. **21**

**1:21** ಧೂಪ ಅರ್ಪಿಸಲು ಕ್ಲುಪ್ತ ಸಮಯವಾದರೆ ಸಾಕು. ಅದಾದ ನಂತರ ಯಾಜಕನು ಹೊರಗೆ ಬರುವನು ಮತ್ತು ಜನರನ್ನು ಆಶೀರ್ವದಿಸುವನು (ಸಂಖ್ಯಾ 6:24-26). **25**

**1:25** ಬಂಜೆತನವನ್ನು ಇಸ್ರಾಯೇಲಿನಲ್ಲಿ ಅಪಮಾನ ಎಂಬದಾಗಿ ಪರಿಗಣಿಸಲಾಗುತ್ತಿತ್ತು – ಆದಿ 30:23; ಯೆಶಾಯ 4:1. ಎಲೀಜಬೇತಳು ಬಂಜೆಯಾಗಿದ್ದಳು (ವ 7). ಆದರೆ ಯಾವ ಸ್ತ್ರೀಯ ವಿಷಯದಲ್ಲಿ ಆಕೆ ಅವಮಾನ ಹೊಂದಬೇಕೆಂಬದು ದೇವರ ಚಿತ್ತವಲ್ಲ. ಕೆಲವು ಶ್ರೇಷ್ಠ ಸ್ತ್ರೀಯರೂ ಬಂಜೆಯರಾಗಿದ್ದರು – ಆದಿ 16:2; 25:21; 30:23; 1 ಸಮು 1:2,5. **26**

**1:26** *"ಆರನೇ ತಿಂಗಳು"*– ಎಲೀಜಬೇತಳ ಬಸುರು ಪ್ರಾರಂಭವಾದಾಗಿನಿಂದ. **27**

**1:27** ಮುಂದಿನ ವಾಕ್ಯಗಳು ಹೇಳುವದೇನೆಂದರೆ ಕರ್ತನಾದ ಯೇಸು ಕ್ರಿಸ್ತನು ಕನ್ಯೆಯಲ್ಲಿ ಜನಿಸುವನು. ಇದು ಯೆಶಾಯ 7:14ರ ನೇರವೇರುವಿಕೆಯಾಗಿದೆ. ಅಲ್ಲಿ ಮತ್ತು ಮತ್ತಾಯ 1:18-23ರ ನೋಟ್ಸ್ ನೋಡಿರಿ.

*"ದಾವೀದನ ಮನೆತನ"*– ಮತ್ತಾಯ 1:1. **28**

**1:28** ಲೋಕ ರಕ್ಷಕನಾದ ಮೆಸ್ಸೀಯನಿಗೆ ತಾಯಿಯಾಗುವ ಉನ್ನತವಾದ ಗೌರವಕ್ಕೆ ದೇವರು ಮರಿಯಳನ್ನು ಆಯ್ಕೆ ಮಾಡಿದನು – ಇದು ದೇವರ ದಯೆಯ ಮಹಾಗುರುತಾಗಿದೆ. ಆದಿ 6:8; ಅಪೊ 7:46ರೊಂದಿಗೆ ಹೋಲಿಸಿ ನೋಡಿರಿ.

*“ನಿನಗೆ ಶುಭವಾಗಲಿ”*– ಇದು ಗ್ರೀಕ್ ಪದದ ಅರ್ಥವಾಗಿದೆ. ಜನರನ್ನು ವಂದಿಸುವಾಗ ಹೀಗೆ ಹೇಳಲಾಗುತ್ತಿತ್ತು. ಆದರೆ ಈಗ ಈ ರೀತಿಯಾಗಿ ಯಾರೂ ವಂದಿಸುವದಿಲ್ಲ. **29**

**1:29** ಇವೆಲ್ಲವುಗಳ ಅರ್ಥ ಮತ್ತು ದೇವರು ತನ್ನಿಂದ ಏನು ಬಯಸುತ್ತಿದ್ದಾನೆ ಎಂಬದು ಮರಿಯಳಿಗೆ ಗೊತ್ತಾಗಲಿಲ್ಲ. ದೇವರು ಅದ್ಭುತಕಾರ್ಯಗಳನ್ನು ಮಾಡುವಾಗ ದೇವಜನರು ಸಂತೋಷಿಸುವ ಬದಲು ಕೆಲವೊಮ್ಮೆ ಕಳವಳಕ್ಕೊಳಪಡುತ್ತಾರೆ. **31**

- **1:31** ಮತ್ತಾಯ 1:1,21. **32**

**1:32** *“ಪರಾತ್ಪರನ ಕುಮಾರನು”*– ಮತ್ತಾಯ 1:18; 3:17; ಯೋಹಾನ 3:16; 5:18-23.

*“ಪರಾತ್ಪರನು”*– ಇದು ಒಬ್ಬನೇ ನಿಜ ದೇವರ ಹೆಸರಾಗಿದ್ದು ಹಳೆಯ ಒಡಂಬಡಿಕೆಯಲ್ಲಿ ಹಲವು ಸಲ ಉಪಯೋಗಿಸಲ್ಪಟ್ಟಿದೆ – ಆದಿ 14:19; 2 ಸಮು 22:14; ಕೀರ್ತನೆ 7:10.

*“ದಾವೀದನ ಸಿಂಹಾಸನ”*– 2 ಸಮು 7:11-16; ಕೀರ್ತನೆ 89:3-4; ಮತ್ತಾಯ 1:1. **33**

- **1:33** ಕೀರ್ತನೆ 45:6; 89:3-4; ಯೆಶಾಯ 9:6-7; ಯೆರೆ 33:14-18; ದಾನಿ 2:44; 7:14,27; ಮೀಕ 4:7.

*“ಯಾಕೋಬನ ವಂಶ”*– ಯಾಕೋಬನ ಮೂಲಕ ಉಂಟಾದ ಜನಾಂಗ – ಇಸ್ರಾಯೇಲ್ (ಆದಿಕಾಂಡ 25-50 ಅಧ್ಯಾಯಗಳು). **34**

**1:34** *“ಅರಿತವಳಲ್ಲವಲ್ಲಾ”*– ಯೆಹೂದ್ಯರು ಕೆಲವೊಮ್ಮೆ ನಿಕಟವಾದ ಸಂಬಂಧವನ್ನು ಸೂಚಿಸಲು ಈ ಪದವನ್ನು ಉಪಯೋಗಿಸುತ್ತಿದ್ದರು. ಮರಿಯಳು ತಾನು ಕನ್ಯೆ ಎಂದು ಹೇಳುತ್ತಿದ್ದಾಳೆ. **35**

**1:35** ಮತ್ತಾಯ 1:18 ರ ನೋಟ್ ನೋಡಿರಿ. ಇದು (ಅನೇಕ ದೇಶಗಳ ಕಟ್ಟುಕಥೆಗಳು ಮತ್ತು ದಂತಕಥೆಗಳಲ್ಲಿ ಬರೆಯಲ್ಪಟ್ಟಿರುವ ಹಾಗೆ) ದೇವರು ಮತ್ತು ಮರ್ತ್ಯ ಸ್ತ್ರೀಯ ನಡುವೆಯ “ಮದುವೆಯಲ್ಲ.” ಕಣ್ಣಿಗೆ ಕಾಣದ ದೇವರ ಆತ್ಮನು ಆಕೆಯೊಳಗೆ ಆಕೆಯ ಮಗನ ದೇಹ ಮತ್ತು ಮಾನವ ಸ್ವಭಾವವನ್ನು ಉಂಟುಮಾಡಿದನು. **37**

**1:37** ಬಂಜೆಯಾಗಿರುವ ವೃದ್ಧ ಸ್ತ್ರೀ (ವ 7) ಅಥವಾ ಕನ್ಯಾ ಸ್ತ್ರೀ ಗರ್ಭಧರಿಸಿ ಮಕ್ಕಳನ್ನು ಹೆರುವಂತೆ ಮಾಡುವದು ದೇವರಿಗೆ ಕಷ್ಟದ ಕೆಲಸವಲ್ಲ. ಮಾನವರು ಅದ್ಭುತ ಎಂದು ಹೇಳುವ ಕಾರ್ಯಗಳು ದೇವರ ಸುಲಭ ಮತ್ತು ಉಳಿದವುಗಳಂತೆ ಸಹಜವಾದವುಗಳಾಗಿವೆ (ಆದಿ

18:14; ಯೋಬ 42:2; ಯೆಶಾಯ 40:29; 50:2; 51:9; ಯೆರೆ 32:17,27; ಮತ್ತಾಯ 19:26; ರೋಮಾ 4:21). **38**

**1:38** ಮರಿಯಳು ತನ್ನ ವಿಷಯವಾದ ದೇವರ ಚಿತ್ತವನ್ನು ಸಂಪೂರ್ಣವಾಗಿ ಅಂಗೀಕರಿಸಿಕೊಂಡಳು, ಅದು ಆಕೆಗೆ ಹಿತವಾದದ್ದೆಂಬ ಭರವಸೆ ಅವಳಿಗಿತ್ತು. ಈ ವಿಷಯದಲ್ಲಿ ಆಕೆ ನಮಗೆ ಮಾದರಿಯಾಗಿದ್ದಾಳೆ – ರೋಮಾ 12:1-2ರೊಂದಿಗೆ ಹೋಲಿಸಿ ನೋಡಿರಿ. **41**

**1:41** ಈ ಎಲ್ಲಾ ಕಾರ್ಯಗಳಲ್ಲಿ ದೇವರ ಪವಿತ್ರಾತ್ಮನು ಎಂಬ ನಿಕಟವಾಗಿ ಭಾಗಿಯಾಗಿದ್ದನು ಎಂಬದನ್ನು ಗಮನಿಸಿರಿ (ವ 15,35,67). ದೇವರು ಭೂಲೋಕದಲ್ಲಿ ಗೂಢಾರ್ಥವಾದ, ಅದ್ಭುತವಾದ ಮತ್ತು ಆಶೀರ್ವಾದದಾಯಕವಾದ ಕಾರ್ಯ ಮಾಡುತ್ತಾನೆ ಎಂಬದಕ್ಕೆ ನಡೆದ ಘಟನೆಗಳು ಮತ್ತು ಅವರಿಗೆ ಹೇಳಲಾದ ಮಾತುಗಳು ಸಂಕೇತಗಳಾಗಿದ್ದವು. **42**

**1:42** ವಚನ 28. ಯೇಸು ಕ್ರಿಸ್ತನಿಗೆ ತಾಯಿಯಾಗಿ ಚರಿತ್ರೆಯಲ್ಲಿ ಕೇವಲ ಒಬ್ಬ ಸ್ತ್ರೀಯನ್ನು ಮಾತ್ರವೇ ಆಯ್ಕೆಮಾಡಬೇಕಾಗಿತ್ತು, ಮರಿಯಳು ಆಯ್ಕೆಯಾದಳು. ಹಾಗೆಯೇ 11:27-28 ಮತ್ತು ಆದಿ 12:3; ಸಂಖ್ಯಾ 6:22-27; ಕೀರ್ತನೆ 1:1ರಲ್ಲಿ ಧನ್ಯತೆಯ ಬಗ್ಗೆ ಕೊಡಲಾಗಿರುವ ನೋಟ್ಸ್ ನೋಡಿರಿ. ಅಬ್ರಹಾಮನಿಗೆ ದೇವರು ವಾಗ್ದಾನ ಮಾಡಿದ ವಿಷಯಗಳನ್ನು ಈಗ ಅಬ್ರಹಾಮನ ಸಂತತಿಯವರಿಗೆ ಮತ್ತು ಇಡೀ ಲೋಕದವರಿಗೆ ದೇವರು ಒದಗಿಸುವನು. **43**

**1:43** *"ತಾಯಿ"*– ದೇವಕುಮಾರನನ್ನು ತನ್ನ ಶಾರೀರಿಕ ದೇಹದಲ್ಲಿ ಹೊತ್ತುಕೊಂಡದ್ದರಿಂದ ಮರಿಯಳು ಆತನಿಗೆ ತಾಯಿಯಾದಳು. ನಿತ್ಯನಾದ ತಂದೆಯಾಗಿರುವ ದೇವರು, ಎಲ್ಲಾ ಕಾರ್ಯಗಳನ್ನು ಸೃಷ್ಟಿಸಿದ ಆತನು ಸೃಷ್ಟಿಸಲ್ಪಡದವನಾಗಿದ್ದಾನೆ, ಆದ್ದರಿಂದ ಆತನಿಗೆ ತಾಯಿಯೇ ಇಲ್ಲ. ಆದ್ದರಿಂದ ಮರಿಯಳನ್ನು "ದೇವರ ತಾಯಿ" – ಎಂಬದಾಗಿ ಕರೆಯುವದು ಸರಿಯಾದ ಭಾಷೆಯೇ ಅಲ್ಲ.

*"ನನ್ನ ಕರ್ತನು"*– ಪವಿತ್ರಾತ್ಮನ ಮೂಲಕ ಮಾತ್ರವೇ ಗರ್ಭದಲ್ಲಿದ್ದ ಯೇಸು ಕ್ರಿಸ್ತನ ಬಗ್ಗೆ ಎಲೀಜಬೇತಳು ಈ ಮಾತುಗಳನ್ನು ಹೇಳಲು ಸಾಧ್ಯವಾಯಿತು. ಕೀರ್ತನೆ 2:11; 110:1; ಮತ್ತಾಯ 22:41-45; ಅಪೊ 2:36; ಫಿಲಿಪ್ಪಿ 2:10-11ರೊಂದಿಗೆ ಹೋಲಿಸಿ ನೋಡಿರಿ. **45**

**1:45** ವಚನ 38,42. **46-55**

**1:46-55** ಸುಂದರವಾದ ಪದ್ಯದ ಭಾಷೆಯಲ್ಲಿ, ಮರಿಯಳ ಮಾತುಗಳು ದೇವರ ಕುರಿತಾದ ತಿಳುವಳಿಕೆ ಮತ್ತು ಆತನ ಮೇಲಿನ ಪ್ರೀತಿಯನ್ನು ಪ್ರಕಟಪಡಿಸುತ್ತವೆ ಹಾಗೂ ಆಕೆಯನ್ನು ಮೆಸ್ಸೀಯನಿಗೆ ತಕ್ಕ ತಾಯಿಯನ್ನಾಗಿ ಮಾಡಿದ ಆತ್ಮೀಕ ಸತ್ಯವನ್ನು ಗ್ರಹಿಸಿಕೊಳ್ಳಲು ಸಹಾಯ ಮಾಡುತ್ತದೆ. ಆಕೆಯ ಮಾತುಗಳನ್ನು 1 ಸಮು 2:1-10ರಲ್ಲಿ ಬರೆಯಲ್ಪಟ್ಟಿರುವ ಹನ್ನಳ ಮಾತುಗಳೊಂದಿಗೆ ಹೋಲಿಸಿ ನೋಡಿರಿ. **46**

**1:46** ಇತರೆ ಸುವಾರ್ತೆಗಳಿಗೆ ಹೋಲಿಸಿದರೆ ಲೂಕನ ಸುವಾರ್ತೆಯಲ್ಲಿ ಸ್ತುತಿ ಮತ್ತು ಪ್ರಾರ್ಥನೆಯ ಬಗ್ಗೆ ಹೆಚ್ಚು ವಾಕ್ಯಗಳನ್ನು ನೋಡಬಹುದಾಗಿದೆ. ಕೀರ್ತನೆ 33:1-3ರಲ್ಲಿ ಸ್ತುತಿಯ ಬಗ್ಗೆ ಕೊಡಲಾಗಿರುವ ನೋಟ್ಸ್ ನೋಡಿರಿ. **47**

**1:47** ಮರಿಯಳು ದೇವರನ್ನು ತನ್ನ "ರಕ್ಷಕ" ಎಂದು ಕರೆಯುವದನ್ನು ಗಮನಿಸಿರಿ. ಮೆಸ್ಸೀಯನಿಗೆ ತಾಯಿಯಾಗುವ ವಿಶೇಷ ಗೌರವ ಆಕೆಗೆ ದೊರೆಯಿತಾದರೂ, ಎಲ್ಲಾ ಮಾನವರ ಹಾಗೆ ತನಗೂ ರಕ್ಷಕನು ಬೇಕು ಎಂಬದನ್ನು ಆಕೆ ಮನವರಿಕೆ ಮಾಡಿಕೊಂಡಿದ್ದಳು. ಹೊಸ ಒಡಂಬಡಿಕೆಯಲ್ಲಿ "ರಕ್ಷಕ" ಎಂಬದಾಗಿ ಬರೆಯಲ್ಪಟ್ಟಿರುವದು ಇದೇ ಮೊದಲು. ಇದರ ಅರ್ಥ "ಬಿಡುಗಡೆದಾಯಕನು ಮತ್ತು ಕಾಪಾಡುವಾತನು" – ಅಂದರೆ ಜನರನ್ನು ಅವರ ಪಾಪಗಳಿಂದ ಬಿಡಿಸಿ ಅವರನ್ನು ಸುರಕ್ಷಿತವಾಗಿ ಕಾಪಾಡುವಾತನು. **48**

**1:48** 28,30,42 ವಚನಗಳು. **49**

**1:49** ಕೀರ್ತನೆ 71:19. ದೇವರ ಪರಿಶುದ್ಧತೆಯ ಬಗ್ಗೆ ತಿಳಿಯಲು ಯಾಜಕ 20:7; ಯೆಶಾಯ 6:3 ನೋಡಿರಿ. **50**

**1:50** ದೇವರ ಭಯದ ಬಗ್ಗೆ ತಿಳಿಯಲು ಆದಿ 20:11; ಕೀರ್ತನೆ 34:11-14; 111:10; ಜ್ಞಾನೋ 1:7ರ ನೋಟ್ಸ್ ನೋಡಿರಿ. **51**

**1:51** ಕೀರ್ತನೆ 98:1; ಯೆಶಾಯ 40:10. ದೇವರು ಆತ್ಮಸ್ವರೂಪನು (ಯೋಹಾನ 4:24) ಆತನಿಗೆ ಶಾರೀರಿಕ ಹಸ್ತವಿಲ್ಲ. ಇದು ಪದ್ಯಭಾಷೆಯಾಗಿದ್ದು ದೇವರ ಶಕ್ತಿಯನ್ನು ವಿವರಿಸುತ್ತದೆ. ದೇವರು ಗರ್ವಿಷ್ಠರನ್ನು ಹೇಗೆ ಕೆಳಕ್ಕೆ ಹಾಕುತ್ತಾನೆ ಎಂಬದನ್ನು ಗಮನಿಸಿರಿ – ವಿಮೋ 18:11; 2 ಸಮು 22:28; ಕೀರ್ತನೆ 31:23; 94:2; 138:6; ಜ್ಞಾನೋ 16:5; ಯೆಶಾಯ 2:12-18; ಯೆರೆ 13:9; 49:16; ಯಾಕೋಬ 4:6. **52**

- **1:52** 1 ಸಮು 2:7-8; ಮತ್ತಾಯ 23:12. **53**

- **1:53** 1 ಸಮು 2:5; ಕೀರ್ತನೆ 107:9; 81:10,16; ಮತ್ತಾಯ 5:6. **55**

**1:55** ಪರಿವರ್ತನೆ, ಪ್ರಾರ್ಥನೆ ಮತ್ತು ದೇವರ ವಾಕ್ಯಗಳ ಅಧ್ಯಯನದಲ್ಲಿ ಅವರು ಒಟ್ಟಾಗಿ ಅತ್ಯುತ್ತಮವಾದ ಅನ್ಯೋನ್ಯತೆಯಲ್ಲಿದ್ದರು! **59**

**1:59** ಆದಿ 17:9-14 ರಲ್ಲಿ ಸುನ್ನತಿಯ ಕುರಿತು ನೋಟ್ಸ್ ನೋಡಿರಿ. **60**

**1:60** ವಚನ 13. **64**

**1:64** ನಂಬಿಕೆ ಮತ್ತು ವಿಧೇಯತೆಯು ಅಪನಂಬಿಕೆಯಿಂದ ಮುಚ್ಚಲ್ಪಟ್ಟಿದ್ದ ಬಾಯಿಯನ್ನು ತೆರೆದವು (ವ 20). **66**

**1:66** ವಚನ 51; ಆದಿ 39:2; ಅಪೊ 11:21. **67**

**1:67** ವಚನಗಳು 15,35,41. ಮತ್ತಾಯ ಮತ್ತು ಮಾರ್ಕನ ಸುವಾರ್ತೆಯನ್ನು ಒಟ್ಟು ಸೇರಿಸುವಾಗ ಪವಿತ್ರಾತ್ಮನ ಬಗ್ಗೆ ದೊರೆಯುವಷ್ಟು ವಚನಗಳನ್ನು ಲೂಕನ ಸುವಾರ್ತೆ ಒಂದರಲ್ಲಿಯೇ ನಾವು ನೋಡಬಹುದಾಗಿದೆ. ದೇವರಾತ್ಮನ ಪ್ರೇರಣೆಯುಳ್ಳವನಾಗಿ ಜಕರೀಯನು ಭವಿಷ್ಯದ ಬಗ್ಗೆ ಪ್ರವಾದಿಸಿದನು ಮತ್ತು ಇನ್ನೂ ನೆರವೇರಿರದ ಸತ್ಯವನ್ನು ಮುಂದಾಗಿ ತಿಳಿಸಿದನು. ಆದಿ 20:7; ಸಂಖ್ಯಾ 11:25ರಲ್ಲಿ ಪ್ರವಾದನೆಯ ಕುರಿತಾದ ನೋಟ್ಸ್ ನೋಡಿರಿ. **68**

**1:68** *"ಬಿಡುಗಡೆ"*– ಮತ್ತಾಯ 20:28; ಕೀರ್ತನೆ 78:35ರ ನೋಟ್ಸ್ ನೋಡಿರಿ. ಹಾಗೆಯೇ ರೋಮಾ 9:24; 1 ಕೊರಿಂಥ 1:30; ಗಲಾ 4:5; ಎಫೆ 1:7; ಕೊಲೊ 1:14; ತೀತ 2:14; ಇಬ್ರಿ 9:12; 1 ಪೇತ್ರ 1:18; ಪ್ರಕ 5:9 ಸಹ ನೋಡಿರಿ. **69**

**1:69** 1 ಸಮು 2:1ರಲ್ಲಿ ಕೊಂಬಿನ ಕುರಿತು; ವ 32 ಮತ್ತು ಮತ್ತಾಯ 1:1ರಲ್ಲಿ ದಾವೀದನ ಮನೆತನದ ಕುರಿತು ನೋಟ್ಸ್ ನೋಡಿರಿ.

*"ರಕ್ಷಣೆ"*– 19:9; ಅಪೊ 4:12; ರೋಮಾ 1:16. **70**

**1:70** ಉದಾಹರಣೆಗೆ, ಯೆಶಾಯ 9:6-7; ಯೆರೆ 23:5. **71**

**1:71** ಇದು ಹಳೆ ಒಡಂಬಡಿಕೆಯ ಭಾಷೆಗೆ ಸಮಾನವಾದದ್ದಾಗಿದೆ. ಕೀರ್ತನೆ 3:7ರಲ್ಲಿ ವೈರಿಗಳ ಕುರಿತಾದ ನೋಟ್ಸ್ ನೋಡಿರಿ. ಇತರೆ ಮಾನವರಿಗಿರುವದಕ್ಕಿಂತ ದೇವಜನರಿಗೆ

ವಿಪರೀತ ವೈರಿಗಳಿರುತ್ತಾರೆ. ಎಫೆ 6:10-12; 1 ಪೇತ್ರ 5:8 ನೋಡಿರಿ. ಅಂಥವರೆಲ್ಲರಿಂದಲೂ ಕರ್ತನು ತನ್ನ ಜನರನ್ನು ಕಾಪಾಡುತ್ತಾನೆ. **72**

- **1:72** ಆದಿ 22:16-18; ಕೀರ್ತನೆ 105:8-9; 106:45; ಯೆಹೆಜ್ಕೇಲ 16:60; ಮೀಕ 7:20. **74-75**

**1:74-75** ಇದು ಬಿಡುಗಡೆಯನ್ನುಂಟುಮಾಡುವ ದೇವರ ಚಿರಕಾಲದ ಉದ್ದೇಶವಾಗಿದೆ. ಮನಃಪೂರ್ವಕವಾಗಿ, ಪ್ರೀತಿಯಿಂದ ಎಲ್ಲಾ ದಿವಸಗಳು ಆತನ ಸೇವೆ ಮಾಡುವ ಪರಿಶುದ್ಧ ಜನರು ಆತನಿಗೆ ಬೇಕಾಗಿದ್ದಾರೆ. ಹೀಗೆ ಜೀವಿಸಲು ನಮಗೆ ಬೇಕಾಗಿರುವವುಗಳನ್ನೆಲ್ಲಾ ಆತನು ಕ್ರಿಸ್ತನ ಮೂಲಕ ನಮಗೆ ಒದಗಿಸಿದ್ದಾನೆ. 2 ಪೇತ್ರ 1:3-4ರೊಂದಿಗೆ ಹೋಲಿಸಿ ನೋಡಿರಿ. **76**

**1:76** *"ಪ್ರವಾದಿ"*– ಪದವನ್ನು 32ನೇ ವಚನದಲ್ಲಿ ಕ್ರಿಸ್ತನ ಬಗ್ಗೆ ಹೇಳಾಗಿರುವ ವಿಷಯದೊಂದಿಗೆ ಹೋಲಿಸಿ ನೋಡಿರಿ. ಯೋಹಾನನ ಸೇವೆ ಏನಾಗಿತ್ತು ಎಂಬದನ್ನು ತಿಳಿದುಕೊಳ್ಳಿರಿ – ವ 14-17; ಮತ್ತಾಯ 3:1-6. **77**

**1:77** ಪಾಪಕ್ಷಮಾಪಣೆ ಇಲ್ಲದೆ ರಕ್ಷಣೆಯಿಲ್ಲ ಮತ್ತು ರಕ್ಷಣೆಯ ಕುರಿತಾದ ನಿಜವಾದ ತಿಳುವಳಿಕೆಯೂ ಇರುವದಿಲ್ಲ. ಮತ್ತಾಯ 6:12; 9:5-7; 12:31; 18:23-25ರಲ್ಲಿ ಪಾಪ ಕ್ಷಮಾಪಣೆಯ ಕುರಿತು ನೋಟ್ಸ್ ಮತ್ತು ರೆಫರೆನ್ಸ್ ಕೊಡಲಾಗಿದೆ. **78**

**1:78** ಪಾಪಕ್ಷಮಾಪಣೆಯನ್ನು ಮಾನವರು ಎಂದಿಗೂ ಸಂಪಾದಿಸಿಕೊಳ್ಳಲಾರರು. ಅದು ದೇವರ ಕೃಪೆಯಿಂದ ದೊರೆಯುತ್ತದೆ ಯಾಕಂದರೆ ಆತನು ಕರುಣೆಯುಳ್ಳವನಾಗಿದ್ದಾನೆ. ಇಲ್ಲಿ ಕರ್ತನಾದ ಯೇಸು ಕ್ರಿಸ್ತನನ್ನು ಪರಲೋಕದ ಸೂರ್ಯನಿಗೆ ಹೋಲಿಸಲಾಗಿದೆ. ಬೇರೆ ಸ್ಥಳಗಳಲ್ಲಿ ಆತನನ್ನು ನಕ್ಷತ್ರ ಅಥವಾ ಬೆಳಕಿಗೆ ಹೋಲಿಸಲಾಗಿದೆ – ಸಂಖ್ಯಾ 24:17; ಯೆಶಾಯ 9:2; 60:1-3; ಮಲಾಕಿ 4:2; ಯೋಹಾನ 8:12; 2 ಪೇತ್ರ 1:19; ಪ್ರಕ 22:16. ಕರ್ತನಾದ ಯೇಸು ಕ್ರಿಸ್ತನು ಮಾನವರನ್ನು ರಕ್ಷಿಸಲು ಪರಲೋಕದಿಂದ ಬಂದನು (ಯೋಹಾನ 3:13; 6:38; 8:23). **79**

**1:79** ಯೆಶಾಯ 9:2; 59:9-10; ಮತ್ತಾಯ 4:16. ಮಾನವರಿಗೆ ಬೆಳಕು, ನಿರೀಕ್ಷೆ ಇಲ್ಲದಿರುವಾಗ, ಕತ್ತಲೆ ಮತ್ತು ಮರಣದಿಂದ ತಪ್ಪಿಸಿಕೊಳ್ಳುವ ಮಾರ್ಗ ಗೊತ್ತಿಲ್ಲದಿರುವಾಗ, ಯೇಸು ಕ್ರಿಸ್ತನು ಬಂದು ಬೆಳಕು ಮತ್ತು ಸಮಾಧಾನ

ಉಂಟುಮಾಡಿದನು. ಸಮಾಧಾನ ಸುವಾರ್ತಾ ಸಂಗೀತದ ಸುಮಧುರವಾದ ನೋಟ್ಸ್ ಆಗಿದೆ – 2:14; ಯೋಹಾನ 14:27; 16:33; ಅಪೊ 10:36; ರೋಮಾ 5:1; 14:17; 15:13,33; ಎಫೆ 2:14. ದೇವರಾತ್ಮನ ಪ್ರೇರಣೆಯಿಂದ ಜಕರೀಯನು ಯೇಸು ಕ್ರಿಸ್ತನ ಜೀವಿತ ಮತ್ತು ಕಾರ್ಯದ ಎರಡು ಅದ್ಭುತವಾದ ಕಾರ್ಯಗಳ ಬಗ್ಗೆ ತಿಳಿಸಿದನು – ಆತ್ಮೀಕ ಬೆಳಕು ಮತ್ತು ಸಮಾಧಾನ. **80**

**1:80** 30 ವರ್ಷದ ತನಕ ಯೋಹಾನನು, ಸಾಧಾರಣ ಮನುಷ್ಯರ ಹಾಗೆ ಜೀವಿಸದವನಾಗಿದ್ದನು (ಮತ್ತಾಯ 3:4). ಅವನಷ್ಟು ಶ್ರೇಷ್ಠರು ಯಾರೂ ಇರಲಿಲ್ಲ (ಮತ್ತಾಯ 11:11). ಆದರೆ ಅವನು ಆತ್ಮದಲ್ಲಿ ಬಲವುಳ್ಳವನಾಗಿದ್ದ ಹಾಗೆಯೇ ವಿಶ್ವಾಸಿಗಳೆಲ್ಲವೂ ಆತ್ಮದಲ್ಲಿ ಬಲವುಳ್ಳವರಾಗಿರಬಹುದು (ಎಫೆ 3:16).

# 21

**2:1** ಆ ಕಾಲದಲ್ಲಿ ಅತ್ಯಂತ ಬಲಿಷ್ಠ ಸಾಮ್ರಾಜ್ಯವಾಗಿದ್ದ – ರೋಮನ್ ಸಾಮ್ರಾಜ್ಯಕ್ಕೆ ಔಗುಸ್ತನು ಚಕ್ರವರ್ತಿಯಾಗಿದ್ದನು. ಆಗಿನ ಕಾಲದಲ್ಲಿ "ರಾಜ್ಯವೆಲ್ಲಾ (ಇಡೀ ಲೋಕವೆಲ್ಲಾ)" ಎಂಬದಾಗಿ ಕರೆಯುವದು ಸಾಮಾನ್ಯವಾಗಿತ್ತು.

*"ಬರೆಸಿಕೊಳ್ಳುವದು"*– ಇದು ಗ್ರೀಕ್ ಪದದಿಂದ ಬಂದಿರುವ ಪದವಾಗಿದ್ದು ಇದರ ಅರ್ಥ ಖಾನೇಷುಮಾರಿ ಬರೆಸಿಕೊಳ್ಳುವದಾಗಿದೆ. **4**

**2:4** ಮತ್ತಾಯ 3:1-6 ನೋಡಿರಿ. ಇಸ್ರಾಯೇಲ್ಯರ ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಜನಿಸುವನು (ಮೀಕ 5:2). ಮರಿಯಳು ಮತ್ತು ಯೋಸೇಫನನ್ನು ಯೇಸು ಕ್ರಿಸ್ತನು ಜನಿಸಬೇಕಾಗಿದ್ದ ಬೆತ್ಲೆಹೇಮಿಗೆ ಕರೆತರಲು ದೇವರು ರೋಮನ್ ಚಕ್ರವರ್ತಿಯ ಆಜ್ಞೆಯನ್ನು ಬಳಸಿಕೊಂಡನು. ತನ್ನ ಉದ್ದೇಶಗಳನ್ನು ನೆರವೇರಿಸಲು ದೇವರು ಜೀವಿತದ ಎಲ್ಲಾ ಪರಿಸ್ಥಿತಿಗಳನ್ನು ಉಪಯೋಗಿಸಿಕೊಳ್ಳುತ್ತಾನೆ.

*"ಬೆತ್ಲೆಹೇಮ್"*– ಇದು ಇಬ್ರಿಯ ಪದವಾಗಿದ್ದು ಇದರ ಅರ್ಥ "ರೊಟ್ಟಿಯ ಮನೆ." ಅಲ್ಲಿಂದಲೇ "ಜೀವದ ರೊಟ್ಟಿಯಾಗಿರುವಾತನು" ಬಂದನು (ಯೋಹಾನ 6:35). ದಾವೀದನಿಗೆ ಪ್ರಾಮುಖ್ಯತೆ ಕೊಡಲಾಗಿರುವದನ್ನು ಗಮನಿಸಿರಿ – 1:27,32,69; 2:4-11. ಮತ್ತಾಯ 1:1 ರ ನೋಟ್ ನೋಡಿರಿ. **5**

- **2:5** 1:27,35; ಮತ್ತಾಯ 1:18 ನೋಡಿರಿ. **7**

**2:7** ಪರಲೋಕದ ಮಹಾ ಅರಸನಾಗಿರುವ, ದೇವಕುಮಾರನ ಮೊದಲನೆಯ ವಿಶ್ರಾಂತಿ ಸ್ಥಳ ಇದಾಗಿತ್ತು. ಅದು ಆತನ ಸ್ವಂತ ಆಯ್ಕೆಯಾಗಿದ್ದು ಮತ್ತು ತಂದೆಯಾದ ದೇವರೂ ಅದನ್ನೇ ಬಯಸಿದನು. ಮತ್ತಾಯ 11:29; ಫಿಲಿಪ್ಪಿ 2:5-8ರಲ್ಲಿ ಆತನ ಸ್ವಭಾವವನ್ನು ಪ್ರಕಟಪಡಿಸಲಾಗಿದೆ. (ಆತನು ನಮ್ಮ ಮಾದರಿಯಾಗಿದ್ದಾನೆ, ಆತನಲ್ಲಿದ್ದ ಮನಸ್ಥಿತಿಯೇ ನಮ್ಮಲ್ಲಿಯೂ ಇರಬೇಕು). ಬೆತ್ಲೆಹೇಮ್ ಚಿಕ್ಕ ಪಟ್ಟಣವಾಗಿತ್ತು. ಉಳಿದುಕೊಳ್ಳಲು ಅಷ್ಟೊಂದು ಸ್ಥಳವಿರಲಿಲ್ಲ, ಖಾನೇಷುಮಾರಿ ಬರೆಸಿಕೊಳ್ಳಲು ಎಲ್ಲಾ ಭಾಗಗಳಿಂದ ಬಹಳಷ್ಟು ಜನ ಸೇರಿ ಬಂದಿದ್ದರು. ಆದರೆ ಯೇಸು ಕ್ರಿಸ್ತನ ಜೀವನ ಪರ್ಯಂತರ ಆತನಿಗೆ ಎಲ್ಲಿಯೂ ಸ್ಥಳವೇ ಇರಲಿಲ್ಲ – ಲೂಕ 4:29; ಮತ್ತಾಯ 2:13; 8:20; ಯೋಹಾನ 1:11; 19:15. **8**

**2:8** ದೇವರು ಭೂಲೋಕದ ಮೇಲೆ ತನ್ನ ಮಗನ ಜನನವನ್ನು ಪ್ರಕಟಪಡಿಸುವಾಗ (ಆ ಸಮಯಕ್ಕೆ ಅದು ಲೋಕದಲ್ಲಿಯೇ ಅತ್ಯಂತ ಶ್ರೇಷ್ಠವಾದ ಕಾರ್ಯವಾಗಿ ಚರಿತ್ರೆಯಲ್ಲಿ ಉಳಿದುಕೊಂಡಿದೆ) ಆಗಿನ ಸಮಯದಲ್ಲಿದ್ದ ಧಾರ್ಮಿಕ ನಾಯಕರು, ಪ್ರಭಾವಿಗಳು, ವಿದ್ಯಾವಂತರು ಅಥವಾ ಐಶ್ವರ್ಯವಂತರು ಎಲ್ಲರನ್ನೂ ಕಡೆಗಣಿಸಿ, ಲೋಕವನ್ನು ಬದಲಾಯಿಸುವ ಘಟನೆಯನ್ನು ಪ್ರಕಟಪಡಿಸಲು ಬಡವರು ಮತ್ತು ದೀನರಾಗಿದ್ದ ಕುರುಬರನ್ನು ಆರಿಸಿಕೊಂಡನು. 1 ಕೊರಿಂಥ 1:26-29; ಯೆಶಾಯ 57:15; 66:2ರೊಂದಿಗೆ ಹೋಲಿಸಿ ನೋಡಿರಿ. ದೇವರ ಮಾರ್ಗಗಳು ನಮ್ಮ ಮಾರ್ಗಗಳಂತಲ್ಲ (ಯೆಶಾಯ 55:8-9), ಅವುಗಳು ನಮ್ಮ ಮಾರ್ಗಗಳಂತಲ್ಲವಾದ್ದರಿಂದ ನಾವು ಸಂತೋಷಿಸಬೇಕು. ನಾವು ಆತನಿಂದ ಕಲಿತುಕೊಳ್ಳಬೇಕು ಮತ್ತು ಆತನ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಬೇಕು. ಯೇಸು ಕ್ರಿಸ್ತನು ಕುರಿಗಳಿಗೆ ಹಿರಿಕುರುಬನಾಗಿರಲು ಜನಿಸಿದನು (ಯೋಹಾನ 10:11; ಇಬ್ರಿ 13:20). ಆತನ ಜನನವನ್ನು ಮೊದಲು ಕುರುಬರಿಗೆ ಪ್ರಕಟಿಸುವದು ಯುಕ್ತವೆಂದು ತೋರುತ್ತದೆ. **9**

**2:9** *“ಕರ್ತನ ದೂತನು”*– ಮತ್ತಾಯ 1:20ರ ನೋಟ್ ನೋಡಿರಿ.

*“ಮಹಿಮೆ”*– ದೇವರ ಪ್ರಭಾವವು ಬಹುಬೇಗನೇ ಕ್ರಿಸ್ತನಲ್ಲಿ ಕಾಣಿಸಿಕೊಳ್ಳುವದಾಗಿತ್ತು (ದೇವರ ಪ್ರಭಾವ ಯಾರು – ಇಬ್ರಿ 1:3; ಯೋಹಾನ 1:14), ಮತ್ತು ಆತನ ಕೃಪೆಯ

ಕೃಪಾರ್ಥವಾದ ಸುವಾರ್ತೆಯಲ್ಲಿ ಪ್ರಕಟವಾಗುವದಾಗಿತ್ತು (1 ತಿಮೊ 1:11). ಆತನ ಜನನದ ಪ್ರಕಟನೆಗೆ ಕರ್ತನ ಪ್ರಭಾವ ಪ್ರಕಟಗೊಳ್ಳದಿರುವದು ಹೇಗೆ? ಉಜ್ವಲವಾದ ಮತ್ತು ಪ್ರಕಾಶಿಸುವ ಘಟನೆಯನ್ನು ಯುಕ್ತವಾದ ರೀತಿಯಲ್ಲಿ ಪ್ರಕಟಿಸಬೇಕಾಗಿತ್ತು. 10

**2:10** *"ಶುಭಸಮಾಚಾರ"*– ಲೋಕವು ಎಂದೂ ಕೇಳರಿಯದ ಉತ್ತಮವಾದ ಸಂದೇಶವನ್ನು ತಿಳಿಸಲು ದೇವದೂತನು ಬಂದನು. ಸಾವಿರಾರು ವರ್ಷಗಳ ಪಾಪ ಮತ್ತು ಶ್ರಮೆಗಳು, ಎದುರುನೋಡುವಿಕೆ ಮತ್ತು ಕಾಯುವಿಕೆಯ ನಂತರ, ಮಾನವ ಕುಲದ ರಕ್ಷಕನು ಜನಿಸಿದನು. ನಿಜವಾದ ಸಂತೋಷದ ಮಾರ್ಗ, ನಿಜವಾದ ಮತ್ತು ಪರಿಶುದ್ಧವಾದ ಸಂತೋಷದ ಮೂಲ, ಶಾಶ್ವತವಾದ ಸಂತೋಷ ಕಡೆಗೂ ಪ್ರತ್ಯಕ್ಷವಾಯಿತು. ಆತನಲ್ಲಿ ನಂಬಿಕೆಯಿಟ್ಟಿರುವವರು ಆ ಸಂತೋಷವನ್ನು ಈಗ ತಕ್ಕ ಮಟ್ಟಿಗೆ ತಿಳಿದವರಾಗಿದ್ದಾರೆ ಮತ್ತು ನಿತ್ಯತ್ವದಲ್ಲಿ ಪೂರ್ಣವಾಗಿ ಅದರಲ್ಲಿ ಭಾಗಿಯಾಗುತ್ತಾರೆ (ಯೋಹಾನ 15:11; 17:13; ರೋಮಾ 14:17; 15:13; ಫಿಲಿಪ್ಪಿ 4:4; 1 ಪೇತ್ರ 1:8). 11

**2:11** ಮತ್ತಾಯ 1:21; ಅಪೊ 4:12; 1 ಯೋಹಾನ 4:14. ಹೊಸ ಒಡಂಬಡಿಕೆಯಲ್ಲಿ 16 ಸಾರಿ ಯೇಸು ಕ್ರಿಸ್ತನನ್ನು ರಕ್ಷಕನು ಎಂದು ಕರೆಯಲಾಗಿದೆ (1:47 ನೋಡಿರಿ). ಮತ್ತಾಯ 1:1 ರಲ್ಲಿ ಯೇಸು ಕ್ರಿಸ್ತನ ಕುರಿತಾದ ನೋಟ್ ನೋಡಿರಿ.

*"ಕರ್ತನು"*– ದೇವದೂತನು ಯೇಸು ಕ್ರಿಸ್ತನನ್ನು ಏನೆಂದು ಕರೆದನೆಂಬದನ್ನು ಗಮನಿಸಿರಿ. ಹಾಗೆಯೇ 1:43; ಮತ್ತಾಯ 22:41-45; ಅಪೊ 2:36; 1 ಕೊರಿಂಥ 8:6; ಫಿಲಿಪ್ಪಿ 2:10-11; ಎಫೆ 4:5 ನೋಡಿರಿ. "ಕುರಿಯೋಸ್" ಎಂಬದು ಇದರ ಗ್ರೀಕ್ ಪದವಾಗಿದೆ. ಹಳೆಯ ಒಡಂಬಡಿಕೆಯಲ್ಲಿ ದೇವರಿಗೆ ಅತ್ಯಂತ ಸಾಮಾನ್ಯವಾಗಿ ಉಪಯೋಗಿಸಲಾಗಿರುವ ಯೆಹೋವ ಎಂಬ ಹೆಸರನ್ನು ಹೊಸ ಒಡಂಬಡಿಕೆಯಲ್ಲಿ ಭಾಷಾಂತರ ಮಾಡುವಾಗ ಈ ಪದವನ್ನು ಉಪಯೋಗಿಸಲಾಗಿದೆ. ವಿಮೋ 3:14-15ರ ನೋಟ್ಸ್ ನೋಡಿರಿ. ಹೊಸ ಒಡಂಬಡಿಕೆಯಲ್ಲಿ ನೂರಾರು ಸಾರಿ ಯೇಸು ಕ್ರಿಸ್ತನನ್ನು ಕರ್ತನು (ಕುರಿಯೋಸ್) ಎಂದು ಕರೆಯಲಾಗಿದೆ. ಆತನು ಕರ್ತರ ಕರ್ತನಾಗಿದ್ದಾನೆ (ಪ್ರಕ 19:16), ಮತ್ತು ಇಡೀ ಸತ್ಯವೇದವು ಆತನ ನಾಮದಲ್ಲಿ ಆಶೀರ್ವದಿಸುವ ಮೂಲಕ ಕೊನೆಗೊಳ್ಳುತ್ತದೆ (ಪ್ರಕ 22:21). ಯೆಹೋವ ದೇವರು ಯೇಸು ಕ್ರಿಸ್ತನಾಗಿ ನಮ್ಮ ಮಧ್ಯದಲ್ಲಿ ಜನಿಸಿ ಬಂದನು ಎಂಬದಾಗಿ ಈ

ವಚನಗಳು ತಿಳಿಸುತ್ತವೆ: ಮತ್ತಾಯ 3:3; 23:37; ಯೋಹಾನ 8:24-25,58; 10:11; 12:41; ಅಪೊ 2:21; ರೋಮಾ 10:9-10,13; 1 ಕೊರಿಂಥ 1:31; 2:8; 10:4; ಎಫೆ 4:10; ಫಿಲಿಪ್ಪಿ 2:10-11; ತೀತ 2:13; ಇಬ್ರಿ 1:10-12; ಯೂದ 5; ಪ್ರಕ 19:16. ಯೇಸು ಕ್ರಿಸ್ತನು ದೇವರಾಗಿದ್ದಾನೆಂದು ಸೂಚಿಸುವ ಇತರೆ ವಚನಗಳು ಫಿಲಿಪ್ಪಿ 2:6. ಹಳೆಯ ಒಡಂಬಡಿಕೆಯಲ್ಲಿ ಆದಿ 16:7; ವಿಮೋ 3:14; ಕೀರ್ತನೆ 23:1; 24:7-10; 96:10-13; ಯೆಶಾಯ 6:1; 9:6; ಜೆಕರ್ಯ 12:10ರ ನೋಟ್ಸ್ ನೋಡಿರಿ. **13**

**2:13** ಪರಲೋಕದ ಆಸಕ್ತಿಯನ್ನು ಕೆರಳಿಸಿದ ಘಟನೆ, ಖಂಡಿತವಾಗಿಯೂ ನಮ್ಮ ಆಸಕ್ತಿ ಮತ್ತು ಸ್ತುತಿಯನ್ನು ಕೆರಳಿಸಬೇಕಾಗಿದೆ. **14**

**2:14** ದೇವರ ಪ್ರಭಾವವು ಎಲ್ಲವುಗಳ ವಿಷಯದಲ್ಲಿ ಉನ್ನತವಾದ ಉದ್ದೇಶಗಳನ್ನು ಹೊಂದಿರುತ್ತದೆ (ಕೀರ್ತನೆ 19:1; 29:1-2; ಯೆಶಾಯ 42:8; 43:7; 1 ಕೊರಿಂಥ 10:31; ಪ್ರಕ 4:11), ಇದರಲ್ಲಿ ಯೇಸು ಕ್ರಿಸ್ತನು ಬಂದ ಉದ್ದೇಶವನ್ನೂ ನಾವು ನೋಡಬಹುದಾಗಿದೆ (ಯೋಹಾನ 17:4). ಯೇಸು ಕ್ರಿಸ್ತನ ಜನನ ದೇವರಿಗೆ ಮಹದಾದ ಪ್ರಭಾವವನ್ನುಂಟು ಮಾಡಿತು ಎಂಬದನ್ನು ನಾವು ಗುರುತಿಸಿಕೊಳ್ಳಬೇಕು. ಇಲ್ಲಿ ಕ್ರಮವನ್ನು ಗಮನಿಸಿರಿ – ದೇವರು ಮೊದಲು, ನಂತರ ಜನರು. ಮಾನವರಿಗೆ ಸಮಾಧಾನವನ್ನುಂಟು ಮಾಡುವ ಮೂಲಕ ಯೇಸು ಕ್ರಿಸ್ತನು ದೇವರಿಗೆ ಪ್ರಭಾವವನ್ನುಂಟು ಮಾಡಿದನು.

*"ದೇವರು ಅವರಿಗೆ ಒಲಿಯುತ್ತಾನೆ"*– ಗ್ರೀಕ್ ಪದವನ್ನು ಇಲ್ಲಿ ವಿವಿಧ ರೀತಿಯಲ್ಲಿ ಭಾಷಾಂತರ ಮಾಡಲಾಗಿದೆ, ಅಂದರೆ "ಆತನು ಮೆಚ್ಚುವ ಜನರ ನಡುವೆ" ಸಮಾಧಾನ, "ಆತನ ದಯೆ ದೊರೆಯುವ ಜನರಿಗೆ ಸಮಾಧಾನ." ದೇವಕುಮಾರನನ್ನು ಕರ್ತನು ಹಾಗೂ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವವರಿಗೆ ಸಮಾಧಾನ ದೊರೆಯುತ್ತದೆ ಮತ್ತು ಅವರು ಆತನ ದಯೆ ಹಾಗೂ ರಕ್ಷಣೆಯನ್ನು ಹೊಂದುವರು ಎಂಬದಾಗಿ ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಹೇಳುತ್ತದೆ (1:79). **17**

**2:17** ಯೇಸು ಕ್ರಿಸ್ತನ ಜನನ ಶುಭವಾರ್ತೆಯನ್ನು ಮೊದಲು ದೇವದೂತನು ಸಾರಿದನು ನಂತರ ದೀನರಾದ ಕುರುಬರು ಸಾರಿದರು. **20**

**2:20** ಲೂಕನ ಸುವಾರ್ತೆಯು ಸಂಪೂರ್ಣವಾಗಿ ದೇವಸ್ತೋತ್ರದ ವಿಷಯಗಳನ್ನು

ತಿಳಿಸುತ್ತದೆ – 1:46,64; 2:13,28; 5:25-26; 7:16; 13:13; 17:15,18; 18:43; 19:37; 23:47; 24:53. ಕೀರ್ತನೆ 33:1-3ರಲ್ಲಿ ಸ್ತುತಿಯ ಕುರಿತು ಕೊಟ್ಟಿರುವ ನೋಟ್ಸ್ ನೋಡಿರಿ. ಕುರುಬರು ಯಾಕೆ ದೇವರನ್ನು ಸ್ತುತಿಸಿದರು ಎಂಬದಕ್ಕೆ ಒಂದು ಕಾರಣವನ್ನು ತಿಳಿದುಕೊಳ್ಳಿರಿ. ದೇವರು ನಮಗೆ ಹೇಳುವ ಕಾರ್ಯಗಳೆಲ್ಲವೂ ಹಾಗೆಯೇ ಆಗುವವು ಎಂಬ ದೃಢತೆಯಲ್ಲಿ ನಾವಿರಬಹುದು (ಕೀರ್ತನೆ 31:5; ತೀತ 1:2). **21**

**2:21** *"ಸುನ್ನತಿ"*– ಆದಿ 17:9-14 ನೋಡಿರಿ. ಕರ್ತನಾದ ಯೇಸು ಕ್ರಿಸ್ತನು ಅಬ್ರಹಾಮನ ಸಂತತಿಯವಳೂ, ಇಸ್ರಾಯೇಲ್ಯಳೂ ಆಗಿದ್ದಾಕೆಯಲ್ಲಿ ಜನಿಸಿದನು, ಆದ್ದರಿಂದ ಇಸ್ರಾಯೇಲಿನ ಎಲ್ಲಾ ಗಂಡು ಮಕ್ಕಳ ಹಾಗೆ ಆತನಿಗೂ ಸುನ್ನತಿ ಮಾಡಿಸಲಾಯಿತು. **22**

**- 2:22** ಯಾಜಕ 12:2-8. **23**

**- 2:23** ವಿಮೋ 13:2,12,15; ಸಂಖ್ಯಾ 3:13. **24**

**2:24** ಈ ಕಾಣಿಕೆಯನ್ನು ಯೇಸು ಕ್ರಿಸ್ತನಿಗಾಗಿ ಮಾತ್ರವಲ್ಲ ಬದಲಾಗಿ ಮರಿಯಳಿಗಾಗಿಯೂ ಅರ್ಪಿಸಲಾಯಿತು. ಆಕೆ ಮತ್ತು ಯೋಸೇಫನು ಬಡವರಾಗಿದ್ದರು ಮತ್ತು ಅಧಿಕ ಬೆಲೆಯುಳ್ಳ ಕಾಣಿಕೆ ಕೊಡಲು ಅವರು ಶಕ್ತರಾಗಿರಲಿಲ್ಲ ಎಂಬದನ್ನು ಇದು ಪ್ರಕಟಪಡಿಸುತ್ತದೆ. ಯಾಜಕ 12:8 ನೋಡಿರಿ. **25**

**2:25** ಆತನು ವಾಗ್ದಾನ ಮಾಡಲ್ಪಟ್ಟಿದ್ದ ಮೆಸ್ಸೀಯನ ಬರೋಣವನ್ನು ಎದುರುನೋಡುತ್ತಿದ್ದನು. ಯೆಶಾಯ 40:1-2ರೊಂದಿಗೆ ಹೋಲಿಸಿ ನೋಡಿರಿ.

*"ಪವಿತ್ರಾತ್ಮನು"*– ವಚನ 26,27; 1:15,35,41,67. ಪವಿತ್ರಾತ್ಮನು ಬಂದು ಪಂಚಾಶತ್ತಮ ದಿನದಂದು ವಿಶ್ವಾಸಿಗಳನ್ನು ತುಂಬಿಸುವ ಮೊದಲು ಮಾಡಿದ ಈ ಎಲ್ಲಾ ಕಾರ್ಯಗಳನ್ನು ಗಮನಿಸಿರಿ. **27**

**2:27** ವಚನಗಳು 22-24. **29**

**2:29** ವಚನ 26. **30**

**2:30** ತನ್ನ ಜನರಿಗೆ ರಕ್ಷಣೆಯನ್ನುಂಟು ಮಾಡುವನೆಂದು ಹಳೆಯ ಒಡಂಬಡಿಕೆಯಲ್ಲಿ ವಾಗ್ದಾನ ಮಾಡಲ್ಪಟ್ಟಿರುವ ರಕ್ಷಕನಾದ ಮೆಸ್ಸೀಯನೇ ಯೇಸು ಕ್ರಿಸ್ತನು ಎಂಬದನ್ನು ಅವನು ಅರಿತುಕೊಂಡನು. **32**

**2:32** ಯೇಸು ಕ್ರಿಸ್ತನು ಲೋಕದ ಎಲ್ಲಾ ಜನಾಂಗಗಳಿಗೆ ಮತ್ತು ಇಸ್ರಾಯೇಲ್ ಜನರಿಗೆ

ಬೆಳಕಾಗಿ ಬಂದಿದ್ದಾನೆ ಎಂಬದು ಸಿಮೆಯೋನನಿಗೆ ಗೊತ್ತಿತ್ತು. ಯೆಶಾಯ 42:6; 49:6 ನೋಡಿರಿ. **33**

**2:33** ಯೇಸು ಕ್ರಿಸ್ತನು ದೇವರ ಶಕ್ತಿಯ ಮೂಲಕ ಕನ್ಯೆಯಲ್ಲಿ ಜನಿಸಿದನು (1:34-35). ಯೋಸೇಫನು ಇದರಲ್ಲಿ ಭಾಗಿಯಾಗಿರಲಿಲ್ಲ, ಆದರೂ ಶಾಸನಬದ್ಧವಾಗಿ ಅವನನ್ನು ಯೇಸು ಕ್ರಿಸ್ತನ ತಂದೆ ಎಂದು ಕರೆಯಲಾಗಿದೆ (3:23). **34**

**2:34** ಸಿಮೆಯೋನನು ಇಲ್ಲಿ ಹೇಳಿದ ಪ್ರವಾದನೆ ನಂತರದಲ್ಲಿ ಸಂಪೂರ್ಣವಾಗಿ ನೆರವೇರಿತು. ಯೇಸು ಕ್ರಿಸ್ತನು ಯಾವಾಗಲೂ ಗರ್ವಿಷ್ಠರಿಗೆ, ಕಪಟಿಗಳಿಗೆ ಮತ್ತು ಅಪನಂಬಿಕೆಯುಳ್ಳ ಜನರಿಗೆ ಅಡಚಣೆಯಾಗಿದ್ದನು (ಮತ್ತಾಯ 21:42-44; ರೋಮಾ 9:32-33; 1 ಪೇತ್ರ 2:7-8). ಅವರೆಲ್ಲರೂ ಬಿದ್ದುಹೋದರು ಮತ್ತು ಅವರ ಬೀಳುವಿಕೆ ಭಯಾನಕವಾಗಿತ್ತು – ಅವರು ದೇವಕುಮಾರನನ್ನು ಕೊಂದರು ಮತ್ತು ದೇವರ ಕೋಪ ಅವರ ಮೇಲೆ ಬಂದಿತು (1 ಥೆಸ 2:14-16). ಆದರೆ ಯೇಸು ಕ್ರಿಸ್ತನು ದೀನರನ್ನು, ಯಥಾರ್ಥರನ್ನು ಮತ್ತು ನಂಬುವ ಜನರನ್ನು ಆರಿಸಿಕೊಂಡನು ಹಾಗೂ ಅವರನ್ನು ಆತ್ಮೀಕ ವಿಷಯದಲ್ಲಿ ಹೆಚ್ಚಾಗಿ ಅಭಿವೃದ್ಧಿಪಡಿಸಿದನು ಮತ್ತು ಪರಲೋಕ ಅರ್ಹರನ್ನಾಗಿಸಿದನು. ಈಗಲೂ ಪ್ರತಿಯೊಂದು ದೇಶದ ಜನರು ಯೇಸು ಕ್ರಿಸ್ತನಿಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆ ಎಂಬದರ ಮೇಲೆಯೇ ಅವರ ಅಂತ್ಯ ಸ್ಥಿತಿ ನಿರ್ಧಾರವಾಗುತ್ತದೆ. ಆದರೆ ಆತನು ಈ ಲೋಕದಲ್ಲಿದ್ದಾಗ "ಆತನಿಗೆ ವಿರುದ್ಧವಾಗಿ ಮಾತನಾಡಿದವರೇ ಹೆಚ್ಚು" – ಮತ್ತಾಯ 9:3,11,34; 12:24; 13:54-57; 26:65-66; 27:63; ಯೋಹಾನ 8:48. **35**

**2:35** ಜನರು ಯೇಸು ಕ್ರಿಸ್ತನೊಂದಿಗೆ ನಡೆದುಕೊಂಡ ರೀತಿ, ಆತನ ಮಾತುಗಳು ಮತ್ತು ಕಾರ್ಯಗಳು ಅವರು ಕೆಲವೊಂದು ಕಾರ್ಯಗಳನ್ನು ಮಾಡುವಂತೆ ಹಾಗೂ ನಡೆದುಕೊಳ್ಳುವಂತೆ ಅವರನ್ನು ಕೆರಳಿಸಿದ ರೀತಿ, ಅವರ ಆಂತರ್ಯದ ಆಲೋಚನೆಗಳನ್ನು ಪ್ರಕಟಪಡಿಸುತ್ತದೆ. ಯೇಸು ಕ್ರಿಸ್ತನು ಶ್ರಮೆಯನ್ನನುಭವಿಸಬೇಕು ಎಂಬದಾಗಿ ಸಿಮೆಯೋನನಿಗೆ ಪ್ರಕಟಪಡಿಸಲಾಗಿತ್ತು ಮತ್ತು ಇದರ ಅರ್ಥ ಮರಿಯಳೂ ಶ್ರಮೆಯನ್ನನುಭವಿಸಬೇಕು ಎಂಬದಾಗಿದೆ. ತನ್ನ ಮಗನು ತಿರಸ್ಕರಿಸಲ್ಪಡುವದು, ಅವಮಾನಿಸಲ್ಪಡುವದು ಮತ್ತು ಅಪರಾಧಿಯಂತೆ ಶಿಲುಬೆಗೆ ಹಾಕಲ್ಪಡುವದನ್ನು ಆಕೆ ನೋಡುವಳು. **36**

**2:36** ಪ್ರವಾದಿಸಿದ ಇತರೆ ಸ್ತ್ರೀಯರ ಬಗ್ಗೆ ತಿಳಿಯಲು ವಿಮೋ 15:20; ನ್ಯಾಯ 4:4; 2

ಅರಸು 22:14; ಅಪೊ 21:9. **37**

**2:37** ಇಲ್ಲಿ ವೃದ್ಧ ಸ್ತ್ರೀಯರಿಗೆ (ಮತ್ತು ವೃದ್ಧ ಪುರಷರಿಗೂ) ಒಂದು ಮಾದರಿಯನ್ನು ಕೊಡಲಾಗಿದೆ. ದೇವರ ಸೇವೆ ಮಾಡಲು ಅವಶ್ಯವಾಗಿ ಬಲಿಷ್ಠರಾಗಿರಬೇಕು ಮತ್ತು ಉತ್ಸಾಹವುಳ್ಳವರಾಗಿರಬೇಖು ಅಥವಾ ಎಲ್ಲಾ ಕಡೆಗಳಲ್ಲಿಯೂ ಸುವಾರ್ತೆ ಸಾರುವವರಾಗಿರಬೇಕು ಎಂಬ ನಿಯಮವೇನೂ ಇಲ್ಲ.

*"ಉಪವಾಸಗಳು"*– ಮತ್ತಾಯ 6:16. **38**

**2:38** ಅನ್ನಳು ನಮ್ಮೆಲ್ಲರಿಗೆ ಈ ಎರಡು ವಿಷಯಗಳಲ್ಲಿ ಒಳ್ಳೆಯ ಮಾದರಿಯಾಗಿದ್ದಾಳೆ.

*"ಉಪಕಾರ ನೆನೆಸಿಕೊಳ್ಳುವದು"*– ಯಾಜಕ 7:12-13; ಕೀರ್ತನೆ 7:17; 50:14-15; 56:12; ಎಫೆ 5:20; 1 ಥೆಸ 5:18ರ ನೋಟ್ಸ್ ನೋಡಿರಿ.

*"ಆತನ ವಿಷಯವಾಗಿ ಮಾತಾಡುವವಳಾಗಿದ್ದಳು"*– ಯೆಶಾಯ 40:2.

*"ಯೆರೂಸಲೇಮಿನ ಬಿಡುಗಡೆ"*– ಯೆಶಾಯ 40:2; 52:9; 59:20-21 ನೋಡಿರಿ. **39**

**2:39** ವಚನಗಳು 22-24. ಲೂಕನು ಐಗುಪ್ತಕ್ಕೆ ಪ್ರಯಾಣಿಸಿದ್ದರ ಮಾಹಿತಿಯನ್ನು ಕೊಟ್ಟಿಲ್ಲ (ಮತ್ತಾಯ 2:13-23). ನಾಲ್ಕೂ ಸುವಾರ್ತೆಗಳ ಬರಹಗಾರರು ತಮಗೆ ಗೊತ್ತಿರುವ ಎಲ್ಲಾ ವಿಷಯಗಳನ್ನು ಬರೆದಿಲ್ಲ (ಮಾರ್ಕ 4:1-20ರ ನೋಟ್ ನೋಡಿರಿ). ಅವರು ಯೇಸು ಕ್ರಿಸ್ತನನ್ನು ನಜರೇತಿಗೆ ಕರೆದುಕೊಂಡು ಹೋಗಿದ ನಂತರ ಯೆರೂಸಲೇಮಿಗೆ ಹೋಗುವ ಮೊದಲೇ ಬೆತ್ಲೆಹೇಮಿಗೆ ಬಂದಿರುವ ಸಾಧ್ಯತೆಯೂ ಇದೆ. **40**

**2:40** ವಚನ 52. ಎಲ್ಲಾ ಮಾನವರ ಹಾಗೆಯೇ ಕರ್ತನಾದ ಯೇಸು ಕ್ರಿಸ್ತನು ಬೆಳೆದು ದೊಡ್ಡವನಾಗಿದನು, ಆದರೆ ಆತನು ಪಾಪವನ್ನು ಮಾತ್ರ ಮಾಡಲಿಲ್ಲ (ಇಬ್ರಿ 4:15; 1 ಪೇತ್ರ 2:22), ಆತನು ವಿಶೇಷವಾದ ಜ್ಞಾನ ಹೊಂದಿದ್ದನು - ಈ ಸತ್ಯವು 46,47 ವಚನಗಳಲ್ಲಿ ನಾವು ಸ್ಪಷ್ಟವಾಗಿ ತಿಳಿಯಬಹುದು. ಆತನ ಮೇಲಿದ್ದ ದೇವರ ಕೃಪೆ ಆತನನ್ನು ಐಶ್ವರ್ಯವಂತನನ್ನಾಗಿ ಮಾಡಲಿಲ್ಲ, ಅದು ಆತನನ್ನು ಒಳ್ಳೇತನ ಮತ್ತು ಪರಿಶುದ್ಧತೆಯಲ್ಲಿ ಬಲಪಡಿಸಿತು ಹಾಗೂ ಆತನನ್ನು ಹಾನಿ ಮತ್ತು ದುಷ್ಟತನದಿಂದ ಕಾಪಾಡಿತು – ಸಹಜವಾಗಿ ಬಹುತೇಕ ಜನರು ಬಯಸುವ ಬೌತಿಕ ಕಾರ್ಯಗಳಿಗಿಂತ ಇದು ಅತ್ಯಂತ ಅಮೂಲ್ಯವಾದದ್ದಾಗಿದೆ. **41**

**2:41** *"ಪಸ್ಕ ಹಬ್ಬ"*– ವಿಮೋ 23:14-17; ಯಾಜಕ 23:4. **42**

- **2:42** ಧರ್ಮೋ 16:16. **46**

**2:46** ಇಲ್ಲಿ ಬೋಧಕರೆಂದರೆ, ಧಾರ್ಮಿಕ ಬೋಧಕರು, ಗುರುಗಳು. **47**

**2:47** ಕರ್ತನಾದ ಯೇಸು ಕ್ರಿಸ್ತನ ಮಾತುಗಳು ಮತ್ತು ಕ್ರಿಯೆಗಳನ್ನು ನೋಡಿ ಸಹಜವಾಗಿ ಜನರು ಆಶ್ಚರ್ಯಪಡುತ್ತಿದ್ದರು – ಮತ್ತಾಯ 8:28; 12:23; ಮಾರ್ಕ 1:27; 2:12; 9:15; 10:32. **48**

**2:48** *"ನಿನ್ನ ತಂದೆ"*– ಅಂದರೆ ಮರಿಯಳು ಇಲ್ಲಿ ಯೋಸೇಫನು ಶಾಸನಾನುಸರವಾಗಿ ಯೇಸುವಿನ ತಂದೆ ಎಂದು ಹೇಳುತ್ತಿದ್ದಾಳೆ (ವ 33). **49**

**2:49** ಯೇಸು ಕ್ರಿಸ್ತನ ಮಾತಿನ ಅರ್ಥ ತಂದೆಯಾದ ದೇವರು. ಆತನಿಗೆ ಕೇವಲ ಹನ್ನೆರೆಡೆ ವರ್ಷ ವಯಸ್ಸಾಗಿದ್ದರೂ ದೇವಕುಮಾರನಾಗಿ ತಂದೆಯಾದ ದೇವರೊಂದಿಗೆ ಆತನಿಗಿದ್ದ ವಿಶೇಷವಾಗಿ ಸಂಬಂಧವನ್ನು ಬಲ್ಲವನಾಗಿದ್ದನು. ಆತನು ಮರಿಯಳಿಗೆ ಕೊಟ್ಟ ಉತ್ತರ ಸೂಚಿಸುವದೇನೆಂದರೆ ಆಕೆಗೆ ಇದು ಗೊತ್ತಿರಬೇಕಿತ್ತು ಮತ್ತು ಅವರು ಆತನನ್ನು ಹುಡುಕುವ ಅವಶ್ಯಕತೆ ಇರಲಿಲ್ಲ – ಯಾಕಂದರೆ ಆತನು ಯೆರೂಸಲೇಮಿನಲ್ಲಿದ್ದಾನೆಂದರೆ ಖಂಡಿತವಾಗಿಯೂ ದೇವಾಲಯದಲ್ಲಿಯೇ ಇರುತ್ತಾನೆ. **50**

**2:50** ಯೇಸು ಕ್ರಿಸ್ತನ ಕಾರ್ಯಗಳನ್ನು ನೋಡುವಾಗ ಮತ್ತು ಮಾತುಗಳನ್ನು ಕೇಳಿಸಿಕೊಳ್ಳುವಾಗ ಮರಿಯಳು ಕೆಲವೊಮ್ಮೆ ಗೊಂದಲಕ್ಕೊಳಪಟ್ಟಳು ಹಾಗೂ ಇತರರು ಆತನ ಬಗ್ಗೆ ಏನು ಹೇಳಿದರು ಎಂದು ಆಳವಾಗಿ ಯೋಚಿಸುತ್ತಿದ್ದಳು (ವ 19,33,51). **51**

**2:51** ಯೇಸು ಕ್ರಿಸ್ತನು ಜೀವಿತಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳಲ್ಲಿ ದೇವರ ನಿಯಮವನ್ನು ಸಂಪೂರ್ಣವಾಗಿ ನೆರವೇರಿಸಿದನು. ಆತನು ತನ್ನ ತಂದೆತಾಯಿಗಳ ಅಧಿಕಾರಕ್ಕೆ ವಿರುದ್ಧವಾಗಿ ಎಂದಿಗೂ ನಡೆದುಕೊಳ್ಳಲಿಲ್ಲ ಅಥವಾ ಅವರಿಗೆ ಅಗೌರವ ತರುವ ಯಾವ ಕಾರ್ಯವನ್ನೂ ಮಾಡಲಿಲ್ಲ (ವಿಮೋ 20:12). **52**

**2:52** ವಚನ 40; 1 ಸಮು 2:26. ಆತನು ದೇವಕುಮಾರನಾಗಿದ್ದರೂ ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ಬೆಳೆದನು. ಆತನು ದೇವರ ದಯೆಯಲ್ಲಿ ಬೆಳೆದನು ಎಂಬದು ದೇವರು ಆತನ ವಿಷಯದಲ್ಲಿ ಹೆಚ್ಚೆಚ್ಚು ಮೆಚ್ಚಿಕೆಯುಳ್ಳವನಾಗಿದ್ದನು ಹಾಗೂ ಸಂತೋಷಿಸಿದನು ಎಂಬದಾಗಿ ಸೂಚಿಸುತ್ತದೆ – ಈ ಲೋಕದ ತಂದೆತಾಯಿಗಳು ಸಹ ತಮ್ಮ ಮಕ್ಕಳು ಪರಿಪಕ್ವರಾಗುವಾಗ ಸಂತೋಷಿಸುತ್ತಾರೆ.

# 3 1

**3:1** ತಿಬೇರಿಯನು ರೋಮನ್ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದನು. ಈ ಸಮಯದಲ್ಲಿ ಯೋಹಾನನು ಮತ್ತು ಯೇಸು ಕ್ರಿಸ್ತನು 30 ವರ್ಷದವರಾಗಿದ್ದರು (ವ 23). **2**

**3:2** ಕಾಯಫನು ಅನ್ನನಿಗೆ ಅಳಿಯನಾಗಿದ್ದನು. ರೋಮನ್ನರು ಅವನನ್ನು ಯೆಹೂದ್ಯರಿಗೆ ಮಹಾಯಾಜಕನನ್ನಾಗಿ ನೇಮಿಸಿದ್ದರು. ಯೆಹೂದ್ಯರು ಕಾಯಫನೊಂದಿಗೆ ಅನ್ನನನ್ನು ಸಹ ಮಹಾಯಾಜಕನೆಂದು ಭಾವಿಸುತ್ತಿದ್ದರು. ಸಹಜವಾಗಿ ಮಹಾಯಾಜಕನು ಒಬ್ಬನು ಮಾತ್ರವೇ ಇರುತ್ತಿದ್ದನು.

*"ದೇವರ ವಾಕ್ಯವುಂಟಾಯಿತು"*– ಸಹಜವಾಗಿ ಹಳೆಯ ಒಡಂಬಡಿಕೆಯಲ್ಲಿ ಈ ಭಾಷೆಯನ್ನು ಉಪಯೋಗಿಸಲಾಗಿದೆ. ಯೆರೆ 1:2; ಯೆಹೆಜ್ಕೇಲ 1:3; ಹೋಶೇಯ 1:1ರೊಂದಿಗೆ ಹೋಲಿಸಿ ನೋಡಿರಿ. **3-18**

- **3:3-18** ಮತ್ತಾಯ 3:1-12. **3**

**3:3** ಇದರ ಅರ್ಥ ದೀಕ್ಷಾಸ್ನಾನದಿಂದ ಪಶ್ಚಾತ್ತಾಪ ಅಥವಾ ಪಾಪ ಕ್ಷಮಾಪಣೆ ದೊರೆಯುತ್ತಿತ್ತು ಎಂಬದಲ್ಲ. ಅವರು ಪಶ್ಚತ್ತಾಪಪಟ್ಟು ತಮ್ಮ ಪಾಪಗಳನ್ನು ಅರಿಕೆಮಾಡಿಕೊಂಡರು ಹಾಗೂ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೊದಲು ಕ್ಷಮಾಪಣೆ ಹೊಂದಿಕೊಳ್ಳುತ್ತಿದ್ದರು (ಮತ್ತಾಯ 3:6,11). ಯಾಕಂದರೆ ಪಾಪ ಕ್ಷಮಾಪಣೆ ಮತ್ತು ನಂಬಿಕೆ ಎರಡೂ ಅವಶ್ಯವಾಗಿವೆ (ಮತ್ತಾಯ 3:6; ಮಾರ್ಕ 16:15-16). ಯೋಹಾನನ ದೀಕ್ಷಾಸ್ನಾನ ಇದನ್ನು ಸೂಚಿಸುವದಾಗಿತ್ತು. **5-6**

- **3:5-6** ಯೆಶಾಯ 40:4-5. **10-14**

**3:10-14** "ಪಶ್ಚಾತ್ತಾಪಕ್ಕೆ ಯೋಗ್ಯವಾದ ಫಲಗಳ" – (ವ 8) ವಿವರಣೆಯನ್ನು ಇಲ್ಲಿ ನೋಡಬಹುದಾಗಿದೆ, ಅವು ಯಾವುವೆಂದರೆ – ಕರುಣೆ, ಪ್ರೀತಿ, ಪ್ರಾಮಾಣಿಕತೆ, ಸತ್ಯಸಂಧತೆ, ಸಮಾಧಾನ, ದುರಾಸೆಯಿಲ್ಲದಿರುವದು. ಪಶ್ಚಾತ್ತಾಪಪಟ್ಟು ತನ್ನೊಂದಿಗೆ ಅನ್ಯೋನ್ಯವಾಗಿ ಜೀವಿಸುವವರಲ್ಲಿ ದೇವರು ಎದುರುನೋಡುವ ಕಾರ್ಯಗಳು ಇವುಗಳಾಗಿವೆ – ಆದರೆ ದೇವರ ಸೇವಕರೆಂದು ಹೇಳಿಕೊಳ್ಳುವ ಅನೇಕರು ಇವುಗಳನ್ನು ನಿರ್ಲಕ್ಷಿಸುತ್ತಾರೆ. **15**

- **3:15** ಯೋಹಾನ 1:19-20.

*“ಕ್ರಿಸ್ತನು”*– ಮತ್ತಾಯ 1:1. **18**

**3:18** ಉದಾಹರಣೆಗೆ, ಯೋಹಾನ 1:29-35 ನೋಡಿರಿ. **19-20**

**- 3:19-20** ಮತ್ತಾಯ 3:13-17; ಮಾರ್ಕ 1:11. **21**

**3:21** *“ಆತನು ಪ್ರಾರ್ಥನೆ ಮಾಡುತ್ತಿರುವಲ್ಲಿ”*– 5:16; 11:1. **23**

**3:23** *“ಜನರ ಎಣಿಕೆಯಲ್ಲಿ”*– 2:23; 1:34-35. ಲೂಕನು ಮತ್ತೊಮ್ಮೆ ಸ್ಪಷ್ಟಪಡಿಸುವದೇನೆಂದರೆ ಯೋಸೇಫನು ಜನರ ಎಣಿಕೆಯಲ್ಲಿ ಮಾತ್ರ ಯೇಸು ಕ್ರಿಸ್ತನ ತಂದೆಯಾಗಿದ್ದಾನೆ. **23-38**

**3:23-38** ದಾವೀದನಿಂದ ಯೇಸು ಕ್ರಿಸ್ತನ ತನಕ ತಿಳಿಸಲಾಗಿರುವ ಈ ವಂಶಾವಳಿಯು ಮತ್ತಾಯ 1:1-17ರಲ್ಲಿ ತಿಳಿಸಿರುವ ವಂಶಾವಳಿಗಿಂತ ಕೊಂಚ ಭಿನ್ನವಾಗಿದೆ. ಯಾಕೆ? ಬಹುತೇಕ ವೇದ ಪಂಡಿತರು ನಂಬುವದೇನೆಂದರೆ ಮತ್ತಾಯನು ಯೋಸೇಫನ ವಂಶಾವಳಿಯನ್ನು ತಿಳಿಸಿದ್ದಾನೆ ಮತ್ತು ಲೂಕನು ಮರಿಯಳ ವಂಶಾವಳಿಯನ್ನು ತಿಳಿಸಿದ್ದಾನೆ. ಹೀಗೆ ನೋಡುವದಾದರೆ ಯೋಸೇಫನು ಹೇಲೀಯ ಅಳಿಯನಾಗಿದ್ದಾನೆ. ಆದರೆ ಸತ್ಯವೇದದಲ್ಲಿ “ಮಗ” ಎಂಬ ಪದ ಹಲವಾರು ಸಂಬಂಧಗಳನ್ನು ಸೂಚಿಸುತ್ತದೆ (ವಂಶಾವಳಿಗಳು ಮತ್ತು ಅವುಗಳಲ್ಲಿರುವ ಸಂಬಂಧಗಳಿಗಾಗಿ ಮತ್ತಾಯ 1:1,8; ಆದಿ 5:5-32ರ ನೋಟ್ಸ್ ನೋಡಿರಿ), ಮತ್ತು ಇದುವೇ ಅತ್ಯಂತ ಯುಕ್ತವಾದ ವ್ಯಾಖ್ಯಾನವೆನಿಸುತ್ತದೆ. ಮತ್ತಾಯನು ಯೇಸು ಕ್ರಿಸ್ತನ ವಂಶಾವಳಿಯನ್ನು ಅಬ್ರಹಾಮನಿಂದ ತಿಳಿಸಿದ್ದಾನೆ. ಲೂಕನು ಆದಾಮನಿಂದ ತಿಳಿಸಿದ್ದಾನೆ. ಯೇಸು ಕ್ರಿಸ್ತನು ಇಸ್ರಾಯೇಲಿನ ಅರಸನು ಎಂಬದಾಗಿ ತೋರಿಸುವದು ಮತ್ತಾಯನ ಉದ್ದೇಶವಾಗಿದೆ. ಲೂಕನು ಇಡೀ ಮಾನವ ಕುಲದೊಂದಿಗೆ ಆತನಿಗಿರುವ ಸಂಬಂಧವನ್ನು ತೋರಿಸಿದ್ದಾನೆ. **38**

**3:38** ಮೊದಲ ಮಾನವನಾದ ಆದಾಮನಿಗೆ, ಮಾನುಷಿಕವಾಗಿ ತಂದೆ ಇಲ್ಲ. ಅವನು ನೇರವಾಗಿ ದೇವರಿಂದ ಸೃಷ್ಟಿಸಲ್ಪಟ್ಟನು ಮತ್ತು ಈ ಅರ್ಥದಲ್ಲಿ ದೇವರು ಅವನ ತಂದೆಯಾಗಿದ್ದಾನೆ. ಆದಿ 1:26-27; 2:7 ನೋಡಿರಿ. ಆದಾಮನು ಯೇಸು ಕ್ರಿಸ್ತನ ಹಾಗೆ ದೇವರ ವಿಶಿಷ್ಟವಾದ ಕುಮಾರನಲ್ಲ (1:35; ಯೋಹಾನ 1:1,14; 3:16; 17:5).

**4** **1-13**

**- 4:1-13** ಮತ್ತಾಯ 4:1-11. **2**

**4:2** ಲೂಕನು ಹೇಳುವದೇನೆಂದರೆ ಸೈತಾನನು ಯೇಸು ಕ್ರಿಸ್ತನನ್ನು 40 ದಿವಸಗಳು ಶೋಧಿಸಿದನು. 40 ದಿವಸಗಳ ಕೊನೆಯಲ್ಲಿ ಎದುರಾದ ಮೂರು ಶೋಧನೆಗಳ ಬಗ್ಗೆ ಮಾತ್ರವೇ ಮತ್ತಾಯನು ಬರೆದಿದ್ದಾನೆ. **6**

**4:6** ಸೈತಾನನು ಇಲ್ಲಿ ಸತ್ಯವನ್ನು ಹೇಳುತ್ತಿದ್ದಾನೆಯೇ? ಯೇಸು ಕ್ರಿಸ್ತನು ಇದನ್ನು ನಿರಾಕರಿಸಲಿಲ್ಲ ಮತ್ತು ಸತ್ಯವೇದದ ಇತರೆ ವಚನಗಳು ಅವು ಸತ್ಯ ಎಂದು ಹೇಳುತ್ತವೆ (ಯೋಹಾನ 12:31; 14:30; 1 ಯೋಹಾನ 5:19; 2 ಕೊರಿಂಥ 4:4; ಎಫೆ 6:12). ಸೈತಾನನು ಲೋಕದ ಅಧಿಕಾರ ಮತ್ತು ಪ್ರಭಾವವನ್ನು ಹೇಗೆ ಪಡೆದುಕೊಂಡನು? ಮತ್ತಾಯ 4:9 ರ ನೋಟ್ಸ್ ನೋಡಿರಿ. **13**

**4:13** ಸೈತಾನನು ಸೋಲು ಒಪ್ಪಿಕೊಳ್ಳಲಿಲ್ಲ, ಆದರೆ ಬೇರೊಂದು ಸಮಯದ ಮೇಲೆ ನಿರೀಕ್ಷೆ ಇಟ್ಟನು ಮತ್ತು ಉತ್ತಮವಾದ ಫಲಿತಾಂಶಗಳನ್ನು ಬಯಸಿದನು. ಆದ್ದರಿಂದ ಈಗ ವಿಶ್ವಾಸಿಗಳು ಅವನನ್ನು ಎದುರಿಸುವಾಗ ಅವನು ಓಡಿಹೋಗುತ್ತಾನೆ (ಯಾಕೋಬ 4:7), ಆದರೆ ಮತ್ತೆಮತ್ತೆ ಹಿಂದಿರುಗಿ ಬರುತ್ತಾನೆ. **14**

**4:14** ಯೇಸು ಕ್ರಿಸ್ತನು ಯೂದಾಯದ ಯಾವುದೋ ಅರಣ್ಯದಲ್ಲಿದ್ದನು. ಈಗ ಆತನು ತನ್ನ ಮುಂದಿದ್ದ ಕೆಲಸಕ್ಕಾಗಿ ದೇವರಾತ್ಮನಿಂದ ಸಂಪೂರ್ಣವಾಗಿ ಸಜ್ಜುಗೊಂಡವನಾಗಿ ಗಲಿಲಾಯಕ್ಕೆ ಹಿಂದಿರುಗಿ ಬಂದನು. **15**

**- 4:15** ಮತ್ತಾಯ 4:23-25.

*"ಸಭಾಮಂದಿರಗಳು"*– ಮತ್ತಾ – 4:23. **16**

**4:16** *"ಸಬ್ಬತ್ ದಿನ"*– ವಿಮೋ 20:8-11. ಯೇಸು ಕ್ರಿಸ್ತನ ಪದ್ಧತಿಯನ್ನು ಗಮನಿಸಿರಿ. ಇಬ್ರಿ 10:25ರೊಂದಿಗೆ ಹೋಲಿಸಿ ನೋಡಿರಿ. ಆತನು ಹಳೆಯ ಒಡಂಬಡಿಕೆಯಿಂದ ಓದಿದನು-ಯೆಹೂದ್ಯರ ಕೂಟಗಳಿಗೆ ಧಾರ್ಮಿಕ ಬೋಧಕರು ಬಂದರೆ ಸಹಜವಾಗಿ ಓದುವಂತೆ ಅಥವಾ ಮಾತನಾಡುವಂತೆ ಹೇಳುತ್ತಿದ್ದರು. **17**

**4:17** *"ಸುರುಳಿ"*– ಬರವಣಿಗೆಯಿದ್ದ ಸಾಮಗ್ರಿಗಳ ನಾಲ್ಕು ಮೂಲೆಗಳನ್ನು ಹೊಲೆದು ಸುತ್ತಿಡಲಾಗುತಿತ್ತು. ಯೆಹೂದ್ಯರು ಹಳೆಯ ಒಡಂಬಡಿಕೆಯ ವಾಕ್ಯಗಳನ್ನು ಈ ರೀತಿಯಾಗಿ ಬರೆದು ತಮ್ಮ ಸಭಾಮಂದಿರಗಳಲ್ಲಿ ಇಡುತ್ತಿದ್ದರು. **18-19**

**4:18-19** ಯೆಶಾಯ 61:1-2  ಮತ್ತು ಅಲ್ಲಿರುವ ನೋಟ್ಸ್ ನೋಡಿರಿ. ಈ ವಾಕ್ಯಗಳು ಮುಂಬರುವ ಮೆಸ್ಸೀಯನ ಬಗ್ಗೆ ತಿಳಿಸುತ್ತವೆ ಎಂಬದು ಯೆಹೂದ್ಯರ ಯೋಚನೆಯಾಗಿತ್ತು. ಇಲ್ಲಿ ಯೇಸು ಕ್ರಿಸ್ತನು ಮಾಡಲು ಬಂದ ಅದ್ಭುತವಾದ ಕಾರ್ಯವನ್ನು ಗಮನಿಸಿರಿ. **21**

**4:21** ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಲ್ಪಟ್ಟಿರುವ ಮೆಸ್ಸೀಯ ತಾನೇ ಎಂಬದನ್ನು ಯೇಸು ಕ್ರಿಸ್ತನು ಇಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ. ಹಾಗೆಯೇ ಮತ್ತಾಯ 1:1 ಸಹ ನೋಡಿರಿ. **22**

**- 4:22** ಮತ್ತಾಯ 13:53-58 **23**

**4:23** ಯೇಸು ಕ್ರಿಸ್ತನು ಗಲಿಲಾಯದ ಕಪೆರ್ನೌಮ್ ಪಟ್ಟಣವನ್ನು ತನ್ನ ಸೇವೆಯ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡಿದ್ದನು ಮತ್ತು ಅಲ್ಲಿ ಕೆಲವು ಅಗಮ್ಯವಾದ ಅಧ್ಭುತಕಾರ್ಯಗಳನ್ನು ಮಾಡಿದನು – ಮತ್ತಾಯ 4:13,24,25; 8:1-17. **24**

**- 4:24** ಮತ್ತಾಯ 13:57; ಯೋಹಾನ 4:44. **25-26**

**- 4:25-26** 1 ಅರಸು 17:1,8-16 ನೋಡಿರಿ. **27**

**4:27** 2 ಅರಸು 5:1-14  ನೋಡಿರಿ. ಎಲೀಯ ಮತ್ತು ಎಲೀಷ ಎಂಬ ಈ ಇಬ್ಬರು ಪ್ರವಾದಿಗಳು, ಸಾಮಾನ್ಯವಾಗಿ ಇಸ್ರಾಯೇಲ್ ಜನರ ಕೈಗಳಲ್ಲಿ ವಿಪರೀತ ಹಿಂಸೆಗಳನ್ನು ಅನುಭವಿಸಿದರು ಆದರೆ ದೇವರು ಅವರನ್ನು ಹೊರಗಿನವರಿಗೆ ದೊಡ್ಡ ಆಶೀರ್ವಾದದ ನಿಧಿಗಳನ್ನಾಗಿ ಉಪಯೋಗಿಸಿದನು. ಅವರ ಕಾಲದಲ್ಲಿ ಇಸ್ರಾಯೇಲ್ಯರು ದೇವರನ್ನು ನಿರ್ಲಕ್ಷಿಸಿದರು ಮತ್ತು ತಮ್ಮ ಸುತ್ತಮುತ್ತಲಿನಲ್ಲಿದ್ದ ವಿಗ್ರಹಾರಾಧಕ ಜನರಿಗಿಂತ ಕಳಪೆಯಾಗಿ ಜೀವಿಸುತ್ತಿದ್ದರು. ಯೆಹೂದ್ಯರು ತನ್ನ ಸಮಯದಲ್ಲಿ ಎದುರುಬೀಳುವವರಾಗಿರುವರು ಮತ್ತು ಅಪನಂಬಿಕೆಯುಳ್ಳವರಾಗಿರುವರು ಹಾಗೂ ತನ್ನ ಸುವಾರ್ತೆಯು ಯೆಹೂದ್ಯರಲ್ಲದ ಅನ್ಯರ ಮಧ್ಯದಲ್ಲಿ ಪ್ರಚುರಗೊಳ್ಳುವದು ಎಂದು ಯೇಸು ಕ್ರಿಸ್ತನಿಗೆ ಚೆನ್ನಾಗಿ ಗೊತ್ತಿತ್ತು. **28**

**4:28** ಈ ಯೆಹೂದ್ಯರು ಇತರೆ ಜನರನ್ನು ಕಡೆಗಣಿಸುತ್ತಿದ್ದರು ಮತ್ತು ಕೋಪವುಳ್ಳವರಾಗಿದ್ದರು ಯಾಕಂದರೆ ಚರಿತ್ರೆಯಲ್ಲಿ ನೋಡುವ ಪ್ರಕಾರ ಯೇಸು ಕ್ರಿಸ್ತನು ಅವರ ತಪ್ಪುಗಳನ್ನು ಬಹಿರಂಗಪಡಿಸುತ್ತಿದ್ದನು ಮತ್ತು ಇತರರನ್ನು ಅವರಿಗಿಂತ ಹೆಚ್ಚಾಗಿ ಘನಪಡಿಸುತ್ತಿದ್ದನು. **29**

**4:29** ದೇವಕುಮಾರನನ್ನು ಕೊಲ್ಲಲು ಯೆಹೂದ್ಯರು ನಡೆಸಿದ ಮೊದಲನೆಯ ಪ್ರಯತ್ನ

(ಆದರೆ ಇದುವೇ ಕಡೆಯದಲ್ಲ). ಇದಕ್ಕೆ ಕಾರಣ? ಆತನು ಅವರಿಗೆ ಸತ್ಯವನ್ನು ಹೇಳಿದನು ಮತ್ತು ಆತನ ಮೂಲಕ ದೇವರ ಪರಿಶುದ್ಧತೆಯ ಬೆಳಕು ಪಾಪದಿಂದ ತುಂಬ ಅವರ ಹೃದಯಗಳ ಮೇಲೆ ಪ್ರಕಾಶ ಬೀರಿತು. ಯೋಹಾನ 3:19; 7:7; 8:40 ನೋಡಿರಿ. **30**

**4:30** ಆತನು ಪ್ರಾಣಬಿಡುವ ಸಮಯ ಇನ್ನೂ ಬಂದಿರಲಿಲ್ಲ ಮತ್ತು ಆತನು ಆಯ್ಕೆ ಮಾಡಿಕೊಳ್ಳುವ ತನಕ ಯಾರೊಬ್ಬರಿಗೂ ಆತನ ಪ್ರಾಣ ತೆಗೆಯಲು ಆಗುತ್ತಿರಲಿಲ್ಲ. ಯೋಹಾನ 7:30; 10:17-18 ನೋಡಿರಿ. **31-37**

- **4:31-37** ಮಾರ್ಕ 1:21-28. **38-41**

- **4:38-41** ಮತ್ತಾಯ 8:14-17. **38**

**4:38** *“ಸಿಮೋನ”*– ಪೇತ್ರ. **41**

- **4:41** ಮತ್ತಾಯ 8:4; 9:30; 12:16; ಮಾರ್ಕ 1:34. **42-44**

- **4:42-44** ಮಾರ್ಕ 1:35-39. **43**

**4:43** *“ದೇವರರಾಜ್ಯ”*– ಮತ್ತಾಯ 4:17.

# 5 1

**5:1** ಗೆನೇಜರೇತ್ ಗಲಿಲಾಯದ ಇನ್ನೊಂದು ಹೆಸರಾಗಿದೆ. ಇಲ್ಲಿ ಕರ್ತನಾದ ಯೇಸು ಕ್ರಿಸ್ತನ ಮಾತುಗಳನ್ನು ದೇವರ ಮಾತುಗಳೆಂದು ಕರೆಯಲಾಗಿದೆ. ಯೋಹಾನ 7:16-17; 12:49-50; 14:24; 17:8 ನೋಡಿರಿ. **4**

**5:4** ಕರ್ತನಾದ ಯೇಸು ಕ್ರಿಸ್ತನು ಉಳಿದೆಲ್ಲಾ ವಿಷಯಗಳು ಗೊತ್ತಿರುವ ಹಾಗೆ ನೀರಿನೊಳಗೆ ಮೀನುಗಳು ಎಲ್ಲಿವೆ ಎಂಬದು ಗೊತ್ತಿತ್ತು. ಯೋಹಾನ 21:4-7 ಸಹ ನೋಡಿರಿ. ಈ ಎರಡೂ ಉದಾಹರಣೆಗಳು ಪ್ರಮುಖ ಪಾಠಗಳಾಗಿದ್ದು ನಮಗೆ ಪ್ರಮುಖವಾದ ಸತ್ಯವನ್ನು ಕಲಿಸುತ್ತವೆ – ಆತನ ರಾಜ್ಯದಲ್ಲಿ ಯೇಸು ಕ್ರಿಸ್ತನು ತಿಳಿಸುವ ಕಾರ್ಯಗಳು ಫಲಕಾರಿಯಾಗಿರುತ್ತವೆ ಆದರೆ ನಾವಾಗಿಯೇ ನಮ್ಮ ಆಲೋಚನೆಯಿಂದ ಮಾಡುವ ಕಾರ್ಯಗಳು ನಿಷ್ಫಲವಾಗಿರುತ್ತವೆ. **5**

**5:5** *“ಗುರುವೇ”*– ಅಧಿಕಾರವುಳ್ಳವನು ಎಂಬದನ್ನು ಗ್ರೀಕ್ ಪದ ಸೂಚಿಸುತ್ತದೆ. **8**

**5:8** ಯೇಸು ಕ್ರಿಸ್ತನು ಸಾಧಾರಣ ಮನುಷ್ಯನಲ್ಲ ಎಂಬದನ್ನು ಪೇತ್ರನು ಅರಿತುಕೊಂಡನು

ಮತ್ತು ಆತನ ಪ್ರಸನ್ನತೆಯಲ್ಲಿರುವ ಯೋಗ್ಯತೆ ತನಗಿಲ್ಲ ಎಂಬದಾಗಿ ತಿಳಿದುಕೊಂಡನು. ಯೆಶಾಯ 6:5; ಯೋಬ 40:4; 42:6; ಪ್ರಕ 1:17ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನ ಪರಿಶುದ್ಧತೆಯ ಬೆಳಕಿನಲ್ಲಿ ಮನುಷ್ಯನು ತನ್ನ ಸ್ವಂತ ಪಾಪಗಳನ್ನು ತಿಳಿದುಕೊಳ್ಳುತ್ತಾರೆ. ಇದಾದ ನಂತರ ಪೇತ್ರನು ಯೇಸು ಕ್ರಿಸ್ತನನ್ನು ಹಿಂಬಾಲಿಸಿದನು ಮತ್ತು ಕ್ರಿಸ್ತನು ತನ್ನನ್ನು ಬಿಟ್ಟು ಹೋಗಬಾರದೆಂದು ಬಯಸಿದನು. **9**

**5:9** ಮೀನು ಹಿಡಿಯುವದು ಅವರ ಕಸುಬಾಗಿತ್ತು (ಮತ್ತಾಯ 4:18), ಆದರೆ ನಜರೇತಿನ ಬಡಗಿಯ ಮನೆಯಲ್ಲಿ ಜನಿಸಿದ ಈತನು ಮೀನುಗಳು ಎಲ್ಲಿವೆ ಎಂಬದನ್ನು ಅವರಿಗೆ ತೋರಿಸಿದನು. **10**

**5:10** ಪೇತ್ರನು ತನ್ನ ಪಾಪ ಮತ್ತು ಅಯೋಗ್ಯತೆಯನ್ನು ಅರಿತುಕೊಂಡನು, ಆದರೆ ಅವನು ಆತನ ನಿಮಿತ್ತ ಭಯಪಡುವ ಅವಶ್ಯಕತೆಯಿಲ್ಲ. ನಿಜವಾಗಿ ಹೇಳುವದಾದರೆ ಅವನಿಗಾಗುವ ಅರಿವು ಅವನನ್ನು ಮನುಷ್ಯನನ್ನು ಹಿಡಿಯುವ ಉತ್ತಮ ಬೆಸ್ತರನನ್ನಾಗಿ ಮಾಡಿತು. "ಮನುಷ್ಯರನ್ನು ಹಿಡಿಯುವ ಬೆಸ್ತರು" ವಿಷಯವಾಗಿ ಮತ್ತಾಯ 4:19 ನೋಡಿರಿ. **11**

- **5:11** ಮತ್ತಾಯ 4:18-22. **12-14**

- **5:12-14** ಮತ್ತಾಯ 8:2-4. **16**

**5:16** *"ಪ್ರಾರ್ಥನೆ ಮಾಡುತ್ತಿದ್ದನು"*– 3:21; 6:12; 9:28; ಮತ್ತಾಯ 14:23; 26:36; ಮಾರ್ಕ 1:35; 6:46; ಇಬ್ರಿ 5:7; 7:25. **17-26**

- **5:17-26** ಮತ್ತಾಯ 9:2-8. **17**

**5:17** *"ಫರಿಸಾಯರು"*– ಮತ್ತಾಯ 3:7. ಒಂದುವೇಳೆ ಕರ್ತನು ಯಾವುದಾದರು ಸ್ಥಳದಲ್ಲಿ ಇರುವದಾದರೆ, ಗುಣಪಡಿಸುವ ಶಕ್ತಿಯು ಸಹ ಅಲ್ಲಿರುತಿತ್ತು, ಒಂದರ್ಥದಲ್ಲಿ ಇದು ಸತ್ಯವೂ ಆಗಿದೆ. ಆದರೆ ಮಾರ್ಕ 6:5 ನೋಡಿರಿ. **19**

- **5:19** ಮಾರ್ಕ 2:4. **27-32**

**5:27-32** 9:9-13 ನೋಡಿರಿ. ಲೇವಿ ಮತ್ತಾಯನ ಇನ್ನೊಂದು ಹೆಸರಾಗಿದೆ. **33-39**

- **5:33-39** ಮತ್ತಾಯ 9:14-17. **39**

**5:39** ಪಾಪ ಕ್ಷಮಾಪಣೆ, ದೇವರೊಂದಿಗೆ ಸಮಾಧಾನ, ಸಂತೋಷ, ರಕ್ಷಣೆ ಮತ್ತು ನಿತ್ಯಜೀವವನ್ನುಂಟು ಮಾಡುವ ಯೇಸು ಕ್ರಿಸ್ತನ ಸುವಾರ್ತೆಯೆಂಬ ಹೊಸ ದ್ರಾಕ್ಷಾರಸವನ್ನು

ಪ್ರಯತ್ನಿಸಲು ಕೆಲವು ಬಹಳ ನಿಧಾನರಾಗಿರುತ್ತಾರೆ. ಅವರ ಪೂರ್ವಾಪರಗಳು, ಹೊಸದನ್ನು ಸಹಿಸಿಕೊಳ್ಳಲಾಗದ ಮನಸ್ಥಿತಿ, ಹಳೆಯ ಮಾರ್ಗಗಳ ಗರ್ವ ಇತ್ಯಾದಿಗಳು, ತಾವೆಂದಿಗೂ ಪ್ರಯತ್ನಿಸದಿರುವವುಗಳನ್ನು ತಿರಸ್ಕರಿಸುವಂತೆ ಮಾಡುತ್ತವೆ. ಕೀರ್ತನೆ 34:8ರಲ್ಲಿ ದಾವೀದನು ಹೇಳಿರುವ ಹಾಗೆ ಮಾಡುವದು ಬುದ್ಧಿವಂತಿಕೆಯಾಗಿದೆ.

# 6 1-11

- **6:1-11** ಮತ್ತಾಯ 12:1-14. **8**
- **6:8** ಮತ್ತಾಯ 9:4; ಯೋಹಾನ 2:24-25. **9**
- **6:9** ಮಾರ್ಕ 3:4. **11**

**6:11** 4:28 ನೋಡಿರಿ. ಕೆಲವು ಧಾರ್ಮಿಕ ಜನರು ತಮ್ಮ ಗರ್ವದ ನಿಮಿತ್ತ ಅವರನ್ನು ಯಾರಾದರು ಎದುರಿಸಿದರೆ ಮತ್ತು ಅವರ ಬಣ್ಣ ಬಯಲು ಮಾಡಿದರೆ ಸಹಿಸಿಕೊಳ್ಳುವದಿಲ್ಲ. **12-16**

- **6:12-16** ಮತ್ತಾಯ 10:2-4. **12**

**6:12** ಕರ್ತನಾದ ಯೇಸು ಕ್ರಿಸ್ತನು ಬಹಳ ಎಚ್ಚರಿಕೆಯಿಂದ ತನ್ನ ಅಪೊಸ್ತಲರನ್ನು ಆರಿಸಿಕೊಂಡನು. ಎಲ್ಲದಕ್ಕಿಂತ ಹೆಚ್ಚಾಗಿ ಪರಲೋಕದಲ್ಲಿರುವ ತನ್ನ ತಂದೆಯಾದ ದೇವರ ಚಿತ್ತದ ಪ್ರಕಾರ ಆಯ್ಕೆ ನಡೆಯಲಿ ಎಂದು ಆತನು ಬಯಸಿದನು. **15**

**6:15** *"ಮತಾಭಿಮಾನಿಗಳು"*– "ಮತಾಭಿಮಾನಿ" – ಮತ್ತಾಯ 10:4ರ ನೋಟ್ಸ್ ನೋಡಿರಿ. **16**

**6:16** ಕರ್ತನಾದ ಯೇಸು ಕ್ರಿಸ್ತನು ಇಡೀ ರಾತ್ರಿ ಪ್ರಾರ್ಥನೆ ಮಾಡಿ ಇಸ್ಕರಿಯೋತ ಯೂದನ ಸ್ವಭಾವದ ಕುರಿತು ಪೂರ್ಣ ತಿಳುವಳಿಕೆಯ ನಂತರ ಅವನನ್ನು ಆರಿಸಿಕೊಂಡನು (ಯೋಹಾನ 6:64,70).

*"ಯಾಕೋಬನ ತಮ್ಮ"*– ತಮ್ಮ ಎಂಬ ಪದ ಇಟಾಲಿಕ್ಸ್ ನಲ್ಲಿರುವದರಿಂದ ಗ್ರೀಕ್ ನಲ್ಲಿ ಹೀಗಿಲ್ಲ ಎಂಬದನ್ನು ಸೂಚಿಸುತ್ತದೆ. "ಯಾಕೋಬನ ಮಗನಾದ ಯೂದ" ಇದು ಗ್ರೀಕ್ ನ ಯುಕ್ತವಾದ ಭಾಷಾಂತರವಾಗಿದೆ. ಇದರ ಅರ್ಥ ಯೂದನು ಯಾಕೋಬನ ಮಗನಾಗಿದ್ದಾನೆ. ಆದರೆ ಈ ಯಾಕೋಬನು ಯೂದನಿಗೆ ತಮ್ಮನಾಗಿದ್ದನೋ ಅಥವಾ ತಂದೆಯಾಗಿದ್ದನೋ

ನಮಗೆ ಗೊತ್ತಿಲ್ಲ. **17-19**

**6:17-19** ಮತ್ತಾಯ 4:23-25 ರಂದಿಗೆ ಹೋಲಿಸಿ ನೋಡಿರಿ. **19**

**6:19** 5:17; 8:46 ನೋಡಿರಿ. **20-49**

**6:20-49** ಇದನ್ನು ಸಮಭೂಮಿಯ ಮೇಲೆ ಮಾಡಿದ ಪ್ರಸಂಗ ಎಂದು ಕರೆಯಲಾಗಿದೆ ಯಾಕಂದರೆ ಯೇಸು ಕ್ರಿಸ್ತನು ಸಮಭೂಮಿಯ ಮೇಲೆ ಪ್ರಸಂಗ ಮಾಡಿದನು (ವ 17). ಪರ್ವತ ಪ್ರಸಂಗದಲ್ಲಿ ಹೇಳಲಾಗಿರುವ ಕೆಲವು ವಿಷಯಗಳನ್ನೇ ಇದರಲ್ಲಿಯೂ ನೋಡಬಹುದಾಗಿದೆ (ಮತ್ತಾಯ 5-7 ಅಧ್ಯಾಯಗಳು), ಆದರೆ ಪದಗಳನ್ನು ಬದಲಾಯಿಸಲಾಗಿದೆ. ಹಾಗೆಯೇ ಆತನು ಬೇರೆ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಕಲಿಸಿರುವ ವಿಷಯಗಳನ್ನೂ ನೋಡಬಹುದಾಗಿದೆ. ಕರ್ತನಾದ ಯೇಸು ಕ್ರಿಸ್ತನು ತಾನು ಕಲಿಸುತ್ತಿದ್ದ ವಿಷಯಗಳನ್ನು ಬೇರೆ ಬೇರೆ ಸ್ಥಳಗಳಲ್ಲಿಯೂ ಕಲಿಸುತ್ತಿದ್ದನು. 11:2-4 ಮತ್ತು ಮತ್ತಾಯ 6:9-13 ಹಾಗೂ 11:9-13 ಮತ್ತು ಮತ್ತಾಯ 7:7-11 ಹಾಗೂ 12:22-31 ಮತ್ತು ಮತ್ತಾಯ 6:25-33 ಈ ವಾಕ್ಯಭಾಗಗಳನ್ನು ಹೋಲಿಸಿ ನೋಡಿರಿ. **20**

**6:20** ಯೇಸು ಕ್ರಿಸ್ತನಲ್ಲಿ ಭರವಸೆಯುಳ್ಳವರಾಗಿದ್ದ ಬಡವರು ಅಥವಾ ಬಡವರಲ್ಲದವರಿಗಲ್ಲ ಬದಲಾಗಿ ಆತನನ್ನು ಹಿಂಬಾಲಿಸುವ ಸಲುವಾಗಿ ಎಲ್ಲವನ್ನೂ ಬಿಟ್ಟಿದ್ದ ಆತನ ಶಿಷ್ಯರಿಗೆ (5:11,28; 14:33; 18:28) ಈ ಮಾತುಗಳನ್ನು ಹೇಳಲಾಗಿದೆ. ಅವರ ಲಾಭ (ದೇವರ ರಾಜ್ಯ) ಯಾವುದೇ ವಿಧವಾದ ನಷ್ಟಕ್ಕಿಂತಲೂ ಅತ್ಯಂತ ಅಮೂಲ್ಯವಾದದ್ದಾಗಿತ್ತು. ಮತ್ತಾಯ 19:27-30; ಫಿಲಿಪ್ಪಿ 3:7-9; 1 ತಿಮೊ 6:6-10; ಜ್ಞಾನೋ 19:22ರೊಂದಿಗೆ ಹೋಲಿಸಿ ನೋಡಿರಿ. **21-23**

**6:21-23** ಈ ವಾಕ್ಯಗಳು ಸೂಚಿಸುವದೇನೆಂದರೆ ಶಿಷ್ಯತ್ವದ ಜೀವಿತ ಬಹಳ ಕಷ್ಟಕರವಾದದ್ದಾಗಿದೆ ಮತ್ತು ಕೆಲವೊಮ್ಮೆ ಹಸಿವು, ದುಃಖ ಅಲ್ಲದೆ ಪಾಪಿಗಳಾದ ಜನರಿಂದ ಗಂಭೀರವಾದ ಹಿಂಸೆಗಳು ಎದುರಾಗುತ್ತವೆ. ಆದರೆ ನಿಜವಾದ ಹಾಗೂ ನಿತ್ಯವಾದ ಧನ್ಯತೆಯು ಅವರದ್ದಾಗಿರುವದು. ಮತ್ತಾಯ 5:6,10-12ರೊಂದಿಗೆ ಹೋಲಿಸಿ ನೋಡಿರಿ. **22**

**6:22** *"ಮನುಷ್ಯಕುಮಾರನು"*– ಮತ್ತಾಯ 8:20. **24-26**

**6:24-26** ಈ ವಾಕ್ಯಗಳು ಯೇಸು ಕ್ರಿಸ್ತನು ಪರ್ವತದ ಮೇಲೆ ಮಾಡಿದ ಪ್ರಸಂಗದಲ್ಲಿ ಇಲ್ಲ. ಈ ಪರಿಸ್ಥಿತಿಗಳು ಕ್ರಿಸ್ತನಿಗಾಗಿ ಏನೂ ತ್ಯಾಗ ಮಾಡದವರಿಗೆ ಮತ್ತು ದೇವರಿಂದ

ಹೊಗಳಿಕೆ ಬಯಸಿದ ಮನುಷ್ಯರಿಂದ ಹೊಗಳಿಗೆ ಬಯಸುವವರಿಗೆ ಎದುರಾಗುವ ನೋವು, ನಷ್ಟ ಮತ್ತು ಶ್ರಮೆಗಳನ್ನು ಸೂಚಿಸುತ್ತವೆ. ಯೋಹಾನ 5:44; 12:43; 1 ತಿಮೊ 6:9-10; ಯಾಕೋಬ 5:1-4ರೊಂದಿಗೆ ಹೋಲಿಸಿ ನೋಡಿರಿ. ಯೆಶಾಯ 5:8-25ರಲ್ಲಿ ಹೇಳಲಾಗಿರುವ ಪರಿಸ್ಥಿತಿಗಳೊಂದಿಗೆ ಹೋಲಿಸಿ ನೋಡಿರಿ. **26**

**6:26** *"ಸುಳ್ಳು ಪ್ರವಾದಿಗಳು"*– ಮತ್ತಾಯ 7:15. **27-28**

- **6:27-28** ಮತ್ತಾಯ 5:44. **29-30**

- **6:29-30** ಮತ್ತಾಯ 5:39-42. **31**

- **6:31** ಮತ್ತಾಯ 7:12. **32-36**

- **6:32-36** ಮತ್ತಾಯ 5:46-47. **36**

- **6:36** ಮತ್ತಾಯ 5:48; ಎಫೆ 4:32; ಯಾಕೋಬ 2:13. **37**

- **6:37** ಮತ್ತಾಯ 7:1; 6:14. **38**

**6:38** ನಾವು ಸಮೃದ್ಧಿಯನ್ನು ಯಾವ ರೀತಿ ಹೊಂದಿಕೊಳ್ಳಬೇಕೆಂದು ಯೇಸು ಕ್ರಿಸ್ತನು ನೇಮಿಸಿದ್ದಾನೆ ಎಂಬದನ್ನು ಎಚ್ಚರಿಕೆಯಿಂದ ಗಮನಿಸಿರಿ – ನಾವು ಅದನ್ನು ಯಾರಿಂದಲೂ ಕೇಳಬಾರದು ಮತ್ತು ಇತರರಿಗೆ ಕೊಡುವವರಾಗಿರಬೇಕು. ನಾವು ಕೊಡುವದು ಎಷ್ಟರ ಮಟ್ಟಿಗೆ ಅರ್ಹವಾಗಿರುತ್ತದೆಯೋ ಅಷ್ಟು ಜನರು ನಮಗೆ ಕೊಡುವ ಹಾಗೆ ದೇವರು ಹೇಗೋ ಅಳತೆ ಮಾಡುವನು. ವಿಶ್ವಾಸಿಗಳು ತಮಗಿರುವದರಲ್ಲಿ ಸ್ವತಂತ್ರವಾಗಿ ಕೊಡುವಾಗ ಅವರಿಗೆ ದೊಡ್ಡ ವಾಗ್ದಾನ ಕೊಡಲಾಗಿದೆ. 2 ಕೊರಿಂಥ 9:6-8; ಕೀರ್ತನೆ 18:25-26; ಜ್ಞಾನೋ 11:24-25; 22:29; ಪ್ರಸಂಗಿ 11:1ರೊಂದಿಗೆ ಹೋಲಿಸಿ ನೋಡಿರಿ. ಆದರೆ ಖಂಡಿತವಾಗಿಯೂ ಯೇಸು ಕ್ರಿಸ್ತನು ಹಣ ಅಥವಾ ವಸ್ತುಗಳನ್ನು ಕೊಡುವದಕ್ಕಿಂತಲೂ ಹೆಚ್ಚಿನವುಗಳ ಬಗ್ಗೆ ಹೇಳಿದ್ದಾನೆ. ವಿಶ್ವಾಸಿಗಳು ತಮ್ಮ ಸಮಯ, ಶ್ರಮ, ಸಲಹೆ, ಮತ್ತು ಪ್ರೀತಿಪೂರ್ವಕವಾದ ಸೇವೆಯನ್ನು ಇತರರಿಗೆ ಕೊಡಬಹುದು. ಒಂದುವೇಳೆ ಅವರು ಈ ಕಾರ್ಯವನ್ನು ಮಾಡಿದರೆ ಒಂದಲ್ಲಾ ಒಂದು ರೀತಿಯಲ್ಲಿ ಅವರಿಗೆ ಒಂದಲ್ಲಾ ಒಂದು ಸಮಯದಲ್ಲಿ ಪ್ರತಿಫಲ ದೊರೆಯುವದು. **39**

- **6:39** ಮತ್ತಾಯ 15:14. **40**

- **6:40** ಮತ್ತಾಯ 10:24-25; ಯೋಹಾನ 13:16. **41-44**

- **6:41-44** ಮತ್ತಾಯ 7:3-5,16-18. **45**

- **6:45** ಮತ್ತಾಯ 12:34-35. **46**

**6:46** ಮತ್ತಾಯ 7:21; ಯೋಹಾನ 13:13; ಮಲಾಕಿ 1:6. ವಿಧೇಯತೆ ನಿಜವಾದ ಶಿಷ್ಯನ ಗುರುತಾಗಿದೆ. **47-49**

- **6:47-49** ಮತ್ತಾಯ 7:24-27.

# 7 1-10

- **7:1-10** ಮತ್ತಾಯ 8:5-13. **3**

**7:3** ಮತ್ತಾಯನ ದಾಖಲೆಯ ದೃಷ್ಟಿಕೋನದಿಂದ ನೋಡಿದರೆ ಶತಾಧಿಪತಿಯೇ ತಡವಾಗಿ ಬಂದನು ಅನ್ನಿಸುತ್ತದೆ. **4**

**7:4** ಇದನ್ನು ತನ್ನ ಬಗ್ಗೆಯೇ ಯೋಚಿಸಿಕೊಂಡ ಮನುಷ್ಯನೊಂದಿಗೆ (ವ 6,7) ಹೋಲಿಸಿರಿ. ಯೆಹೂದ್ಯರು ರೋಮನ್ನರು ಅಥವಾ ಬೇರೆ ಜನಾಂಗಗಳ ಬಗ್ಗೆ ಈ ರೀತಿಯಾಗಿ ಮಾತನಾಡುವದು ಬಹಳ ಅಪರೂಪ. **5**

**7:5** *"ಸಭಾಮಂದಿರ"*– ಮತ್ತಾಯ 4:23. **11**

**7:11** ನಾಯಿನೆಂಬ ಊರು ನಜರೇತಿನಿಂದ ಹತ್ತು ಕಿಲೊ ಮೀಟರ್ ದೂರದಲ್ಲಿತ್ತು. **13**

- **7:13** 19:41; ಮತ್ತಾಯ 9:36; 14:14; 15:32; ಯೋಹಾನ 11:35,38; ಇಬ್ರಿ 4:15 ನೋಡಿರಿ. **15**

**7:15** ಯೇಸು ಕ್ರಿಸ್ತನು ಸತ್ತವರನ್ನು ಬದುಕಿಸಿದನು ಎಂಬದಾಗಿ ಮೂರು ಸಲ ಬರೆಯಲ್ಪಟ್ಟಿದೆ – ಇಲ್ಲಿ, 8:53-55ರಲ್ಲಿ ಮತ್ತು ಯೋಹಾನ 11:43-44ರಲ್ಲಿ. ಯೇಸು ಕ್ರಿಸ್ತನ ಅದ್ಭುತಕಾರ್ಯಗಳ ಬಗ್ಗೆ ತಿಳಿಯಲು ಮತ್ತಾಯ 8:3 ರ ನೋಟ್ಸ್ ನೋಡಿರಿ. **16**

**7:16** 1:64-65; 2:13,20,28; 5:25; 13:13; 17:15; 18:43; 23:47; 24:53 ನೋಡಿರಿ. ಇದು ಲೂಕನ ಸುವಾರ್ತೆಯ ಗುಣಲಕ್ಷಣದ ನೋಟ್ ಆಗಿದೆ. ಕೀರ್ತನೆ 31:1-3ರಲ್ಲಿ ಸ್ತುತಿಯ ಕುರಿತಾದ ನೋಟ್ ನೋಡಿರಿ. ಅವರು ಯೇಸು ಕ್ರಿಸ್ತನನ್ನು ಪ್ರವಾದಿ ಎಂದು ಕರೆದರು (ಮತ್ತಾಯ 16:13-14; 21:11). ಆತನು ಪ್ರವಾದಿಗಿಂತಲೂ

ಹೆಚ್ಚಿನವನಾಗಿದ್ದಾನೆ ಎಂಬದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ (ಮತ್ತಾಯ 16:15-17). **18-35**

**7:18-35** ಮತ್ತಾಯ 11:2-19. ಆ ಸಮಯದಲ್ಲಿ ಯೋಹಾನನು ತನ್ನ ಉಪದೇಶಗಳ ನಿಮಿತ್ತ ಸೆರೆಮನೆಯಲ್ಲಿದ್ದನು. **29-30**

**7:29-30** ಈ ವಾಕ್ಯಗಳು ಮತ್ತಾಯನ ಸುವಾರ್ತೆಯಲ್ಲಿ ಇಲ್ಲ. ಬಹುತೇಕ ಸಾಮಾನ್ಯ ಜನರು ಪಶ್ಚಾತ್ತಾಪಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಯೋಹಾನನ ಬಳಿಗೆ ಬಂದಿದ್ದರು. ಮತ್ತಾಯ 3:5-6 ನೋಡಿರಿ. ಆದರೆ ಧಾರ್ಮಿಕ ನಾಯಕರು ಯೋಹಾನನ ಉಪದೇಶವನ್ನು ತಿರಸ್ಕರಿಸಿದರು – ಮತ್ತಾಯ 3:7-10. ಹಾಗೆ ಮಾಡುವದರಿಂದ ಅವರು ತಮ್ಮ ವಿಷಯವಾಗಿದ್ದ ದೇವರ ಉದ್ದೇಶವನ್ನು ತಿರಸ್ಕರಿಸಿದರು. **30**

**7:30** *"ಧರ್ಮೋಪದೇಶಕರು"*– ಮತ್ತಾಯ 22:35ರಲ್ಲಿ ನೋಟ್ ನೋಡಿರಿ. **36-50**

**7:36-50** ಲೂಕನು ಮಾತ್ರವೇ ಈ ಘಟನೆಯನ್ನು ತಿಳಿಸಿದ್ದಾನೆ. ಮತ್ತಾಯ, ಮಾರ್ಕ ಮತ್ತು ಯೋಹಾನನು ಯೇಸು ಕ್ರಿಸ್ತನ ತಲೆಗೆ ತೈಲವನ್ನು ಹಾಕಿದ ಬೇರೊಂದು ಸಂದರ್ಭವನ್ನು ತಿಳಿಸಿದ್ದಾರೆ (ಮತ್ತಾಯ 26:6-13; ಮಾರ್ಕ 14:3-9; ಯೋಹಾನ 12:1-8). **36**

**7:36** *"ಫರಿಸಾಯರು"*– ಮತ್ತಾಯ 3:7. **37**

**7:37** *"ದುರಾಚಾರಿ"*– ಇದರ ಅರ್ಥ ಬಹುತೇಕ ಆಕೆ ಜಾರಿಣಿ ಅಥವಾ ವೇಶ್ಯೆಯಾಗಿದ್ದಿರಬಹುದು. ಆದರೆ ಆಕೆ ಯೇಸು ಕ್ರಿಸ್ತನ ಬೋಧನೆಗಳನ್ನು ಕೇಳಿದ್ದಳು, ಪಶ್ಚಾತ್ತಾಪಪಟ್ಟಿದ್ದಳು ಮತ್ತು ಆತನಲ್ಲಿ ನಂಬಿಕೆಯನ್ನಿಟ್ಟಿದ್ದಳು ಎಂಬದು ಸ್ಪಷ್ಟವಾಗಿದೆ (ವ 50). **38**

**7:38** ಈ ರೀತಿಯಾಗಿ ಆಕೆ ತನ್ನ ಪಶ್ಚತ್ತಾಪ ಮತ್ತು ನಂಬಿಕೆ ಹಾಗೂ ಪ್ರಭಾವವುಳ್ಳ ಕರ್ತನ ಮೇಲೆ ತನಗಿರುವ ಶುದ್ಧವಾದ ಪ್ರೀತಿಯನ್ನು ತೋರ್ಪಡಿಸಿದಳು (ವ 47). **39**

**7:39** ಯೇಸು ಕ್ರಿಸ್ತನು ಪ್ರವಾದಿಗಿಂತಲೂ ಹೆಚ್ಚಿನವನಾಗಿದ್ದಾನೆ ಎಂದು ಫರಿಸಾಯರು ಒಮ್ಮೆಯೂ ಯೋಚಿಸಲಿಲ್ಲ. ಅನೇಕ ಫರಿಸಾಯರು ಇತರರು ಹೇಗೆ ಕಡೆಗಣಿಸುತ್ತಿದ್ದರು ಎಂಬದಕ್ಕೆ ಇವನು ಆ ಸ್ತ್ರೀಯ ಬಗ್ಗೆ ಯೋಚಿಸಿದ್ದು ಉತ್ತಮ ಉದಾಹರಣೆಯಾಗಿದೆ.

18:9-12 ನೋಡಿರಿ. **41**

**7:41** *"ಬೆಳ್ಳಿ ನಾಣ್ಯ"*– "ದೆನಾರಿಯಸ್" – ಆಳಿನ ಒಂದು ದಿನದ ಸಂಬಳ (ಮತ್ತಾಯ 20:2). **44-46**

**7:44-46** ಸಹಜವಾಗಿ ಅತಿಥಿಗಳಿಗೆ ಮಾಡಬೇಕಾದ ಸತ್ಕಾರವನ್ನು ಈ ಫರಿಸಾಯನು ಮಾಡಲಿಲ್ಲ. ಯೇಸು ಕ್ರಿಸ್ತನು ಇಲ್ಲಿ ತನಗೆ ಸತ್ಕಾರ ದೊರೆಯಲಿಲ್ಲ ಎಂದು ಮಾತನಾಡುತ್ತಿಲ್ಲ ಬದಲಾಗಿ ಸಧಾರಣ ಅತಿಥಿ ಸತ್ಕಾರಕ್ಕಿಂತಲೂ ಹೆಚ್ಚಿನದಾಗಿರುವ ಪ್ರಾಮುಖ್ಯವಾದ ಪಾಠವನ್ನು ಫರಿಸಾಯನಿಗೆ ಕಲಿಸಲು ಪ್ರಯತ್ನಿಸುತ್ತಿದ್ದಾನೆ. ಕರ್ತನಾದ ಯೇಸು ಕ್ರಿಸ್ತನು ನಾವು ಆತನ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತೇವೆ, ನಮ್ಮ ಮನೋಭಾವನೆ ಏನಾಗಿರುತ್ತದೆ ಎಂಬದನ್ನು ಗಮನಿಸುತ್ತಾನೆ ಎಂಬದನ್ನು ನಾವು ಮರೆಯಬಾರದು. **47**

**7:47** ದೇವರ ಮೇಲೆ ಆಕೆಗೆ ಪ್ರೀತಿ ಇದ್ದದ್ದರಿಂದ ಆಕೆಯನ್ನು ಕ್ಷಮಿಸಲಿಲ್ಲ ಬದಲಾಗಿ ಆಕೆ ಕ್ಷಮಾಪಣೆ ಹೊಂದಿದ್ದರಿಂದಲೇ ಆತನನ್ನು ಬಹಳವಾಗಿ ಪ್ರೀತಿಸಿದಳು. 41-43 ವಚನಗಳ ಅರ್ಥ ಇದುವೇ ಆಗಿದೆ. ಯೇಸು ಕ್ರಿಸ್ತನ ವಿಷಯದಲ್ಲಿ ಆಕೆ ನಡೆದುಕೊಂಡ ರೀತಿಯಿಂದ ತಾನು ಕ್ಷಮಾಪಣೆ ಹೊಂದಿದ್ದೇನೆ ಮತ್ತು ದೇವರನ್ನು ಪ್ರೀತಿಸುತ್ತೇನೆ ಎಂಬದನ್ನು ತೋರ್ಪಡಿಸಿದಳು. ಮತ್ತಾಯ 25:32-46ರೊಂದಿಗೆ ಹೋಲಿಸಿ ನೋಡಿರಿ. ಮತ್ತಾಯ 6:12; 9:5-7; 12:31; 18:23-25ರಲ್ಲಿ ಕ್ಷಮಾಪಣೆಯ ಕುರಿತಾದ ನೋಟ್ಸ್ ನೋಡಿರಿ. **48-49**

**7:48-49** ಮತ್ತಾಯ 9:2-6 ರೊಂದಿಗೆ ಹೋಲಿಸಿ ನೋಡಿರಿ. **50**

**7:50** ದೇವರ ಮೇಲೆ ಆಕೆಗಿದ್ದ ಪ್ರೀತಿ ಆಕೆಯನ್ನು ರಕ್ಷಿಸಿ, ಸಮಾಧಾನ ಉಂಟುಮಾಡಲಿಲ್ಲ, ಹಾಗೆಯೇ ಕ್ರಿಸ್ತನ ಪಾದಗಳ ಬಳಿಯಲ್ಲಿ ಕಣ್ಣೀರಿಟ್ಟದ್ದು ಇದಕ್ಕೆ ಕಾರಣವಲ್ಲ. ಆಕೆಯ ನಂಬಿಕೆ ಆಕೆಯನ್ನು ರಕ್ಷಿಸಿತು. ಇಲ್ಲಿ ರಕ್ಷಣೆ ಎಂದರೆ ಕ್ಷಮಾಪಣೆ, ಪಾಪದ ಜೀವಿತದಿಂದ ಬಿಡುಗಡೆ ಮತ್ತು ದೇವರ ಸಂಗಡ ಸರಿಯಾದ ಅನ್ಯೋನ್ಯತೆಯಾಗಿದೆ. ರೋಮಾ 3:22-24; 5:1; ಗಲಾ 2:16; 3:26; ಎಫೆ 2:8-9 ನೋಡಿರಿ.

# 8[1]

**8:1** *"ದೇವರ ರಾಜ್ಯ"*– ಮತ್ತಾಯ 4:17. **2**

**8:2** ಆಕೆಯನ್ನು ಮಗ್ದಲದ ಮರಿಯಳು ಎಂದು ಕರೆಯಲಾಗಿದೆ ಯಾಕಂದರೆ ಆಕೆ ಗಲಿಲಾಯ ಸಮುದ್ರದ ಪಶ್ಚಿಮ ಭಾಗದಲ್ಲಿದ್ದ ಮಗ್ದಲ ಪಟ್ಟಣ ಈಕೆಯ ಊರಾಗಿತ್ತು. **3**

**8:3** ಯೇಸು ಕ್ರಿಸ್ತನ ಹತ್ತಿರ ಈ ಲೋಕದ ಸಾಮಗ್ರಿಗಳಲ್ಲಿ ಯಾವುದೂ ಇರಲಿಲ್ಲ (ಮತ್ತಾಯ 8:20), ಮತ್ತು ಆತನ ಶಿಷ್ಯರು ಆತನನ್ನು ಹಿಂಬಾಲಿಸುವದಕ್ಕಾಗಿ ತಮಗಿರುವದನ್ನೆಲ್ಲಾ ತ್ಯಜಿಸಿದ್ದರು (5:11,18; 18:28). ತಮ್ಮ ಹಸಿವೆಯನ್ನು ನೀಗಿಸಿಕೊಳ್ಳಲು ಅವರೆಂದಿಗೂ ಅದ್ಭುತಗಳನ್ನು ಮಾಡಿಕೊಳ್ಳಲಿಲ್ಲ, ಅವರು ಹಣ ಸಂಗ್ರಹ ಮಾಡಲಿಲ್ಲ ಅಥವಾ ಯಾರಿಂದಲೂ ಹಣ ಬೇಡಲಿಲ್ಲ. ಯಾರೆಲ್ಲಾ ಅವರಿಗೆ ಕೊಡಲು ಬಯಸಿದರೋ ಅವರಿಂದಲೇ ಅವರು ಧನಸಹಾಯ ಪಡೆಯುತ್ತಿದ್ದರು – 10:4-7; ಮತ್ತಾಯ 10:9-11. 1 ಕೊರಿಂಥ 9:6-14; ಯಾಜಕ 7:14ರೊಂದಿಗೆ ಹೋಲಿಸಿ ನೋಡಿರಿ. **4-15**

**8:4-15** ಮತ್ತಾಯ 13:2-23. ಲೂಕನ ಸುವಾರ್ತೆಯಲ್ಲಿ ಈ ಸಾಮ್ಯವನ್ನು ಮತ್ತಾಯ 13 ರಲ್ಲಿ ಬರೆದಿರುವ ಪ್ರಕಾರ ಹೇಳದೆ ಬೇರೆ ಪದಗಳ ಮೂಲಕ ಬೇರೆ ಸಮಯದಲ್ಲಿ ನಡೆದಿರುವ ಹಾಗೆ ಹೇಳಲಾಗಿದೆ. **5**

**8:5** *"ದಾರಿಯ ಮಗ್ಗುಲಲ್ಲಿ ಬಿದ್ದು ತುಳಿಯಲ್ಪಟ್ಟವು"*– ಮತ್ತಾಯ 13:4ರಲ್ಲಿ ಈ ಪದಗಳು ಇಲ್ಲ. ದೇವರ ವಾಕ್ಯ ಒಳ್ಳೆಯ ಬೀಜದ ವಿಷಯದಲ್ಲಿಯೂ ಗಂಭೀರತೆ ಇಲ್ಲದಿರುವದನ್ನು ಇದು ಸೂಚಿಸುತ್ತದೆ. **6**

**8:6** ಮತ್ತಾಯ 13:6 ರಲ್ಲಿ ಆಳವಿಲ್ಲದ ನೆಲದ ಬಗ್ಗೆ ಹೇಳಲಾಗಿದೆ. ಆಳವಿಲ್ಲದ ನೆಲದಲ್ಲಿ ತೇವಾಂಶ ಇರುವದಿಲ್ಲ ಹಾಗೆಯೇ ಹೃದಯಗಳಲ್ಲಿ ಆಳವಿಲ್ಲವೆಂದರೆ ದೇವರಿಂದ ಬರುವ ಆತ್ಮೀಕ ವಿಷಯಗಳಲ್ಲಿ ಸಂಗ್ರಹಿಸಿಕೊಳ್ಳಲು ಆಗುವದಿಲ್ಲ. **14**

**8:14** *"ಭೋಗಗಳು"*– ಈ ಪದವನ್ನು ಮತ್ತಾಯ 13:22ರಲ್ಲಿ ನೋಡಬಹುದು. ಮನಸ್ಸಿನಲ್ಲಿ ಬಿತ್ತಲ್ಪಡುವ ವಾಕ್ಯಗಳನ್ನು ತೆಗೆದುಹಾಕುವಲ್ಲಿ ಚಿಂತೆಗಳು ಮತ್ತು ಐಶ್ವರ್ಯಗಳನ್ನು ಯಶ್ವಸಿಯಾಗುವ ಹಾಗೆಯೇ ಭೋಗಗಳು ಸಹ ಯಶಸ್ವಿಯಾಗುತ್ತವೆ. **15**

**8:15** ಇಲ್ಲಿ ದೇವರಿಗಾಗಿ ಉತ್ತಮ ಫಲವನ್ನು ಕೊಡುವ ವ್ಯಕ್ತಿಯ ಗುಣಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲಾಗಿದೆ (ಮತ್ತಾಯ 15:18-20; ಯೆರೆ 17:9 ನೋಡಿರಿ).

ಒಂದುವೇಳೆ ಯಾವನಿಗಾದರೂ ಯುಕ್ತವಾದ ಮತ್ತು ಒಳ್ಳೆಯ ಹೃದಯವಿದೆ ಎಂದರೆ ಅದಕ್ಕೆ ಕಾರಣ ದೇವರು ಅವನ ಹೃದಯದಲ್ಲಿ ಆಳವಾಗಿ ಕಾರ್ಯಮಾಡಿದ್ದಾನೆ, ಅವನಿಗೆ ಹೊಸ ಸ್ವಭಾವವನ್ನು ಅನುಗ್ರಹಿಸಿದ್ದಾನೆ ಮತ್ತು ಹೊಸ ವ್ಯಕ್ತಿಯನ್ನಾಗಿ ಮಾರ್ಪಡಿಸಿದ್ದಾನೆ. 2 ಕೊರಿಂಥ 5:17; ಎಫೆ 2:1-10 ನೋಡಿರಿ. ದೇವರ ವಾಕ್ಯಗಳನ್ನು ಹೃದಯದಲ್ಲಿಟ್ಟುಕೊಂಡು ಆತನ ಕಾರ್ಯಗಳಲ್ಲಿ ಮುಂದುವರೆಯುವಾಗ ಮಾತ್ರವೇ ಒಳ್ಳೆಯ ಫಲವನ್ನು ಕೊಡಲು ಸಾಧ್ಯ ಎಂಬದನ್ನು ಮರೆಯಬೇಡಿರಿ. 1 ಕೊರಿಂಥ 15:58 ನೋಡಿರಿ. **16**

**8:16** ಮತ್ತಾಯ 5:14-15. ಯೇಸು ಕ್ರಿಸ್ತನು ತನ್ನ ಶಿಷ್ಯರ ಬಗ್ಗೆ ಮಾತನಾಡುತ್ತಿದ್ದಾನೆ. **17**

- **8:17** ಮತ್ತಾಯ 10:26. **18**

- **8:18** ಮತ್ತಾಯ 13:12. **19-21**

- **8:19-21** ಮತ್ತಾಯ 12:46-50. **21**

**8:21** 6:47; 11:28; ಯೋಹಾನ 14:21 ನೋಡಿರಿ. ನಿಜವಾಗಿಯೂ ದೇವರು ಹೇಳುವ ಕಾರ್ಯಗಳನ್ನು ಮಾಡುತ್ತಾ ಆತನ ವಾಕ್ಯಗಳಿಗೆ ವಿಧೇಯರಾಗಿ ನಡೆದುಕೊಳ್ಳುವದಕ್ಕೆ ಕರ್ತನಾದ ಯೇಸು ಕ್ರಿಸ್ತನು ಯಾವಾಗಲೂ ಆದ್ಯತೆ ಕೊಡುತ್ತಾನೆ. **22-25**

- **8:22-25** ಮತ್ತಾಯ 8:23-27. **26-37**

- **8:26-37** ಮತ್ತಾಯ 8:28-34; ಮಾರ್ಕ 5:1-20. **31**

**8:31** ಪಾತಾಳವು ದುರಾತ್ಮಗಳು ಮತ್ತು ಸೈತಾನನಿಗಾಗಿ ಸಿದ್ಧಮಾಡಲಾಗಿರುವ ಸ್ಥಳವಾಗಿದೆ – ಪ್ರಕ 9:1-2; 20:1-3. ದೇವರು ಆದಿಯಿಂದಲೇ ದುರಾತ್ಮಗಳನ್ನು ಯಾಕೆ ಪಾತಾಳದೊಳಗೆ ಹಾಕಲಿಲ್ಲ? 1 ಪೂರ್ವ 21:1ರ ನೋಟ್ಸ್ ನೋಡಿರಿ. **40-56**

- **8:40-56** ಮತ್ತಾಯ 9:18-26; ಮಾರ್ಕ 5:22-43. **43**

**8:43** *“ಆಕೆ ತನ್ನ ಕೈಯಲ್ಲಿದ್ದದ್ದೆಲ್ಲವನ್ನೂ ಖರ್ಚುಮಾಡಿದ್ದಳು”*– ಈ ಕಾರ್ಯಗಳು ಇಂದಿಗೂ ನಡೆಯುತ್ತಿರುವದು ದುಃಖದ ವಿಷಯವಾಗಿದೆ.

## 9 1-6

- **9:1-6** ಮತ್ತಾಯ 10:1. **7-9**
- **9:7-9** ಮತ್ತಾಯ 14:1-2. **8**
- **9:8** ಮಾರ್ಕ 6:15. **10-17**
- **9:10-17** ಮತ್ತಾಯ 14:13-21. **11**

**9:11** *"ದೇವರ ರಾಜ್ಯ"*– ಮತ್ತಾಯ 4:17. **18-20**

- **9:18-20** ಮತ್ತಾಯ 16:13-16. **21**
- **9:21** ಮತ್ತಾಯ 8:4; 16:20; ಮಾರ್ಕ 8:20. **22-27**
- **9:22-27** ಮತ್ತಾಯ 16:21-28. **22**

**9:22** ಮತ್ತಾಯ 8:20 ರಲ್ಲಿ ಮನುಷ್ಯ ಕುಮಾರನ ಕುರಿತಾದ ನೋಟ್ ನೋಡಿರಿ. **23**

**9:23** *"ಶಿಲುಬೆ"*– ಶಿಲುಬೆ ಮರಣವನ್ನು ಸೂಚಿಸುತ್ತದೆ (ಮತ್ತಾಯ 10:38; 16:24ರಲ್ಲಿ ನೋಟ್ಸ್ ನೋಡಿರಿ). "ದಿನಾಲೂ" –ಪದ ಬಹಳ ಪ್ರಾಮುಖ್ಯವಾಗಿದೆ. ನಮ್ಮ ಮತ್ತು ಕ್ರಿಸ್ತನ ವಿಷಯದಲ್ಲಿ ನಮಗಿರಬೇಕಾದ ಮನೋಭಾವನೆಯನ್ನು ದಿನದಿನವೂ ನೂತನಪಡಿಸಿಕೊಳ್ಳುತ್ತಿರಬೇಕು. ಒಂದುವೇಳೆ ನಾವು ಒಮ್ಮೆ ಮಾತ್ರವೇ ಮಾಡಿ ನಂತರ ಅದನ್ನು ಬಿಟ್ಟುಬಿಡುವದಾದರೆ ಅಥವಾ ಅದರ ಬಗ್ಗೆ ಮರೆತುಹೋಗುವದಾದರೆ, ನಾವು ಮಾರ್ಗತಪ್ಪುವವರಾಗುತ್ತೇವೆ. ಸರಿಯಾದ ಮನೋಭಾವನೆ ಏನೆಂದರೆ: ನಮ್ಮನ್ನು ನಿರಾಕರಿಸಿಕೊಳ್ಳಬೇಕು ಅಂದರೆ ನಮ್ಮ ಪಾಲಿಗೆ ನಾವು ಸಾಯಬೇಕು ಯಾಕಂದರೆ ಯೇಸು ಕ್ರಿಸ್ತನು ನಮ್ಮನ್ನು ಹಾಗೂ ನಮ್ಮ ಸೇವೆಯನ್ನು ಪೂರ್ತಿಯಾಗಿ ಬಯಸುವವನಾಗಿದ್ದಾನೆ. ಇಲ್ಲಿ (ಅಥವಾ ಹೊಸ ಒಡಂಬಡಿಕೆಯಲ್ಲಿ ಯಾವ ಭಾಗದಲ್ಲಿಯೂ ಈ ನೋಟ್ಸ್ ಗಳ ಬರಹಗಾರನಿಗೆ) ತನ್ನನ್ನು ಹೆಚ್ಚಿಸಿಕೊಳ್ಳುವ ಅಥವಾ ತನ್ನ ಕುರಿತಾದ ಒಳ್ಳೆಯ ಆಲೋಚನೆಗಳ ಬಗ್ಗೆ ಏನೂ ಸಿಕ್ಕಿಲ್ಲ. ಇದು ತದ್ವಿರುದ್ಧವಾದ ಕಾರ್ಯವಾಗಿದೆ. ನಾವು ಕ್ರಿಸ್ತನನ್ನು ಘನಪಡಿಸಿಸಬೇಕೇ ಹೊರತು ನಮ್ಮನ್ನು ಹೆಚ್ಚಿಸಿಕೊಳ್ಳಬಾರದು; ಆತನ ಬಗ್ಗೆ ಒಳ್ಳೆಯ ಯೋಚನೆಯುಳ್ಳವರಾಗಿರಬೇಕು. ಇದು ನಾವು ನಮ್ಮ ಆಧುನಿಕ ಮನಃಶಾಸ್ತ್ರದ ಬಗ್ಗೆ ಕೇಳಿಸಿಕೊಳ್ಳುವ ವಿಷಯಕ್ಕಿಂತ ವ್ಯತ್ಯಾಸವಾದದ್ದಾಗಿದೆ ಮತ್ತು ಸಹಜವಾಗಿ ನಮ್ಮ ಸಭೆಗಳ ಪುಲ್ಪೀಟ್ ಗಳಿಂದಲೂ ಇಂಥ ಮಾತುಗಳು ಅಪರೂಪವಾಗಿವೆ. **24**

**9:24** ಯೇಸು ಕ್ರಿಸ್ತನು ಹೇಳಿರುವ ಅನೇಕ ಸತ್ಯ ಸಂಗತಿಗಳಲ್ಲಿ ಇದಕ್ಕಿಂತ ಹೆಚ್ಚು ಸಲ ಬರೆಯಲ್ಪಟ್ಟಿರುವ ಸಂಗತಿ ಬೇರೆ ಯಾವುದಾದರು ಇದೆಯೇ? ಮತ್ತಾಯ 10:38-39; 16:24-25; ಮಾರ್ಕ 8:34-35; ಲೂಕ 14:26-27; 17:33; ಯೋಹಾನ 12:25. ಈ ವಿಷಯ ಅನೇಕ ಸಲ ಬರೆಯಲ್ಪಟ್ಟಿರುವದು ಇದರ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. **26**

- **9:26** ಮತ್ತಾಯ 10:33; ಮಾರ್ಕ 8:38. **28-36**

- **9:28-36** ಮತ್ತಾಯ 17:1-8. **28**

**9:28** ಎಂಟು ದಿವಸಗಳಾದ ನಂತರ ಈ ಘಟನೆ ಸಂಭವಿಸಿತು ಎಂಬದಾಗಿ ಲೂಕನು ಹೇಳುತ್ತಾನೆ: ಮತ್ತಾಯ ಮತ್ತು ಮಾರ್ಕನು ಆರು ದಿವಸಗಳ ನಂತರ ಎಂದು ಹೇಳಿದ್ದಾರೆ. ಇಲ್ಲಿ ಅವರು 18-27 ವಚನಗಳ ಘಟನೆಗಳು ಮತ್ತು ರೂಪಾಂತರ ಕಾರ್ಯದ ನಡುವೆಯಿರುವ ದಿವಸಗಳು ಮಾತ್ರ ಎಣಿಸಿದ್ದಾರೆ, ಆದರೆ ಲೂಕು ಎರಡೂ ಕಾರ್ಯಗಳ ದಿವಸಗಳನ್ನು ಸೇರಿಸಿದ್ದಾನೆ. **31**

**9:31** ಲೂಕನು ಮಾತ್ರವೇ ಮೋಶೆ ಮತ್ತು ಎಲೀಯನು ಹೊಳೆಯುವವರಾಗಿ ಕಾಣಿಸಿಕೊಂಡರು ಹಾಗೂ ಆ ಸಮಯದಲ್ಲಿ ಯೆರೂಸಲೇಮಿನಲ್ಲಿ ಯೇಸು ಕ್ರಿಸ್ತನು ತನ್ನ ಪ್ರಾಣ ಕೊಡುವನು ಎಂಬದರ ಬಗ್ಗೆ ಮಾತನಾಡಿದರು ಎಂದು ತಿಳಿಸಿದ್ದಾನೆ. **32**

**9:32** ಲೂಕನು ಮಾತ್ರವೇ ಶಿಷ್ಯರ ನಿದ್ರಾವಸ್ಥೆಯ ಬಗ್ಗೆ ತಿಳಿಯಪಡಿಸಿದ್ದಾನೆ. ಮತ್ತಾಯ 26:40,43ರೊಂದಿಗೆ ಹೋಲಿಸಿ ನೋಡಿರಿ. ಮಾನವ ಚರಿತ್ರೆಯ ಅತ್ಯಂತ ಪ್ರಾಮುಖ್ಯವಾದ ಘಟನೆಗಳ ಸಮಯದಲ್ಲಿ ಶಿಷ್ಯರು ಬಹುತೇಕ ನಿರ್ಲಕ್ಷ್ಯತನವನ್ನು ತೋರಿದ್ದಾರೆ! ಮತ್ತು ನಮ್ಮಲ್ಲಿ ಯಾರೊಬ್ಬರೂ ನಾವು ಅವರಿಗಿಂತ ಉತ್ತಮರು ಅಥವ ಬುದ್ಧಿವಂತರು ಎಂಬದಾಗಿ ಅಂದುಕೊಳ್ಳಬಾರದು. **36**

- **9:36** ಮಾರ್ಕ 9:9-10. **37-42**

**9:37-42** ಮತ್ತಾಯ 17:14-18. ದುರಾತ್ಮಪೀಡನೆಗೆ ಒಳಗಾಗಿರುವವರಲ್ಲಿ ಕೆಲವೊಮ್ಮೆ ಕಾಣಿಸಿಕೊಳ್ಳುವ ಲಕ್ಷಣಗಳನ್ನು ಗಮನಿಸಿರಿ. **44-45**

- **9:44-45** ಮತ್ತಾಯ 17:22-23. **46-48**

- **9:46-48** ಮತ್ತಾಯ 18:1-5; 10:40; 20:25-28. **49-50**

- **9:49-50** ಮಾರ್ಕ 9:38-40. **51-56**

**9:51-56** ಲೂಕನು ಮಾತ್ರವೇ ಈ ಘಟನೆಯನ್ನು ದಾಖಲಿಸಿದ್ದಾನೆ. **51**

**9:51** 24:51; ಮಾರ್ಕ 16:19; ಅಪೊ 1:9 ನೋಡಿರಿ. ಯೇಸು ಕ್ರಿಸ್ತನಿಗೆ ಯೆರೂಸಲೇಮಿನಲ್ಲಿ ಏನಾಗುತ್ತದೆ ಎಂಬದಾಗಿ ಗೊತ್ತಿದ್ದರೂ ಆತನು ಅಲ್ಲಿಗೆ ಹೋದದ್ದು ದೇವರ ಮೇಲೆ ಆತನಿಗಿದ್ದ ಭರವಸೆಯನ್ನು ಸೂಚಿಸುತ್ತದೆ (ವ 22,44). **52-53**

**9:52-53** ಸಮಾರ್ಯದವರು ಮತ್ತು ಯೆಹೂದ್ಯರ ನಡುವೆ ವೈರತ್ವ ಇತ್ತು. ಯೋಹಾನ 4:9 ನೋಡಿರಿ. ಯೆಹೂದ್ಯನಾಗಿದ್ದ ಯೇಸು ಕ್ರಿಸ್ತನು ಅವರ ಪ್ರದೇಶದ ಮೇಲೆ ಹಾದುಹೋಗುತ್ತಿರುವಾಗ ಆತನನ್ನು ಅಂಗೀಕರಿಸಿಕೊಳ್ಳಲು ಅವರು ಬಯಸಲಿಲ್ಲ. **54**

**- 9:54** ಮಾರ್ಕ 3:17.

*"ಅವರನ್ನು ದಹಿಸಿಬಿಡಲಿ"*– ಯಾಕೋಬ ಮತ್ತು ಯೋಹಾನನು 2 ಅರಸು 1:9-12 ವಾಕ್ಯಭಾಗಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು ಮತ್ತು ಯೇಸು ಕ್ರಿಸ್ತನು ಅವಮಾನವಾಗಿದೆ ಎಂಬದಾಗಿ ನೆನೆಸಿ ಅವರು ಈ ರೀತಿಯಾಗಿ ಮಾತನಾಡಿದರು. ಎಲೀಯನ ಕಾಲದ ಪರಿಸ್ಥಿತಿ ಮತ್ತು ತಮ್ಮ ಪರಿಸ್ಥಿತಿ ಭಿನ್ನವಾಗಿದೆ ಎಂಬದನ್ನು ಅವರು ಅರಿತುಕೊಳ್ಳಲಿಲ್ಲ. **55**

**9:55** ಅವರು ಪರ್ವತ ಪ್ರಸಂಗ ಕೇಳಿಸಿಕೊಂಡಿದ್ದರು ಆದರೆ ಅವರ ಆಲೋಚನೆಗಳು ಅದಕ್ಕೆ ವಿರುದ್ಧವಾಗಿದ್ದವು (ಮತ್ತಾಯ 5:1-10). **56**

**9:56** *"ಮನುಷ್ಯಕುಮಾರನು ಮಾನವರ ಜೀವಿತವನ್ನು ಹಾಳುಮಾಡಲು ಬಂದಿಲ್ಲ ಬದಲಾಗಿ ರಕ್ಷಿಸಲು ಬಂದಿದ್ದಾನೆ"*– ಲೂಕ 19:10; ಯೋಹಾನ 3:17. **57-62**

**9:57-62** ಮತ್ತಾಯ 8:19-22 ನೋಡಿರಿ (ವ 61,62 ಮತ್ತಾಯನ ಸುವಾರ್ತೆಯಲ್ಲಿ ಇಲ್ಲ). **61**

**9:61** *"ಆದರೆ ಮೊದಲು"*– 59 ನೇ ವಚನದಲ್ಲಿ ಹೇಳಲಾಗಿರುವ ವ್ಯಕ್ತಿಯ ಹಾಗೆ ಈತನಿಗೂ ಮೊದಲು ಬೇರೆ ಯಾವುದನ್ನೋ ಮಾಡಬೇಕಾಗಿತ್ತು. ಇದರಿಂದ ಮತ್ತು ಯೇಸು ಕ್ರಿಸ್ತನು ಅವನಿಗೆ ಹೇಳಿದ್ದರಿಂದ, ಆ ವ್ಯಕ್ತಿಯ ಆದ್ಯತೆಗಳು ಸರಿಯಾಗಿರಲಿಲ್ಲ ಎಂಬದನ್ನು ನಾವು ತಿಳಿಯಬಹುದು. ಯೇಸು ಕ್ರಿಸ್ತನ ಉತ್ತರ ಸಮಂಜಸವಲ್ಲದಂತೆ ಅನ್ನಿಸುತ್ತದೆಯೇ? ಯೇಸು ಕ್ರಿಸ್ತನಲ್ಲಿ ಭರವಸೆಯುಳ್ಳವರು ಮತ್ತು ಆತನ ಸೇವೆ ಮಾಡಲು ಬಯಸುವವರಿಗೆ ಯೇಸು ಕ್ರಿಸ್ತನು ಹೇಳುವದು ಯಾವುದೂ ಅಯುಕ್ತವೆನಿಸುವದಿಲ್ಲ; ಆತನ ವಿಷಯದಲ್ಲಿ ಯಾರು ಆಸಕ್ತಿಯಿಲ್ಲದವರಾಗಿರುತ್ತಾರೋ ಅವರಿಗೆ ಮಾತ್ರವೇ ಅಯುಕ್ತವೆನಿಸುತ್ತದೆ. ಈ

ವ್ಯಕ್ತಿಯಲ್ಲಿ ಹಿಂದಿರುಗಿ ನೋಡುವ ಸ್ವಭಾವವಿದೆ ಎಂಬದನ್ನು ಯೇಸು ಕ್ರಿಸ್ತನು ವಿವೇಚಿಸಿ ತಿಳಿದುಕೊಂಡ ಹಾಗೆ ಅನ್ನಿಸುತ್ತದೆ. ಹೊಲ ಉತ್ತುವಾಗ ಅಥವಾ ದೇವರ ಕೆಲಸ ಮಾಡುವಾಗ ಹಿಂದಿರುಗಿ ನೋಡುವದು ವಿನಾಶಕಾರಿಯಾದ ಸಂಗತಿಯಾಗಿದೆ. ಫಿಲಿಪ್ಪಿ 3:13-14; ಇಬ್ರಿ 12:1-2ರೊಂದಿಗೆ ಹೋಲಿಸಿ ನೋಡಿರಿ. ನಾವು ನಮ್ಮ ಕಣ್ಣುಗಳನ್ನು ಗುರಿಯ ಮೇಲೆ ಇಡಬೇಕು.

# 10[1]

**10:1** ಪ್ರಮುಖ ಹನ್ನೆರೆಡು ಮಂದಿ ಶಿಷ್ಯರನ್ನು ಹೊರತುಪಡಿಸಿ ಇತರ ಶಿಷ್ಯರನ್ನು ಸುವಾರ್ತೆ ಸಾರಲು ಕಳುಹಿಸಲ್ಪಟ್ಟದ್ದರ ಬಗ್ಗೆ ಲೂಕನು ಮಾತ್ರವೇ ಬರೆದಿದ್ದಾನೆ. ಯೇಸು ಕ್ರಿಸ್ತನು ಅವರಿಗೆ ಕೊಟ್ಟ ಸೂಚನೆಗಳು ಆತನು ಇತರೆ ಸ್ಥಳಗಳಲ್ಲಿ ಹೇಳಿರುವ ವಿಷಯಗಳಿಗೆ ಸಮಾನವಾಗಿದೆ. **2**

**- 10:2** ಮತ್ತಾಯ 9:37-38. **3**

**- 10:3** ಮತ್ತಾಯ 10:16. **4**

**10:4** ಮತ್ತಾಯ 10:9-10. ಕರ್ತನು ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದನು (9:51), ಮತ್ತು ತನ್ನ ಪ್ರಯಾಣವನ್ನು ಆತನು ಆದಷ್ಟು ಬೇಗ ಮುಗಿಸಬೇಕಾಗಿತ್ತು. **5-12**

**- 10:5-12** ಮತ್ತಾಯ 10:10-15. **9**

**10:9** ಮತ್ತಾಯ 4:17 ರಲ್ಲಿ ದೇವರ ರಾಜ್ಯದ ಕುರಿತಾದ ನೋಟ್ ನೋಡಿರಿ. **12**

**10:12** *"ಆ ದಿವಸದಲ್ಲಿ"*– ನ್ಯಾಯವಿಚಾರಣೆಯ ದಿವಸದಲ್ಲಿ – ಮತ್ತಾಯ 10:15. **13-15**

**- 10:13-15** ಮತ್ತಾಯ 11:20-24. **15**

**10:15** *"ಪಾತಾಳ"*– ಗ್ರೀಕ್ ಭಾಷೆಯಲ್ಲಿಯೂ ಅಧೋಲೋಕ ಎಂದು ಹೇಳಲಾಗಿದೆ. 16:23ರಲ್ಲಿ ಹೆಚ್ಚಿನ ಮಾಹಿತಿ ದೊರೆಯುತ್ತದೆ. **16**

**- 10:16** 9:48; ಮತ್ತಾಯ 10:40; 18:5; ಯೋಹಾನ 12:44; 13:20 ನೋಡಿರಿ. **17**

**10:17** ಯೇಸು ಕ್ರಿಸ್ತನ ನಾಮದಲ್ಲಿರುವ ಅಧಿಕಾರವನ್ನು ತಿಳಿದುಕೊಳ್ಳಲು,

ಕೊಡಲಾಗಿರುವ ವಾಕ್ಯಗಳನ್ನು ನೋಡಿರಿ – ಮತ್ತಾಯ 10:1; ಮಾರ್ಕ 16:17; ಅಪೊ 5:16; 8:7; 16:18. **18**

**10:18** ದುರಾತ್ಮಗಳ ಓಡಿಸುವಿಕೆಯು ದೇವರ ರಾಜ್ಯ ಹತ್ತಿರವಾಗಿದೆ ಮತ್ತು ಸೈತಾನನ ಕಡೆಯ ಸೋಲು ದೃಢಪಟ್ಟಿದೆ ಎಂಬದನ್ನು ಸೂಚಿಸುತ್ತದೆ. ಮತ್ತಾಯ 12:22-29; ಯೋಹಾನ 12:31ರೊಂದಿಗೆ ಹೋಲಿಸಿ ನೋಡಿರಿ. ಮತ್ತಾಯ 4:1-11; 1 ಪೂರ್ವ 21:1ರಲ್ಲಿ ಸೈತಾನನ ಕುರಿತು ನೋಟ್ಸ್ ನೋಡಿರಿ. **19**

**10:19** ಯೇಸು ಕ್ರಿಸ್ತನು ಅವರಿಗೆ ನಿಜವಾದ ಹಾವುಗಳು ಮತ್ತು ಚೇಳುಗಳು ಹಾಗೂ ಹಾವು ಮತ್ತು ಚೇಳಿನಂಥ ದುರಾತ್ಮಗಳ ಮೇಲೆ ಅಧಿಕಾರವನ್ನು ಕೊಟ್ಟನು. ಸೈತಾನನೇ ಪ್ರಮುಖ ವೈರಿಯಾಗಿದ್ದಾನೆ. ಮಾರ್ಕ 16:17-18; ಕೀರ್ತನೆ 91:13; ಎಫೆ 6:12; ಯಾಕೋಬ 4:7; 1 ಪೇತ್ರ 5:8-9; ಪ್ರಕ 12:10-11 ನೋಡಿರಿ. **20**

**10:20** ಅವರು ರಕ್ಷಣೆ ಹೊಂದಿದ್ದಾರೆ ಮತ್ತು ನಿತ್ಯಜೀವ ಪಡೆದಿದ್ದಾರೆ ಎಂಬ ಸಂಗತಿಯೇ ಅವರ ಸಂತೋಷಕ್ಕೆ ಕಾರಣವಾಗಿದೆಯೇ ಹೊರತು ಅಧಿಕಾರ ಅಥವಾ ಶಕ್ತಿ ಪ್ರದರ್ಶಿಸಲು ಸಾಧ್ಯವಾಯಿತು ಎಂಬದಲ್ಲವಾಗಿದೆ.

*"ಪರಲೋಕದಲ್ಲಿ ಬರೆಯಲ್ಪಟ್ಟಿದೆ"*– ವಿಮೋ 32:32; ಇಬ್ರಿ 12:23; ಪ್ರಕ 3:5; 20:12. **21-22**

**10:21-22** ಮತ್ತಾಯ 11:25-26. ಯೇಸು ಕ್ರಿಸ್ತನ ಸಂತೋಷವನ್ನು ಸುವಾರ್ತಾ ಪುಸ್ತಕಗಳ ಉಳಿದೆರೆಡು ಕಡೆಗಳಲ್ಲಿ ಮಾತ್ರವೇ ತಿಳಿಸಲಾಗಿದೆ – ಯೋಹಾನ 15:11; 17:13. ಆತನಿಗೆ ಸಂತೋಷವನ್ನುಂಟು ಮಾಡಿದ ಕಾರ್ಯ ಯಾವುದು ಎಂದು ನೋಡಿರಿ – ದೇವರು ತನ್ನ ಸತ್ಯವನ್ನು ಸಾಧಾರಣ ಹಾಗೂ ದೀನರಿಗೆ ಪ್ರಕಟಪಡಿಸಿದನೇ ಹೊರತು ಉನ್ನತರು ಮತ್ತು ಪ್ರಭಾವಿಗಳಿಗಲ್ಲ. **23-24**

- **10:23-24** ಮತ್ತಾಯ 13:16-17. **25**

**10:25** *"ಧರ್ಮೋಪದೇಶಕನು"*– ಹಳೆಯ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ಮೋಶೆಯ ಧರ್ಮಶಾಸ್ತ್ರದಲ್ಲಿ ಪಂಡಿತನು. ಮತ್ತಾಯ 19:16ರಲ್ಲಿ ಕೇಳಲಾಗಿರುವ ಪ್ರಶ್ನೆಗೆ ಈತನು ಕೇಳಿದ ಪ್ರಶ್ನೆ ಸಮಾನವಾಗಿದೆ. ಇದು ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ,

ಆದರೆ ಈ ಪ್ರಶ್ನೆ ಕೇಳುವವರು ಯೇಸು ಕ್ರಿಸ್ತನು ಕೊಟ್ಟ ಉತ್ತರವನ್ನು ಅಂಗೀಕರಿಸಿಕೊಳ್ಳಲು ಸಿದ್ಧರಿಲ್ಲ. **26**

**10:26** ಯೇಸು ಕ್ರಿಸ್ತನು ಮಾಹಿತಿ ಬೇಕಿದ್ದರಿಂದ ಈ ಪ್ರಶ್ನೆ ಕೇಳಲಿಲ್ಲ, ಬದಲಾಗಿ ಅವನು ಏನಂದುಕೊಂಡಿದ್ದಾನೆ ಎಂಬದನ್ನು ತಿಳಿದುಕೊಳ್ಳಲು ಕೇಳಿದನು. **27**

**10:27** ಇದು ಅದ್ಭುತವಾದ ಉತ್ತರವಾಗಿದೆ. ಮತ್ತಾಯ 22:36-40 ನೋಡಿರಿ. ಧರ್ಮೋ 6:5 ಮತ್ತು ಯಾಜಕ 19:18ರಲ್ಲಿ ಬರೆಯಲ್ಪಟ್ಟಿರುವ ವಾಕ್ಯವನ್ನು ಆತನು ಇಲ್ಲಿ ಹೇಳಿದನು. **28**

**10:28** ದೇವರ ಕುರಿತಾದ ಸತ್ಯವನ್ನು ಸುಮ್ಮನೆ ತಿಳಿದುಕೊಂಡರೆ ಅಥವಾ ಹೇಳಿದರೆ ನಿತ್ಯಜೀವ ದೊರೆಯುವದಿಲ್ಲ. ರೋಮಾ 2:13; ಯಾಕೋಬ 1:22-25ರೊಂದಿಗೆ ಹೋಲಿಸಿ ನೋಡಿರಿ. ಆ ವ್ಯಕ್ತಿ ತನಗೆ ತಿಳಿದಿದ್ದ ಸತ್ಯದನುಸಾರವಾಗಿ ನಡೆದುಕೊಳ್ಳುತ್ತಿರಲಿಲ್ಲ. ನಮಗೆ ಇದು ಗೊತ್ತಾಗುತ್ತದೆ ಯಾಕಂದರೆ ಅವನು ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ (ವ 29), ಮತ್ತು ಇತರರ ಹಾಗೆ ಅವನು ಪಾಪಮಾಡಿದ್ದಾನೆ (ರೋಮಾ 3:23). ಒಂದುವೇಳೆ ಮಾನವರು ಧರ್ಮಶಾಸ್ತ್ರದ ಎರಡು ನಿಯಮಗಳನ್ನು ಸರಿಯಾಗಿ ಅಭ್ಯಾಸ ಮಾಡಿದರೆ, ಅವರು ಬದುಕುತ್ತಾರೆ, ಆದರೆ ಅವರು ಅಭ್ಯಾಸ ಮಾಡುವದಿಲ್ಲ. (ಯೇಸು ಕ್ರಿಸ್ತನನ್ನು ಬಿಟ್ಟರೆ) ಯಾರೊಬ್ಬರೂ ತಮ್ಮ ಜೀವನಪರ್ಯಂತರ ಪೂರ್ಣ ಬಲದಿಂದ ದೇವರನ್ನು ಹಾಗೂ ತಮ್ಮಂತೆಯೇ ತಮ್ಮ ನೆರೆಹೊರೆಯವರನ್ನು ಪ್ರೀತಿಸಿಲ್ಲ. **29**

**10:29** *"ತನ್ನನ್ನು ನೀತಿವಂತನೆಂದು ತೋರಿಸಿಕೊಳ್ಳುವದಕ್ಕೆ"*– ಇದು ಬಹುತೇಕ ಜನರ ಅತ್ಯಂತ ದೊಡ್ಡ ತಪ್ಪಾಗಿದೆ. 16:15; 18:9-12 ನೋಡಿರಿ. ತಮ್ಮ ನಿಜ ಸ್ಥಿತಿಯನ್ನು ಮರೆತು ಅವರು ತಮ್ಮನ್ನು ಉತ್ತಮರೆಂದು ಅಂದುಕೊಳ್ಳುತ್ತಾರೆ ಮತ್ತು ತಮ್ಮ ಪಾಪಗಳನ್ನು ಅರಿಕೆಮಾಡಿಕೊಳ್ಳಲು ಬಯಸುವದಿಲ್ಲ, ದೇವರ ನಿಯಮಗಳಂತೆ ನಡೆದುಕೊಳ್ಳುವದಿಲ್ಲ. ತನ್ನನ್ನು ನೀತಿವಂತನೆಂದು ತೋರಿಸಿಕೊಳ್ಳುವದಕ್ಕೆ ಪ್ರಯತ್ನಿಸುವವನು ತನ್ನ ಪ್ರಯತ್ನವನ್ನು ಬಿಟ್ಟು ದೇವರ ಎದುರಿನಲ್ಲಿ ತನ್ನ ತಪ್ಪನ್ನು ಒಪ್ಪಿಕೊಳ್ಳುವ ತನಕ ಅವನಿಗೆ ಯಾವುದೇ ನಿರೀಕ್ಷೆ ಇರುವದಿಲ್ಲ (ರೋಮಾ 3:19-20). **30-37**

**10:30-37** ಲೂಕನು ಮಾತ್ರವೇ ಈ ಸಾಮ್ಯವನ್ನು ಬರೆದಿದ್ದಾನೆ. ಮೇಲ್ನೋಟಕ್ಕೆ "ನೆರೆಯವನು" ಮತ್ತು "ಪ್ರೀತಿ" ಎಂದರೆ ಏನು ಎಂಬದಾಗಿ ತೋರುತ್ತದೆ ಮತ್ತು ಧರ್ಮೋಪದೇಶಕನ ಎರಡನೇ ಪ್ರಶ್ನೆಗೆ ಉತ್ತರಿಸುತ್ತದೆ (ವ 29). ಆದರೂ ಮೊದಲನೆ ಪ್ರಶ್ನೆಗೆ ಉತ್ತರಿಸುವ ಆಳವಾದ ಆತ್ಮೀಕ ಅಳವಡಿಸುವಿಕೆ ಇರುವದಾಗಿಯೂ ತೋರುತ್ತದೆ (ವ 25). ಒಂದುವೇಳೆ ಆ ಪ್ರಶ್ನೆಗೆ ಉತ್ತರ ಈ ಸಾಮ್ಯದಲ್ಲಿ ದೊರೆಯುವದಿಲ್ಲವಾದರೆ, ಯೇಸು ಕ್ರಿಸ್ತನು ಆ ವ್ಯಕ್ತಿಗೆ ಉತ್ತರ ಕೊಡದಿರುವದು ನಿಜವಾಗಿಯೂ ಆಶ್ಚರ್ಯದ ಸಂಗತಿಯಾಗಿದೆ. ಆದರೆ ಆತ್ಮೀಕ ಅಳವಡಿಸುವಿಕೆಯ ವಿಷಯಗಳು ಬರುವ ಮಾಹಿತಿಗಳನ್ನು ಬಲವಾಗಿ ಅಂದುಕೊಳ್ಳುವದು ಬುದ್ಧಿವಂತಿಕೆ ಅನ್ನಿಸುವದಿಲ್ಲ. ಮತ್ತಾಯ 13:18-23ರಲ್ಲಿ ನೋಟ್ಸ್ ನೋಡಿರಿ. **30**

**10:30** ಯೆರೂಸಲೇಮ್ ಸಮುದ್ರ ಮಟ್ಟಕ್ಕಿಂತ 800 ಅಡಿ ಮೇಲೆ ಮತ್ತು ಯೆರಿಕೋ ಸುಮಾರು 27 ಕಿಲೊಮೀಟರ್ ದೂರ ಹಾಗೂ ಸಮುದ್ರ ಮಟ್ಟಕ್ಕಿಂತಲೂ 250 ಅಡಿ ಕೆಳಗಿತ್ತು. ಯೆರೂಸಲೇಮ್ ಮಹಾಅರಸನಾಗಿರುವ ದೇವರ ಪಟ್ಟಣವಾಗಿದೆ (ಮತ್ತಾಯ 5:35). ಯೆರಿಕೋ ಶಾಪಕ್ಕೆ ಒಳಗಾಗಿದ್ದ ಪಟ್ಟಣವಾಗಿತ್ತು (ಯೆಹೋ 6:26). ಯೆರಿಕೋದ ಇಳಿಜಾರು ಮತ್ತು ಕಲ್ಲುಗಳಿಂದ ಕೂಡಿದ ದಾರಿ ಕಳ್ಳರಿಗೆ ಅನುಕೂಲಕರವಾಗಿತ್ತು. ಈ ಲೋಕವು ಕಲ್ಲುಗಳಿಂದ ಕೂಡಿರುವ ಸ್ಥಳವಾಗಿದೆ, ಸೈತಾನನು ಮತ್ತು ಅವನ ಸೇವಕರು ಮನುಷ್ಯರಿಗಿರುವವುಗಳನ್ನೆಲ್ಲಾ ತೆಗೆದುಕೊಳ್ಳಲು ಪ್ರಯತ್ನಿಸುವವರಾಗಿದ್ದಾರೆ (ಯೋಹಾನ 8:44; 1 ಪೇತ್ರ 5:8). ದೇವರ ಕೊಟ್ಟಿರುವ ನೀತಿವಂತಿಕೆಯನ್ನು ಮಾನವನಿಂದ ತೆಗೆದುಹಾಕಿದ್ದಾರೆ, ಬಹಳವಾಗಿ ಗಾಯಪಡಿಸಿದ್ದಾರೆ ಮತ್ತು ಅವನನ್ನು ಅರೆಜೀವ ಮಾಡಿದ್ದಾರೆ – ಶಾರೀರಿಕವಾಗಿ ಮಾತ್ರವೇ ಅವನು ಉಳಿದಿದ್ದಾನೆಯೇ ಹೊರತು ಅವನಲ್ಲಿ ಆತ್ಮೀಕತೆ ಇಲ್ಲವಾಗಿದೆ (ಆದಿ 2:17; 3:1-5; ಎಫೆ 2:1-3). **31-32**

**10:31-32** ವಿಮೋ 28:1ರಲ್ಲಿ ಯಾಜಕರ ಕುರಿತಾದ ನೋಟ್ಸ್ ನೋಡಿರಿ. ಲೇವಿಯರ ಕುರಿತಾದ ಸಂಖ್ಯಾ 1:47-50 ನೋಡಿರಿ. ಇವರಿಬ್ಬರೂ ತಮ್ಮಂತೆ ತಮ್ಮ ನೆರೆಹೊರೆಯವರನ್ನು ಪ್ರೀತಿಸುತ್ತಿರಲಿಲ್ಲ. ಇನ್ನೊಂದು ಮಾತಿನಲ್ಲಿ ಹೇಳುವದಾದರೆ (ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರ ಮತ್ತು ಯಜ್ಞಗಳನ್ನು ಪ್ರತಿನಿಧಿಸುತ್ತಿದ್ದ) ಯಾಜಕರು ಮತ್ತು ಲೇವಿಯರು ಸೈತಾನನಿಂದ ಸುಲುಕೊಳ್ಳಲ್ಪಟ್ಟು ಗಾಯಗೊಂಡಿರುವ ಪಾಪಿಯಾದ

ಮನುಷ್ಯನಿಗೆ ಸಹಾಯ ಮಾಡಲು ಅಶಕ್ತರಾಗಿದ್ದರು. ಅಪೊ 13:38-39; ರೋಮಾ 8:3; ಗಲಾ 2:16; ಇಬ್ರಿ 8:7-8; 9:9-10; 10:1-4,11 ನೋಡಿರಿ. **33-35**

**10:33-35** ಯೋಹಾನ 4:4-9 ರಲ್ಲಿ ಸಮಾರ್ಯರ ಕುರಿತಾದ ನೋಟ್ಸ್ ನೋಡಿರಿ. ಯೆಹೂದ್ಯರು ಅವರನ್ನು ಕಡೆಗಣಿಸುತ್ತಿದ್ದರು ಮತ್ತು ಅವರೊಂದಿಗೆ ಯಾವ ಕಾರ್ಯದಲ್ಲಿಯೂ ಬೆರೆಯುತ್ತಿರಲಿಲ್ಲ. ಆದರೆ ಪ್ರೀತಿ ಎಂದರೆ ಏನು, ನೆರೆಯವನು ಎಂದರೆ ಏನು ಎಂಬದನ್ನು ಇದು ತೋರ್ಪಡಿಸಿತು. ಸಾಕ್ಷಿಯಾಗಿ ನೆರೆಯವನು ಎಂದರೆ ನಾವು ಸಂಧಿಸುವ ಯಾರು ಬೇಕಾದರೂ ಆಗಿರಬಹುದು, ಅಪರಿಚಿತನಾಗಿರಬಹುದು, ಆತನು ಯಾವ ಜಾತಿ, ಜನಾಂಗ, ಧರ್ಮದವನು ಬೇಕಾದರೂ ಆಗಿರಬಹುದು. ಈ ವಚನಗಳ ಆತ್ಮೀಕ ಅಳವಡಿಸುವಿಕೆಯು 25 ನೇ ವಚನದಲ್ಲಿರುವ ಪ್ರಶ್ನೆಗೆ ಉತ್ತರಿಸುತ್ತವೆ. ಈ ಸಾಮ್ಯದಲ್ಲಿ ಹೇಳಲಾಗಿರುವ ವ್ಯಕ್ತಿ ಸಾಯುವ ಸ್ಥಿತಿಯಲ್ಲಿದ್ದನು ಆದ್ದರಿಂದ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಅಥವಾ ಹೊಸ ಜೀವವನ್ನು ಪಡೆಯಲು ಅವನಿಗೆ ಸಾಧ್ಯವೇ ಇರಲಿಲ್ಲ. ಅವನು ಸಂಪೂರ್ಣವಾಗಿ ಅಸಹಾಯಕನಾಗಿದ್ದನು. ರೋಮಾ 5:6; 8:7; ಎಫೆ 2:4-5 ರೊಂದಿಗೆ ಹೋಲಿಸಿ ನೋಡಿರಿ. ಸಮಾರ್ಯದವನು ನಮಗೆ ತಳ್ಳಲ್ಪಟ್ಟ ಹಾಗೂ ನಿರಾಕರಿಸಲ್ಪಟ್ಟ ಯೇಸು ಕ್ರಿಸ್ತನ ಬಗ್ಗೆ ತಿಳಿಸಬಹುದು (ಯೆಶಾಯ 53:3), ಆತನನ್ನು ಸಮಾರ್ಯದವನು ಎಂಬದಾಗಿಯೂ ಕರೆಯಲಾಗಿದೆ (ಯೋಹಾನ 8:48-49). ಅಸಹಾಯಕರಾಗಿರುವ ಪಾಪಿಗಳಾದ ಜನರು ತಮಗೆ ತಾವು ಮಾಡಿಕೊಳ್ಳಲಾಗದ ಕಾರ್ಯವನ್ನು ಕರ್ತನಾದ ಯೇಸು ಕ್ರಿಸ್ತನು ಅವರಿಗಾಗಿ ಮಾಡುತ್ತಾನೆ – ಅವರನ್ನು ಕಾಪಾಡುತ್ತಾನೆ ಮತ್ತು ನಿತ್ಯಜೀವ ಕೊಡುತ್ತಾನೆ (19:10; ಯೋಹಾನ 3:16-17; 10:27-28). **36-37**

**10:36-37** ಈ ಕಥೆಯಲ್ಲಿ ಆಳವಾದ ಆತ್ಮೀಕ ರಹಸ್ಯವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಯೇಸು ಕ್ರಿಸ್ತನು ಧರ್ಮೋಪದೇಶಕನಿಗೆ ಹೇಳಿದ ಮಾತುಗಳನ್ನು ಮರೆಯದಿರೋಣ. ಆತನು ಹೇಳಿದ ಮಾತುಗಳು ಅತ್ಯಂತ ಪ್ರಾಯೋಗಿಕವಾದವುಗಳಾಗಿವೆ. ನಾಮ್ಮೆಲ್ಲರಿಗೂ ಪ್ರೀತಿ ತೋರಿಸಬೇಕೆಂಬದು ದೇವರ ಬೇಡಿಕೆಯಾಗಿದೆ. ಜನರು ಯಾವುದೇ ಪರಿಸ್ಥಿತಿಯಲ್ಲಿದ್ದರೂ ನಾವು ಅವರಿಗೆ ಸಹಾಯ ಮಾಡಲು ಸಿದ್ಧರಾಗಿರಬೇಕು ಮತ್ತು ಯೇಸು ಕ್ರಿಸ್ತನ ಸಾಮ್ಯಗಳ ಅರ್ಥಗಳನ್ನು ಚರ್ಚಿಸುವವರು ಮಾತ್ರವೇ ಆಗಿರಬಾರದು (ಮತ್ತಾಯ 5:43-48; ಯೋಹಾನ 13:34; ರೋಮಾ 13:8-10; ಗಲಾ 6:10; 1

ಯೋಹಾನ 3:16-18). **38**

**10:38** ಈ ಹಳ್ಳಿಯ ಹೆಸರು ಬೆಥಾನ್ಯ, ಇದು ಯೆರೂಸಲೇಮಿನಿಂದ 3 ಕಿಲೊಮೀಟರ್ ದೂರದಲ್ಲಿದೆ. ಮತ್ತಾಯ 21:17; ಯೋಹಾನ 11:1 ನೋಡಿರಿ. **40**

**10:40** ಮಾರ್ಕ 4:38. ಕರ್ತನಾದ ಯೇಸು ಕ್ರಿಸ್ತನು ಇಡೀ ಲೋಕಕ್ಕಾಗಿ ಚಿಂತಿಸುವವನಾಗಿದ್ದಾನೆ ಮತ್ತು ಉನ್ನತ ಮಟ್ಟದಲ್ಲಿ ಎಲ್ಲರ ಹಿತ ಬಯಸುವವನಾಗಿದ್ದಾನೆ ಎಂಬದನ್ನು ತಿಳಿಯದೆ ಆಕೆ ಆತನನ್ನು ಗದರಿಸುತ್ತಿದ್ದಳು. ಆಕೆ ಕೇವಲ ಮನೆಕೆಲಸ ಮತ್ತು ಅದರ ತಾನು ಭಾಗಿಯಾಗುವದರ ಬಗ್ಗೆ ಮಾತ್ರವೇ ಯೋಚಿಸುತ್ತಿದ್ದಳು. ಆಕೆಯ ಮಾತುಗಳ ಅರ್ಥವೇನೆಂದರೆ “ನನ್ನ ಮೇಲೆ ದಯೆ ಇರಲಿ. ನಾನು ಕಷ್ಟಪಟ್ಟು ಕೆಲಸ ಮಾಡುತ್ತಿದ್ದೇನೆ, ಆದರೆ ಬೇರೆಯವರು ನನಗೆ ಸಹಾಯ ಮಾಡದಂತೆ ನೀನು ಅಡ್ಡಿಪಡಿಸುತ್ತಿರುವೆ.” **41-42**

**10:41-42** ಆಕೆ ಮಾಡುತ್ತಿದ್ದ ಕೆಲಸ ಅಂದರೆ ಅಡುಗೆ ಮಾಡುವದು ಪ್ರಯೋಜನವಿಲ್ಲದ್ದು ಮತ್ತು ಅನಾವಶ್ಯಕವಾದದ್ದು ಎಂಬದಾಗಿ ಯೇಸು ಕ್ರಿಸ್ತನು ಹೇಳಲಿಲ್ಲ. ಬದಲಾಗಿ ಆತನು ಪ್ರಾಮುಖ್ಯವಾದವುಗಳಿಗೆ ಆದ್ಯತೆ ಕೊಡುವಂತೆ ಹೇಳುತ್ತಿದ್ದಾನೆ – ಯಾಕಂದರೆ ಆತನು ಅವರ ಸಂಗಡ ಇನ್ನೂ ಕೆಲವು ದಿವಸಗಳು ಮಾತ್ರವೇ ಇರುವವನಾಗಿದ್ದನು ಆದ್ದರಿಂದ ಅವರಿಗೆ ಅನೇಕ ಸತ್ಯ ಸಂಗತಿಗಳನ್ನು ಕಲಿಸಬೇಕಾಗಿತ್ತು. ಮರಿಯಳು ಆ ಅವಕಾಶವನ್ನು ಸದುಪಯೋಗಪಡಿಸಿಕೊಂಡಳು ಆದರೆ ಮಾರ್ಥಳು ತನ್ನನ್ನು ಬೇರೆ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಳು.

# 11 1

**11:1** ಪ್ರಾರ್ಥನೆಯ ಯೇಸು ಕ್ರಿಸ್ತನ ದಿನನಿತ್ಯದ ಅಭ್ಯಾಸವಾಗಿತ್ತು, ಈ ವಿಷಯವನ್ನು ಇತರೆ ಸುವಾರ್ತಾ ಬರಹಗಾರರಿಗಿಂತ ಲೂಕನು ಹೆಚ್ಚು ಬಾರಿ ತಿಳಿಸಿದ್ದಾನೆ (5:16ರಲ್ಲಿ ಕೊಡಲಾಗಿರುವ ರೆಫರೆನ್ಸ್ ನೋಡಿರಿ). ಶಿಷ್ಯರ ಮನವಿ ಅವರಿಗೆ ಪ್ರಾರ್ಥನೆಯ ಬಗ್ಗೆ ಅಷ್ಟೊಂದು ಮಾಹಿತಿ ಇರಲಿಲ್ಲ ಎಂಬದನ್ನು ತಿಳಿಸುತ್ತದೆ. ಯೇಸು ಕ್ರಿಸ್ತನ ಪ್ರಾರ್ಥನಾ ಜೀವಿತವನ್ನು ಗಮನಿಸಿದ ನಂತರ ಅವರಿಗೆ ಇದರ ಅರಿವಾಗಿರಬಹುದು. ಈಗಲೂ ಶಿಷ್ಯರಿಗೆ ಪ್ರಾರ್ಥನೆ ಮಾಡುವದನ್ನು ಕಲಿಯಬೇಕೆಂಬ ತವಕ ಇದ್ದೇ ಇರುತ್ತದೆ. ರೋಮಾ 8:26ರೊಂದಿಗೆ ಹೋಲಿಸಿ ನೋಡಿರಿ. ಒಂದುವೇಳೆ ನಾವು ಪ್ರಾರ್ಥನೆ ಮಾಡುವದನ್ನು ಕಲಿತುಕೊಂಡರೆ, ನಾವು ಅತ್ಯಂತ ಆತ್ಮೀಕ, ಪ್ರಸಿದ್ಧ ಮತ್ತು ಮಾನವರು ಮಾಡಬಹುದಾದ

ಆಶೀರ್ವದಿಸಲ್ಪಡುವ ಚಟುವಟಿಕೆಯನ್ನು ಮಾಡುವವರಾಗಿದ್ದೇವೆ. 18:1-7; ಆದಿ 18:32; ಮತ್ತಾಯ 6:5-13; ರೋಮಾ 8:26-27; ಎಫೆ 1:17; 6:16; ಫಿಲಿಪ್ಪಿ 4:6-7; ಕೊಲೊ 1:9; 1 ಥೆಸ 5:17; ಇಬ್ರಿ 4:16; 10:19-22; 11:6; ಯಾಕೋಬ 1:5-8; 5:16-18; 1 ಯೋಹಾನ 5:14-15 ರಲ್ಲಿ ಪ್ರಾರ್ಥನೆಯ ಕುರಿತಾದ ನೋಟ್ಸ್ ನೋಡಿರಿ. **2-4**

**11:2-4** ಮತ್ತಾಯ 6:9-13 ರ ನೋಟ್ಸ್ ನೋಡಿರಿ. **4**

**11:4** *"ನಮಗೆ ತಪ್ಪುಮಾಡಿರುವ ಪ್ರತಿಯೊಬ್ಬನನ್ನು"*– ಅಂದರೆ ನಮ್ಮೊಂದಿಗೆ ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳದಿರುವ ಪ್ರತಿಯೊಬ್ಬನು, ನಮಗೆ ವಿರುದ್ಧವಾಗಿ ಪಾಪ ಮಾಡುವ ಪ್ರತಿಯೊಬ್ಬನು ಎಂಬದಾಗಿದೆ. **5-8**

**11:5-8** ಈ ಕಥೆ ನಮಗೆ ಪ್ರಾರ್ಥನೆ ಅವಶ್ಯಕತೆ ಮತ್ತು ಯಶಸ್ವಿಕರವಾದ ಪ್ರಾರ್ಥನೆ ಬೇಕಾಗಿರುವ ತಾಳ್ಮೆಯ ಬಗ್ಗೆ ಕಲಿಸುತ್ತದೆ. ನಾವು ನಮ್ಮಲ್ಲಿಯೇ "ಏನೂ ಇಲ್ಲದವರ ಹಾಗೆ" ಇದ್ದೇವೆ – ಇತರರಿಗೆ ಸಹಾಯ ಮಾಡುವಂಥ ಆತ್ಮೀಕ ಮೌಲ್ಯವಿರುವ ಯಾವ ಕಾರ್ಯವೂ ಇಲ್ಲದವರಾಗಿದ್ದೇವೆ. ಆದ್ದರಿಂದ ಎಲ್ಲವೂ ಇರುವಾತನ ಬಳಿಗೆ ನಾವು ಬರುತ್ತೇವೆ. ದೇವರು ತನ್ನ ಬಳಿಗೆ ಬರುವವರಿಗೆ ಸಹಾಯ ಮಾಡದೆ ಕಳುಹಿಸುವದಿಲ್ಲ (ಆದರೆ ಈ ಸಾಮ್ಯದಲ್ಲಿ ಬರುವ ಸ್ನೇಹಿತನು ಸಹಾಯ ಮಾಡಲಿಲ್ಲ), ಆದರೆ ಆತನು ನಮ್ಮ ನಂಬಿಕೆಯು ನಿಜವಾದದ್ದೋ ಅಥವಾ ಇಲ್ಲವೋ ಎಂಬದನ್ನು ಪರೀಕ್ಷಿಸುತ್ತಾನೆ (ಮತ್ತಾಯ 15:21-28; 1 ಪೇತ್ರ 1:7-8; ಇಬ್ರಿ 11:6; ಯೆರೆ 29:13). ನಾವು ಆತನನ್ನು ಯಥಾರ್ಥವಾಗಿ ಹುಡುಕಬೇಕೆಂದು ಆತನು ಬಯಸುತ್ತಾನೆ. ಮತ್ತು ನಾವು ಆತನನ್ನು ಯಥಾರ್ಥವಾಗಿ ಹುಡುಕುವಾಗ ಮತ್ತು ಪ್ರಾರ್ಥನೆಯಲ್ಲಿ ತಾಳ್ಮೆಯುಳ್ಳವರಾಗಿ ನಡೆದುಕೊಳ್ಳುವಾಗ ನಾವು ಬೇಡಿಕೊಳ್ಳುವವುಗಳನ್ನು ಸರಿಯಾದ ಉಪಯೋಗಕ್ಕಾಗಿ ಆತನು ಸಿದ್ಧಮಾಡುತ್ತಾನೆ. **8**

**11:8** *"ಆದರೆ . . . ಎದ್ದು ಬಂದು ಕೇಳಿದಷ್ಟು ಕೊಡುವನು"*– ದೇವರು ಹೀಗೆಯೇ ಮಾಡುತ್ತಾನೆ 9-13 ವಚನಗಳು ಹೇಳುವ ಹಾಗೆ ಸಮೃದ್ಧವಾಗಿ ಒದಗಿಸುತ್ತಾನೆ. ಹಾಗೆಯೇ ಮತ್ತಾಯ 7:7-11; ರೋಮಾ 8:32; ಫಿಲಿಪ್ಪಿ 4:19 ನೋಡಿರಿ. **11**

**- 11:11** ಮತ್ತಾಯ 7:9. **13**

**11:13** ಮತ್ತಾಯ 7:11 "ಪವಿತ್ರಾತ್ಮನು" ಎಂಬದಾಗಿ ಹೇಳುವದಿಲ್ಲ ಬದಲಾಗಿ "ಒಳ್ಳೆಯ ವರಗಳು" ಎಂದು ಹೇಳುತ್ತದೆ. ಯೇಸು ಕ್ರಿಸ್ತನು ಇಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾನೆ

ಮತ್ತು ವರಗಳಲ್ಲಿ ಉತ್ತಮವಾದ ವರ ಕೊಡುವದಾಗಿ ವಾಗ್ದಾನ ಮಾಡಿದ್ದಾನೆ – ಯಾರಲ್ಲಿ ಪವಿತ್ರಾತ್ಮನು ಇರುವದಿಲ್ಲವೋ ದೇವರು ಅವರಿಗೆ ಪವಿತ್ರಾತ್ಮನನ್ನು ಕೊಡುತ್ತಾನೆ. ಈಗಿನ ಹಾಗೆ ಯೋಹಾನ 7:39, ವಿಶ್ವಾಸಿಗಳೆಲ್ಲರಿಗೂ ಪವಿತ್ರಾತ್ಮನು ಕೊಡಲ್ಪಡುವ ಮೊದಲು ಯೇಸು ಕ್ರಿಸ್ತನು ಈ ವಾಗ್ದಾನ ಮಾಡಿದನು ಎಂಬದನ್ನು ನಾವು ಮರೆಯಬಾರದು. ಈಗ ಕ್ರಿಸ್ತನಿಗೆ ಸೇರಿದವರೆಲ್ಲರೂ, ಆತನಲ್ಲಿ ನಂಬಿಕೆಯಿಡುವ ವಿಶ್ವಾಸಿಗಳೆಲ್ಲರೂ, ಪವಿತ್ರಾತ್ಮನನ್ನು ಹೊಂದಿದ್ದಾರೆ – ರೋಮಾ 8:9 ನೋಡಿರಿ. ಆದರೆ ಒಂದುವೇಳೆ ಯಾವನಿಗಾದರೂ ಪವಿತ್ರಾತ್ಮನು ನನ್ನಲ್ಲಿ ವಾಸಿಸುತ್ತಿದ್ದಾನೆಯೇ ಅಥವಾ ಇಲ್ಲವೇ ಎಂಬ ಸಂದೇಹವಿರುವದಾದರೆ, ಅವನು ಯೇಸು ಕ್ರಿಸ್ತನು ಹೇಳಿರುವ ಮಾತುಗಳನ್ನು ಗಮನಿಸಲಿ ಮತ್ತು ದೇವರು ಪವಿತ್ರಾತ್ಮ ಕೊಡಲು ಬಯಸುವದನ್ನು ತಿಳಿದುಕೊಳ್ಳಲಿ. ಈ ವಾಗ್ದಾನವು ನಾವು ಪವಿತ್ರಾತ್ಮನನ್ನು ಪೂರ್ತಿಯಾಗಿ ಪಡೆದುಕೊಳ್ಳಬೇಕು ಎಂಬದಾಗಿ ತಿಳಿಸುತ್ತದೆ ಎಂದು ಈ ನೋಟ್ಸ್ ಗಳ ಬರಹಗಾರರ ಅಭಿಪ್ರಾಯವಾಗಿದೆ ಯಾಕಂದರೆ ಇದು ದೇವರ ಹೃದಯವನ್ನು ಪ್ರಕಟಪಡಿಸುತ್ತದೆ, ಆತನ ಕೃಪೆಯುಳ್ಳ ಸ್ವಭಾವವು ಸಂತೋಷದಿಂದ ನಾವು ಬೇಡುವದನ್ನು ನಮಗೆ ಕೊಡುತ್ತದೆ (ಪವಿತ್ರಾತ್ಮನ ಪರಿಪೂರ್ಣತೆಯ ನೋಟ್ಸ್ ಗಾಗಿ ಯೋಹಾನ 7:37-39; ಅಪೊ 1:5; ಎಫೆ 5:18 ನೋಡಿರಿ). ಇದು ದೇವರು ಕೊಡುವ ವರಗಳಲ್ಲಿಯೇ ಅತ್ಯಂತ "ಒಳ್ಳೆಯ ವರವಾಗಿದೆ." ತಂದೆಯಾದ ದೇವರ ಬಳಿಗೆ ಚಿಕ್ಕ ಮಕ್ಕಳಿನಂತೆ ನಂಬಿಕೆಯುಳ್ಳವರಾಗಿ ಹೋಗಿ ಬೇಡಿಕೊಳ್ಳುವಾಗ ನೇರವಾಗಿ ಆತನಿಂದ ಸಂಪೂರ್ಣವಾಗಿ ಪಡೆದುಕೊಳ್ಳುತ್ತೇವೆ (1 ಯೋಹಾನ 5:14-15). **14-23**

**- 11:14-23** ಮತ್ತಾಯ 12:22-30. **16**

**11:16** ವಚನ 29; ಮತ್ತಾಯ 12:28. **24-26**

**- 11:24-26** ಮತ್ತಾಯ 12:43-45. **27-28**

**11:27-28** ಜನರಿಗೆ ಯಾವುದರಿಂದ ಆಶೀರ್ವಾದ ದೊರೆಯುವದೆಂದು ಯೇಸು ಕ್ರಿಸ್ತನು ಬೋಧಿಸುತ್ತಿದ್ದಾನೆ ಎಂಬದನ್ನು ಗಮನಿಸಿರಿ. ಅದು ಶಾರೀರಿಕ ಅಥವಾ ಕೌಟುಂಬಿಕ ಸಂಬಂಧದಿಂದ ಸಾಧ್ಯವಾಗುವದಿಲ್ಲ. ಆಶೀರ್ವಾದವು ದೇವರೊಂದಿಗೆ ವೈಯಕ್ತಿಕವಾದ ಸಂಬಂಧವಿರುವಾಗ ಮತ್ತು ಆತನ ವಾಕ್ಯಗಳಿಗೆ ವಿಧೇಯರಾಗಿ ನಡೆದುಕೊಳ್ಳುವಾಗ ದೊರೆಯುತ್ತದೆ. **28**

**11:28** *"ಧನ್ಯತೆ"*– ಆದಿ 12:1-3; ಸಂಖ್ಯಾ 6:22-27; ಧರ್ಮೋ 28:3-14; ಕೀರ್ತನೆ

1:1; 119:1; ಮತ್ತಾಯ 5:3-10; ಅಪೊ 3:26; ಗಲಾ 3:14; ಎಫೆ 1:3. **29-32**

- **11:29-32** ಮತ್ತಾಯ 12:38-42. **34-36**

- **11:34-36** ಮತ್ತಾಯ 5:15; 6:22-23. **35**

**11:35** ಯೇಸು ಕ್ರಿಸ್ತನು ಮಾನವರಿಗೆ ತಕ್ಕದಾಗಿರುವ ಜವಾಬ್ದಾರಿಕೆಯನ್ನು ಕೊಡುತ್ತಾನೆ. ಇಲ್ಲಿ ಬೆಳಕು ಸತ್ಯವನ್ನು, ಆತ್ಮೀಕ ತಿಳುವಳಿಕೆಯನ್ನು ಸೂಚಿಸುತ್ತದೆ. ದೇವರು ಎಲ್ಲರಿಗೂ ಬೆಳಕು ಕೊಡುತ್ತಾನೆ, ಆದರೆ ಜನರು ಬೆಳಕಿಗೆ ಬದಲಾಗಿ ಕತ್ತಲೆಯನ್ನು ಪ್ರೀತಿಸಬಹುದಾಗಿದೆ ಮತ್ತು ಅವರು ಬೆಳಕಿನ ಮಾರ್ಗವನ್ನು ಬಿಟ್ಟು ಕತ್ತಲೆಯ ಮಾರ್ಗವನ್ನು ಆರಿಸಿಕೊಳ್ಳಬಹುದಾಗಿದೆ, ತಮ್ಮ ಮನಸ್ಸುಗಳ ಮೇಲೆ ಪ್ರಭಾವ ಬೀರಿರುವ ಬೆಳಕನ್ನು ತಿರಸ್ಕರಿಸಬಹುದಾಗಿದೆ (ಯೋಹಾನ 1:9; 3:19-21; 8:12; 12:46. ರೋಮಾ 1:18-23,25 ರೊಂದಿಗೆ ಹೋಲಿಸಿ ನೋಡಿರಿ). **37**

**11:37** 7:36; 14:1. ಫರಿಸಾಯರು ಗುಂಪಾಗಿ ಯೇಸು ಕ್ರಿಸ್ತನನ್ನು ವಿರೋಧಿಸುತ್ತಿದ್ದರು, ಆದರೆ ವ್ಯಕ್ತಿಗತವಾಗಿ ಕೆಲವರು ಆತನ ಬಗ್ಗೆ ತಿಳಿದುಕೊಳ್ಳುವ ಕುತೂಹಲವುಳ್ಳವರಾಗಿದ್ದರು ಮತ್ತು ಆತನ ಸಂದೇಶವನ್ನು ಮುಕ್ತ ಮನಸ್ಸಿನಿಂದ ಅಂಗೀಕರಿಸುವವರಾಗಿದ್ದರು. ಯೋಹಾನ 3:1-2 ನೋಡಿರಿ. **38**

- **11:38** ಮತ್ತಾಯ 15:2. **39-40**

- **11:39-40** ಮತ್ತಾಯ 23:25-26. **41**

**11:41** ಅವರು ದುರಾಸೆಯಿಂದ ಮತ್ತು ತಮ್ಮೊಳಗಿನ ದುಷ್ಟತನದಿಂದ ಶುದ್ಧರಾಗಬೇಕಾಗಿತ್ತು. ಹೀಗಾದರೆ ಅವರು ತಮ್ಮ ಆಸ್ತಿಯನ್ನು ಬಡವರಿಗೆ ಹಂಚುತ್ತಿದ್ದರು. ಯೇಸು ಕ್ರಿಸ್ತನು ಐಶ್ವರ್ಯವಂತನಾದ ಅಧಿಕಾರಿಯೊಂದಿಗೆ ಮಾತನಾಡುವಾಗ ಆತನ ಉದ್ದೇಶ ಇದುವೇ ಆಗಿತ್ತು (ಮತ್ತಾಯ 19:21-24). ಹೃದಯ ಪರಿವರ್ತನೆಗೊಂಡಿರುವ ಜನರು ಆಚಾರದನುಸಾರವಾಗಿ ಕೈಕಾಲುಗಳನ್ನು ತೊಳೆದುಕೊಳ್ಳುವದರ ಬಗ್ಗೆ ಯೋಚಿಸುವದಿಲ್ಲ. **42**

- **11:42** ಮತ್ತಾಯ 23:23. **43**

- **11:43** ಮತ್ತಾಯ 23:6-7. **44**

**11:44** ಮತ್ತಾಯ 23:27-28. ಸಮಾಧಿಯ ಮೇಲೆ ನಡೆಯುವ ಅಶುದ್ಧ ಎಂಬದಾಗಿ ಪರಿಗಣಿಸಲಾಗುತ್ತಿತ್ತು (ಸಂಖ್ಯಾ 19:16). ಆದ್ದರಿಂದ ಸಮಾಧಿಗೆ ಸಮಾನರಾದ ಫರಿಸಾಯರ ಸಹವಾಸವು ಜನರನ್ನು ಅಶುದ್ಧರನ್ನಾಗಿ ಮಾಡುತ್ತಿತ್ತು. ಉಳಿದವರಿಗಿಂತ ತಾವೇ ಶ್ರೇಷ್ಠರು ಎಂಬದಾಗಿ ಅಂದುಕೊಳ್ಳುತ್ತಿದ್ದ ಧಾರ್ಮಿಕ ನಾಯಕರ ಅಹಂಕಾರಕ್ಕೆ ಇದರಿಂದ ದೊಡ್ಡ ಮುಖಭಂಗವಾಯಿತು! **45**

**11:45** *"ಧರ್ಮೋಪದೇಶಕರು"*– 10:25 ರಲ್ಲಿ ನೋಟ್ ನೋಡಿರಿ. ಇವರ ವಿಷಯ ಫರಿಸಾಯರ ವಿಷಯ ಒಂದೇ ಎಂಬದಾಗಿ ಆತನ ಮನಃಸಾಕ್ಷಿ ಆತನಿಗೆ ತಿಳಿಸಿತೇ? **46**

- **11:46** ಮತ್ತಾಯ 23:4. **47-48**

- **11:47-48** ಮತ್ತಾಯ 23:29-32. **49**

**11:49** ಮತ್ತಾಯ 23:34 ರೊಂದಿಗೆ ಹೋಲಿಸಿ ನೋಡಿರಿ. **50-51**

- **11:50-51** ಮತ್ತಾಯ 23:35-36. **52**

**11:52** ಅವರು ಬೋಧಕರಾಗಿದ್ದರು, ತಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದವರಿಗೆ ಗುರುಗಳಾಗಿದ್ದರು. ದೇವರ ವಾಕ್ಯಗಳ ನಿಜವಾದ ಆತ್ಮೀಕ ತಿಳುವಳಿಕೆಯನ್ನು ತಿಳಿಸುವ ಬದಲು, ಅವರು ದೇವರ ವಾಕ್ಯಗಳನ್ನು ಕೆಡಿಸುತ್ತಿದ್ದರು ಮತ್ತು ಸತ್ಯವನ್ನು ತಿರುಚುತ್ತಿದ್ದರು. ಹೀಗೆ ಮಾಡಿದವರಲ್ಲಿ ಇವರು ಮೊದಲಿಗರೂ ಅಲ್ಲ ಕಡೆಯವರೂ ಅಲ್ಲ. ಇದಲ್ಲದೆ ಜನರು ಯೇಸು ಕ್ರಿಸ್ತನ ಬಳಿಗೆ ಬರುವದನ್ನು ಅವರು ತಡೆಯುತ್ತಿದ್ದರು – ಮತ್ತಾಯ 23:13. **53-54**

**11:53-54** ಅವರು ಪಶ್ಚಾತ್ತಾಪಪಟ್ಟು ಆತನ ಪಾದಗಳ ಬಳಿಯಲ್ಲಿ ಕಣ್ಣೀರಿಡಬೇಕಾಗಿತ್ತು. ಆದರೆ ಅವರು ತಮ್ಮ ಗರ್ವದಿಂದ ತಮ್ಮನ್ನು ನೀತಿವಂತರೆಂದುಕೊಂಡು ತಮ್ಮ ಹೃದಯವನ್ನು ಕಠಿಣಮಾಡಿಕೊಂಡರು.

# 12 1

- **12:1** ಮತ್ತಾಯ 16:6,12. **2-3**

- **12:2-3** ಮತ್ತಾಯ 10:26; ಮಾರ್ಕ 4:22; ಇಬ್ರಿ 4:13; ಕೀರ್ತನೆ 33:13-15; 139:11-12; ಜ್ಞಾನೋ 5:21. **4-5**

- **12:4-5** ಮತ್ತಾಯ 10:28; ಇಬ್ರಿ 10:31. **6-7**

- **12:6-7** ಮತ್ತಾಯ 10:29-31. **8-9**

**12:8-9** 9:26; ಮತ್ತಾಯ 10:33; ಮಾರ್ಕ 8:38; ರೋಮಾ 10:9-10 ನೋಡಿರಿ. ಜನರು ಯೇಸು ಕ್ರಿಸ್ತನ ನಾಮವನ್ನು ಅರಿಕೆ ಮಾಡಿಕೊಳ್ಳುವದರಿಂದ ರಕ್ಷಣೆ ಹೊಂದುವದಿಲ್ಲ, ಬದಲಾಗಿ ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದುತ್ತಾರೆ (ಎಫೆ 2:8-9). ಆದರೆ ರಕ್ಷಣೆ ಹೊಂದಿದವರು ಯೇಸು ಕ್ರಿಸ್ತನ ನಾಮವನ್ನು ಅರಿಕೆಮಾಡಿಕೊಳ್ಳುತ್ತಾರೆ; ಅವರು ಆತನಲ್ಲಿ ಭರವಸೆಯುಳ್ಳವರಾಗಿದ್ದಾರೆ ಮತ್ತು ಆತನನ್ನು ಅಂಗೀಕರಿಸಿಕೊಂಡಿದ್ದಾರೆ ಎಂಬದಕ್ಕೆ ಇದು ಒಂದು ಪುರಾವೆಯಾಗಿದೆ. **10**

- **12:10** ಮತ್ತಾಯ 12:31-32. **11-12**

- **12:11-12** ಮತ್ತಾಯ 10:17,19. **14**

**12:14** *"ನ್ಯಾಯಾಧಿಪತಿ"*– ಆತನು ಈ ಉದ್ದೇಶಕ್ಕೆ ಬರಲಿಲ್ಲ – ಯೋಹಾನ 3:17; 12:47. ಆತನು ಮತ್ತೆ ಬರುವಾಗ ಲೋಕಕ್ಕೆ ನ್ಯಾಯತೀರಿಸುತ್ತಾನೆ – ಅಪೊ 10:42; 17:31; 2 ತಿಮೊ 4:1. **15**

**12:15** ದುರಾಸೆಯ ವಿಷಯದಲ್ಲಿ ಕೊಡಲಾಗಿರುವ ಈ ಎಚ್ಚರಿಕೆ ಈಗಿನ ದಿವಸಗಳಿಗೂ ಬಹಳವಾಗಿ ಅನ್ವಯವಾಗುತ್ತದೆ – 6:20; ಮತ್ತಾಯ 19:23-24; 1 ಕೊರಿಂಥ 6:10; ಎಫೆ 5:3,5; ಕೊಲೊ 3:5; 1 ತಿಮೊ 6:9-11.

*"ಸಾಮ್ಯ"*– ಮತ್ತಾಯ 13:3,18-23. ಇದನ್ನು ಲೂಕನ ಸುವಾರ್ತೆಯಲ್ಲಿ ಮಾತ್ರವೇ ನೋಡಬಹುದಾಗಿದೆ. ಇಲ್ಲಿ ಕಲಿಸಲಾಗಿರುವ ಸತ್ಯವನ್ನು ಸತ್ಯವೇದದಾದ್ಯಂತ ನೋಡಬಹುದಾಗಿದೆ. **17-19**

**12:17-19** ಈ ವ್ಯಕ್ತಿಯ ಸ್ವಭಾವ ಇವನ ಮಾತುಗಳಿಂದಲೇ ವ್ಯಕ್ತವಾಗಿದೆ. ಇಲ್ಲಿ ದೇವರಿಗೆ ಕೃತಜ್ಞತೆಯಾಗಲಿ ಅಥವಾ ದೇವರ ಸೇವೆಗೆ ಕೊಡುವದಾಗಲಿ, ಅವಶ್ಯಕತೆಯಲ್ಲಿರುವವರಿಗೆ ಸಹಾಯ ಮಾಡುವ ವಿಷಯವಾಗಲಿ ಏನೂ ಹೇಳಿಲ್ಲ. ಈ ವ್ಯಕ್ತಿ ಸ್ವಾರ್ಥಿಯಾಗಿದ್ದನು, ತನ್ನ ಕುರಿತಾಗಿ ಮಾತ್ರವೇ ಆಲೋಚಿಸುವವನಾಗಿದ್ದನು ಮತ್ತು ತನ್ನ ಸಂತೋಷವನ್ನು ಮಾತ್ರವೇ ಬಯಸುವವನಾಗಿದ್ದನು. **20**

**12:20** ನಾನೇ ಬುದ್ಧಿವಂತನು ಎಂಬದಾಗಿ ಅವನು ಅಂದುಕೊಂಡಿದ್ದನು-ದೇವರು ಅವನು ಮೂರ್ಖನು ಅಂದುಕೊಂಡಿದ್ದನು (ಯೆಶಾಯ 55:8-9). ಮಾನವರು ಯಾವುದನ್ನು ಶ್ರೇಷ್ಠ ಎಂದುಕೊಳ್ಳುತ್ತಾರೋ ದೇವರು ಅದನ್ನು ಅಸಹ್ಯ ಎಂದುಕೊಳ್ಳುತ್ತಾನೆ (ಲೂಕ 16:15). ಸ್ವಾರ್ಥವು ಮೂರ್ಖತನವಾಗಿದೆ, ಒಬ್ಬನು ತನ್ನ ಆಲೋಚನೆಗಳು ಮತ್ತು ಯೋಚನೆಗಳಿಂದ ದೇವರನ್ನು ತ್ಯಜಿಸುವದು ಮೂರ್ಖತನವಾಗಿದೆ, ನಾವು ಅನೇಕ ವರ್ಷ ಬದುಕುತ್ತೇವೆ ಮತ್ತು ನಮಗೆ ಇಷ್ಟವಿರುವ ಹಾಗೆಯೇ ಬದುಕುತ್ತೇವೆ ಎಂಬದಾಗಿ ಅಂದುಕೊಳ್ಳುವದು ಮೂರ್ಖತನವಾಗಿದೆ (ಯಾಕೋಬ 4:13-17). ಯೇಸು ಕ್ರಿಸ್ತನು ಮತ್ತಾಯ 6:19-21 ರಲ್ಲಿ ಹೇಳಿರುವ ಹಾಗೆ ನಡೆದುಕೊಳ್ಳುವದೇ ಬುದ್ಧಿವಂತಿಕೆಯಾಗಿದೆ. ನಮ್ಮ ಜೀವಿತವು ದೇವರ ಹಸ್ತಗಳಲ್ಲಿದೆ, ಆತನು ತನಗೆ ಬೇಕಾದಾಗ ಅದನ್ನು ತೆಗೆದುಕೊಳ್ಳುತ್ತಾನೆ. **21**

**12:21** ಸತ್ಯವೇದದಲ್ಲಿ ಇದೊಂದೇ ಸ್ಥಳದಲ್ಲಿ "ದೇವರ ವಿಷಯಗಳಲ್ಲಿ ಐಶ್ವರ್ಯವಂತರಾಗಿರಬೇಕು" ಎಂಬ ಪದವನ್ನು ಉಪಯೋಗಿಸಲಾಗಿದೆ. ವ 33,34; ಜ್ಞಾನೋ 19:17 ರೊಂದಿಗೆ ಹೋಲಿಸಿ ನೋಡಿರಿ. "ದೇವರ ವಿಷಯದಲ್ಲಿ ಐಶ್ವರ್ಯವಂತರಾಗುವದು" ಎಂಬದು ನಮ್ಮ ವಿಷಯದಲ್ಲಿ ಐಶ್ವರ್ಯವಂತರಾಗುವದಕ್ಕೆ ವಿರುದ್ಧವಾದದ್ದಾಗಿದೆ (ವ 17-19). **22-31**

**- 12:22-31** ಮತ್ತಾಯ 6:25-33. **29**

**12:29** ವಿಶ್ವಾಸಿಗಳ ಹೃದಯ ದೇವರು ಮತ್ತು ಆತನ ರಾಜ್ಯದ ಮೇಲೆ ಮಾತ್ರವೇ ಇರಬೇಕು. ಕೊಲೊ 3:1-2 ನೋಡಿರಿ. ಫಿಲಿಪ್ಪಿ 3:19-20 ರೊಂದಿಗೆ ಹೋಲಿಸಿ ನೋಡಿರಿ. **31**

**- 12:31** ಮತ್ತಾಯ 6:33 ನೋಡಿರಿ. **32**

**12:32** ಇದರ ಅರ್ಥ "ಬಡವರಾಗಿರಲು, ಏನೂ ಇಲ್ಲದವರಾಗಿರಲು ಹೆದರಬೇಡಿರಿ, ಜೀವಿತದ ಅವಶ್ಯಕತೆಗಳ ಪೂರೈಕೆಗಾಗಿ ದೇವರನ್ನು ಆತುಕೊಳ್ಳಿರಿ. ದೇವರು ತನ್ನ ಜನರನ್ನು ಎಂದಿಗೂ ಕೈ ಬಿಡುವದಿಲ್ಲ. ಆತನು ಅವರಿಗೆ ತನ್ನ ರಾಜ್ಯದಲ್ಲಿ ಸ್ಥಳವನ್ನು ಕೊಟ್ಟಿದ್ದಾನೆ. ಆತನು ಅವರಿಗೆ ಅಗತ್ಯವಿರುವ ಉಳಿದೆಲ್ಲವುಗಳನ್ನು ಕೊಡುವನು" (ರೋಮಾ 8:32; ಫಿಲಿಪ್ಪಿ 4:19). **33**

**12:33** 3:11; 6:30; 11:41; 14:33; 18:22,28 ನೋಡಿರಿ. ಪರಲೋಕದಲ್ಲಿ ಕೂಡಿಡುವ ಗಂಟು ಶಾಶ್ವತವಾಗಿರುವದು. **34**

- **12:34** ಮತ್ತಾಯ 6:19-21. **35**

**12:35** ಮತ್ತಾಯ 25:1-13 ರಲ್ಲಿರುವ ಸಾಮ್ಯವನ್ನು ನೋಡಿರಿ. **37**

- **12:37** ಮತ್ತಾಯ 24:42,46; 25:13. **38**

**12:38** ಇದು ಯೇಸು ಕ್ರಿಸ್ತನ ಎರಡನೇ ಬರೋಣವಾದ ನಂತರದ ಸಮಯವನ್ನು ಸೂಚಿಸುತ್ತದೆ. ರಾಜಾಧಿರಾಜನು, ಕರ್ತರ ಕರ್ತನು ಪ್ರಭಾವದೊಡನೆ ಕಾಣಿಸಿಕೊಂಡ ನಂತರ, ತನ್ನ ಶಿಷ್ಯರು ಕುಳಿತುಕೊಳ್ಳುವ ಮೇಜಿನ ಬಳಿ ಕಾಯುವದನ್ನು ಊಹಿಸಿಕೊಳ್ಳಿರಿ! ಆದರೆ ಕರ್ತನ ಯೇಸು ಕ್ರಿಸ್ತನು ಯಾವಾಗಲೂ ದೀನತೆಯುಳ್ಳ ಸೇವೆಯಲ್ಲಿ ಸಂತೋಷಿಸುವವನಾಗಿದ್ದಾನೆ – 22:27; ಮತ್ತಾಯ 20:8; ಯೋಹಾನ 13:4-5,12-16, ಮತ್ತು ಪ್ರಭಾವದಲ್ಲಿ ಕಾಣಿಸಿಕೊಳ್ಳುವದರಿಂದ ಆತನು ಬದಲಾಗುವದಿಲ್ಲ. ಹಾಗೆಯೇ, ಆತನ ಹಿಂಬಾಲಕರು ಎಂಬದಾಗಿ ಹೇಳಿಕೊಳ್ಳುವವರಲ್ಲಿಯೂ ಯಾವುದೇ ಬದಲಾವಣೆಗಳು ಇರಬಾರದು. **39-46**

- **12:39-46** ಮತ್ತಾಯ 24:43-51. **47-48**

**12:47-48** ನ್ಯಾಯವಿಚಾರಣೆಯ ದಿನದಲ್ಲಿ ಜನರಿಗೆ ಕೊಡಲಾಗಿದ್ದ ವಿವಿಧ ಬಗೆಯ ತಿಳುವಳಿಕೆ ಮತ್ತು ಅವಕಾಶಗಳ ಲೆಕ್ಕವನ್ನು ತೆಗೆದುಕೊಳ್ಳುವನು. **49**

**12:49** ಬೆಂಕಿಯನ್ನು ಸತ್ಯವೇದದಲ್ಲಿ ಸಹಜವಾಗಿ ಸಂಕೇತವಾಗಿ ಉಪಯೋಗಿಸಲಾಗಿದೆ – ವಿಮೋ 3:2; 13:21; 19:18; ಧರ್ಮೋ 32:32; ಕೀರ್ತನೆ 18:8; ಮತ್ತಾಯ 3:11. ಲೋಕದೊಳಗೆ ಆತನ ಸುವಾರ್ತೆಯನ್ನು ಪ್ರಚುರಪಡಿಸುವಾಗ ಎದುರಾಗುವ ಹಿಂಸೆಗಳು ಮತ್ತು ಕಷ್ಟಗಳನ್ನು ಇದು ಸೂಚಿಸುತ್ತದೆ. “ಬೆಂಕಿ” ಬಹುಶಃ ಇಂಥ ಕಾರ್ಯಗಳನ್ನು ಸೂಚಿಸುತ್ತದೆ – ಕೀರ್ತನೆ 66:12; ಯೆಶಾಯ 43:2; ಪ್ರಲಾ 1:13. ಆದರೆ ಕರ್ತನಾದ ಯೇಸು ಕ್ರಿಸ್ತನು ಯಾಕೆ ಇಂಥ ಬೆಂಕಿ ಬರಬೇಕೆಂದು ಬಯಸುತ್ತಿದ್ದಾನೆ? ಯಾಕಂದರೆ ಆತನ ರಾಜ್ಯ ವಿಸ್ತಾರವಾಗುವಾಗ ಮತ್ತು ಆತನ ಸತ್ಯ ಪ್ರಕಟವಾಗುವಾಗ ಇವೆಲ್ಲಾ ಸಂಭವಿಸುವವು ಎಂಬದು ಆತನಿಗೆ ಗೊತ್ತಿದೆ. **50**

**12:50** ಇಲ್ಲಿ “ದೀಕ್ಷಾಸ್ನಾನ” ಎಂಬದಾಗಿ ಆತನು ಹೇಳಿರುವದು ಬಹುಬೇಗ ಆತನಿಗೆ

ಎದುರಾಗುವ ಶ್ರಮೆಗಳು ಮತ್ತು ಮರಣವನ್ನು ಸೂಚಿಸಿದ್ದಾನೆ.

*"ಬಿಕ್ಕಟ್ಟಿನಲ್ಲಿದ್ದೇನೆ"*– ಮಾನವರಿಗೆ ದೊರೆಯುವ ರಕ್ಷಣೆಯನ್ನು ದೃಢಪಡಿಸುವ ದೈವೀಕ ಪ್ರೀತಿಯ ಒತ್ತಾಯವನ್ನು ಯೇಸು ಕ್ರಿಸ್ತನು ಅನುಭವಿಸಿದನು. ಆತನು ಎಲ್ಲಾ ರೀತಿಯ ಶ್ರಮೆಗಳನ್ನು, ಪಾಪಿಗಳಿಗೆ ಬದಲಾಗಿ ಶಿಲುಬೆಯ ಮೇಲೆ ಪ್ರಾಣ ಕೊಡುವಂತೆ ಅದು ಆತನನ್ನು ಒತ್ತಾಯಪಡಿಸಿತು. **51-53**

- **12:51-53** ಮತ್ತಾಯ 10:34-36. **54**

**12:54** *"ಪಶ್ಚಿಮ ದಿಕ್ಕು"*– ಅಂದರೆ ಮೆಡಿಟರೇನಿಯನ್ ಸಮುದ್ರದಿಂದ ತೇವಾಂಶವನ್ನು ತರುವ ಮೋಡ. **55**

**12:55** ದಕ್ಷಿಣ ಗಾಳಿ ಅರಣ್ಯದ ಕಡೆಯಿಂದ ಬೀಸುತಿತ್ತು. **56**

**12:56** ಯೇಸು ಕ್ರಿಸ್ತನು ಹೇಳುತ್ತಿರುವದೇನೆಂದರೆ ಆತ್ಮೀಕ ವಾತಾವರಣದಲ್ಲಾಗುವ ಬದಲಾವಣೆಯು ಶಾರೀರಿಕ ವಾತಾವರಣದಲ್ಲಾಗುವ ಬದಲಾವಣೆಗೆ ಸಮಾನವಾದದ್ದಾಗಿದೆ. 7:18-23 ನೋಡಿರಿ. **57**

**12:57** ಇತರರು ತಮಗೆ ಏನು ಆಲೋಚಿಸಬೇಕು ಮತ್ತು ನಂಬಬೇಕು ಎಂದು ಹೇಳಲು ಜನರು (ವ 54) ಯಾರಿಗೂ ಅವಕಾಶ ಕೊಡಬಾರದು. ಯೇಸು ಕ್ರಿಸ್ತನು ದೇವಕುಮಾರನಾದ ಮೆಸ್ಸೀಯನಾಗಿದ್ದಾನೆ ಎಂಬದಕ್ಕೆ ಪುರಾವೆಯು ಸ್ಪಷ್ಟವಾಗಿತ್ತು, ಅವರು ಅದನ್ನು ಅರಿತುಕೊಂಡು ಅದಕ್ಕನುಸಾರ ನಡೆದುಕೊಳ್ಳಬೇಕಾಗಿತ್ತು. ಆದರೆ ಇಂದು ದುಃಖದ ವಿಷಯವೇನೆಂದರೆ ಬಹುತೇಕ ಜನರು ಯೇಸು ಕ್ರಿಸ್ತನು ಕೊಡುವ ಪುರಾವೆಗಳ ಬಗ್ಗೆ ತಾವಾಗಿಯೇ ಯೋಚಿಸದೆ ಯಾವುದೋ ಗುರು ಅಥವಾ ಇನ್ನ್ಯಾರಿಂದಲೂ ಮಾರ್ಗದರ್ಶನದ ಹೆಸರಿನಲ್ಲಿ ದಾರಿ ತಪ್ಪುತ್ತಾರೆ. **58-59**

**12:58-59** ಇದೇ ವಾಕ್ಯಗಳು ಮತ್ತಾಯ 5:25-26 ರಲ್ಲಿ ಬರೆಯಲ್ಪಟ್ಟಿವೆಯಾದರೂ ಇವುಗಳ ಅರ್ಥ ಅವುಗಳಿಗಿಂತ ಬೇರೆಯಾಗಿರಬಹುದು. ಇಲ್ಲಿನ ಪರಿಸ್ಥಿತಿ (ವ 49-57) ನಾವು ಆಲೋಚಿಸುವಂತೆ ಮಾಡುತ್ತದೆ. ಇದರ ಅರ್ಥ ಹೀಗಿರಬಹುದು – "ನ್ಯಾಯಾಧಿಪತಿ" ದೇವರ ಎಲ್ಲಾ ಮಾನವರಿಗೆ ನ್ಯಾಯಾಧಿಪತಿಯಾಗಿದ್ದಾನೆ ಎಂಬದನ್ನು ಸೂಚಿಸುತ್ತದೆ; "ವಾದಿ" ಮಾನವರನ್ನು ಅಪರಾಧಿಗಳೆಂದು ನಿರ್ಣಯಿಸುವ ದೇವರ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ (ಎಫೆ 2:13-17; ಕೊಲೊ 2:13-14 ರೊಂದಿಗೆ ಹೋಲಿಸಿ ನೋಡಿರಿ) – ಅಥವಾ

ಯೆಹೂದ್ಯರು ಸತತವಾಗಿ ವಾಗ್ವಾದ ನಡೆಸುತ್ತಿದ್ದ ಮತ್ತು ವಾದಿ ಎಂದು ಪರಿಗಣಿಸುತ್ತಿದ್ದ – ಯೇಸು ಕ್ರಿಸ್ತನನ್ನು ಸೂಚಿಸುತ್ತದೆ. "ಸೆರೆಮನೆ" ನರಕವನ್ನು ಸೂಚಿಸುತ್ತದೆ (2 ಪೇತ್ರ 2:4; ಯೂದ 6 ರೊಂದಿಗೆ ಹೋಲಿಸಿ ನೋಡಿರಿ). ಆತ್ಮೀಕ ಪಾಠವೇನೆಂದರೆ – ಅವಕಾಶ ದೊರೆಯುವಾಗ ದೇವರೊಂದಿಗೆ, ಆತನ ಧರ್ಮಶಾಸ್ತ್ರದೊಂದಿಗೆ ಮತ್ತು ಆತನ ಮಗನೊಂದಿಗೆ ಸಮಾಧಾನ ಮಾಡಿಕೊಳ್ಳಿರಿ (2 ಕೊರಿಂಥ 5:18-21).

# 13[1]

**13:1** *"ಪಿಲಾತನು"*– 3:1; ಮತ್ತಾಯ 27:2. ಈ ಘಟನೆ ಬೇರೆ ಎಲ್ಲಿಯೂ ಬರೆಯಲ್ಪಟ್ಟಿಲ್ಲ. ಇದು ಪಿಲಾತನ ನಡತೆಯ ಬಗ್ಗೆ ಕೆಲವು ವಿಷಯಗಳನ್ನು ತಿಳಿಸುತ್ತದೆ. ಜನರು ದೇವಾಲಯದಲ್ಲಿ ಆರಾಧನೆಗೆ ಮಾಡುವಾಗ ಅವನು ಅವರನ್ನು ಕೊಲ್ಲಿಸಿದ್ದನು. ಅದಕ್ಕೆ ಕಾರಣ ಏನೆಂದು ಕೊಡಲಾಗಿಲ್ಲ. **2-3**

**13:2-3** ಜನರಿಗೆ ದೊಡ್ಡ ವಿಪತ್ತುಗಳು ಸಂಭವಿಸುವಾಗ, ಅವರು ಇತರರಿಗಿಂತ ಹೆಚ್ಚು ಹೀನ ಸ್ಥಿತಿಯಲ್ಲಿರುವವರು ಆದ್ದರಿಂದ ಅವರಿಗೆ ಹಾಗೆಯೇ ಆಗಬೇಕು ಎಂದು ನಾವು ಅಂದುಕೊಳ್ಳುತ್ತೇವೆ. ಯೋಬ 4:7-9; 8:3 ರ ನೋಟ್ಸ್ ನೋಡಿರಿ. ಕೆಲವು ಪರಿಸ್ಥಿತಿಗಳಲ್ಲಿ ಇದು ಖಂಡಿತವಾಗಿಯೂ ನಿಜವಾಗಿರುತ್ತದೆ (2 ಪೇತ್ರ 2:5-7). ಆದರೆ ಗಲಿಲಾಯದವರ ಪರಿಸ್ಥಿತಿಯಲ್ಲಿ ಇದು ನಿಜವಾಗಿರಲಿಲ್ಲ ಹಾಗೆಯೇ ಅನೇಕರ ವಿಷಯದಲ್ಲಿ ಇದು ನಿಜವಾಗಿರುವದಿಲ್ಲ. ವಿಪತ್ತುಗಳಿಂದ ನಾವು ಪಾಠ ಕಲಿಯಬೇಕೆಂದು ಯೇಸು ಕ್ರಿಸ್ತನು ಬಯಸುತ್ತಾನೆ – ಪಶ್ಚಾತ್ತಾಪಪಡಬೇಕು ಮತ್ತು ಶ್ರಮೆ ಅನುಭವಿಸುತ್ತಿರುವವರಿಗಿಂತ ನಾವು ಉತ್ತಮರೆಂದು ಅಂದುಕೊಳ್ಳಬಾರದು. ಅವರಿಗೆ ಎದುರಾದಂತೆ ವಿಪತ್ತುಗಳು ನಮಗೂ ಎದುರಾಗಬಹುದು. ಮತ್ತಾಯ 3:2 ರಲ್ಲಿ ಪಶ್ಚಾತ್ತಾಪದ ಕುರಿತಾದ ನೋಟ್ ನೋಡಿರಿ. **4**

**13:4** ಶಿಲೋವ ಯೆರೂಸಲೇಮಿನಲ್ಲಿದೆ (ನೆಹೆ 3:15; ಯೋಹಾನ 9:7). ಈ ಘಟನೆ ಬೇರೆ ಎಲ್ಲಿಯೂ ಬರೆಯಲ್ಪಟ್ಟಿಲ್ಲ. **6-9**

**13:6-9** ಈ ಸಾಮ್ಯವು ಲೂಕನ ಸುವಾರ್ತೆಯಲ್ಲಿ ಮಾತ್ರವೇ ಬರೆಯಲ್ಪಟ್ಟಿದ್ದು, ಮೇಲಿನ ವಾಕ್ಯಗಳಿಗೆ ಸಂಬಂಧಿಸಿದ್ದಾಗಿದೆ ಮತ್ತು ದೇವರು ಮಾನವರ ಕಾರ್ಯಗಳಿಗೆ ಮೇಲ್ವಿಚಾರನಾಗಿದ್ದಾನೆ ಹಾಗೂ ತನ್ನ ಜ್ಞಾನದ ಮೂಲಕ ಅವರಿಗೆ ನ್ಯಾಯತೀರ್ಪು ಮಾಡುತ್ತಾನೆ ಎಂದು ತಿಳಿಸುತ್ತದೆ. ಈ ಕಾರ್ಯವನ್ನು ಮಾಡಲು ಆತನು ಪಿಲಾತನಂಥವರನ್ನು

ಅಥವಾ ಧರೆಗುರುಳುವ ಗೋಪುರಗಳನ್ನು ಅಥವಾ ಬೇರೆ ಯಾವುದಾದರು ಸಾಧನವನ್ನು ಉಪಯೋಗಿಸಿಕೊಳ್ಳುತ್ತಾನೆ. ಯಾಜಕ 26:14-33; ಧರ್ಮೋ 28:20-29; ನ್ಯಾಯ 2:14-15; ಯೆಶಾಯ 10:5-6; ಯೆರೆ 14:11-12 ನೋಡಿರಿ. **6**

**13:6** ಇಲ್ಲಿ ಕರ್ತನಾದ ಯೇಸು ಕ್ರಿಸ್ತನು ಇಸ್ರಾಯೇಲ್ ಜನಾಂಗ ಮತು ಅದರ ಜನರನ್ನು ವ್ಯಕ್ತಿಗತವಾಗಿ ಮನಸ್ಸಿನಲ್ಲಿಟ್ಟುಕೊಂಡು ಅಂಜೂರದ ಮರದ ಬಗ್ಗೆ ಮಾತನಾಡಿದ್ದಾನೆ. ಮತ್ತಾಯ 21:18-22 ಮತ್ತು ನೋಟ್ಸ್ ನೋಡಿರಿ. ಅಂಜೂರದ ಮರವಿದ್ದ ವ್ಯಕ್ತಿ ದೇವರನ್ನು ಸೂಚಿಸುತ್ತಾನೆ. ದ್ರಾಕ್ಷೇಯ ತೋಟವನ್ನು ನೋಡಿಕೊಳ್ಳುವವರು ಆತನ ಸೇವಕರಾಗಿದ್ದಾರೆ ಅಥವಾ ಕರ್ತನಾದ ಯೇಸು ಕ್ರಿಸ್ತನಾಗಿದ್ದಾನೆ. ಮಾನವರು ಮಾಡುವ ಮತ್ತು ಮಾಡದಿರುವ ಕಾರ್ಯಗಳನ್ನೆಲ್ಲಾ ದೇವರು ಗಮನಿಸುತ್ತಿರುತ್ತಾನೆ ಹಾಗೂ ಆತನು ಯಾವಾಗಲೂ ಲೋಕದಿಂದ ತೆಗೆಯುತ್ತಿರುತ್ತಾನೆ ಮತ್ತು ಇತರರ ವಿಷಯಗಳಲ್ಲಿ ನಿರ್ದಿಷ್ಟ ಸಮಯಗಳ ತನಕ ತಾಳ್ಮೆಯಿಂದ ಕಾಯುತ್ತಿರುತ್ತಾನೆ ಎಂಬದು ನಿಶ್ಚಯವಾಗಿದೆ. ಒಳ್ಳೆಯ ಫಲವಿಲ್ಲದಿರುವ ಪ್ರತಿಯೊಂದು ಜೀವವು ಅಪಾಯದಲ್ಲಿದೆ – ಮತ್ತಾಯ 3:10; 7:19; ಯೆಶಾಯ 51:1-7; ಯೋಹಾನ 15:2,6. **7**

**13:7** ದೇವರಿಗಾಗಿ ಫಲ ಕೊಡದಿರುವ ಮಾನವರು ಯಾವುದೇ ಉದ್ದೇಶವಿಲ್ಲದವರಾಗಿ ಭೂಲೋಕದಲ್ಲಿ ಜೀವಿಸುವವರಾಗಿದ್ದಾರೆ. ಅವರು ಯಾವುದೇ ಉದ್ದೇಶವಿಲ್ಲದೆ ಮುಂದುವರೆಯಲು ಆತನು ಅವರಿಗೆ ಅನುಮತಿಸಬೇಕೇ? **8-9**

**13:8-9** ದ್ರಾಕ್ಷೇ ತೋಟವನ್ನು ನೋಡಿಕೊಳ್ಳುತ್ತಿದ್ದವನು ಅಂಜೂರದ ಮರಕ್ಕಾಗಿ ಮಧ್ಯಸ್ಥಿಕೆ ಮಾಡುವ ಮೂಲಕ ನ್ಯಾಯತೀರ್ಪನ್ನು ಸ್ವಲ್ಪ ಕಾಲ ಮುಂದೂಡಿದನು, ಒಂದುವೇಳೆ ಅಂಜೂರದ ಮರ ಫಲ ಕೊಟ್ಟರೆ ಅದು ಶಾಶ್ವತವಾಗಿ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುತ್ತದೆ. ಆದಿ 18:22-23; ವಿಮೋ 32:7-14,31,32; ಯೆಹೆಜ್ಕೇಲ 22:30-31 ರೊಂದಿಗೆ ಹೋಲಿಸಿ ನೋಡಿರಿ. ಕರ್ತನಾದ ಯೇಸು ಕ್ರಿಸ್ತನು "ಅಂಜೂರದ ಮರಗಳಾಗಿರುವ" ನಮಗಾಗಿ ಆಸಕ್ತಿಯಿಂದ ಪ್ರಾರ್ಥನೆ ಮಾಡದೆ ಹೋಗಿದ್ದರೆ ನಾವೆಲ್ಲರೂ ಎಲ್ಲಿರುತ್ತಿದ್ದೆವು? (ರೋಮಾ 8:34; ಇಬ್ರಿ 7:25). **10**

**13:10** *"ಸಭಾಮಂದಿರ"*– ಮತ್ತಾಯ 4:23.

*"ಸಬ್ಬತ್"*– ವಿಮೋ 20:8-11. **11**

**13:11** ದುರಾತ್ಮ (ದೆವ್ವ) ವಿವಿಧ ರೀತಿಯ ಶಾರೀರಿಕ ಬಲಹೀನತೆಗಳನ್ನು ಉಂಟುಮಾಡುತ್ತದೆ – ಮತ್ತಾಯ 9:32-33; 12:22; ಮಾರ್ಕ 9:25. ಆದರೆ ಪ್ರತಿಯೊಂದು ರೀತಿಯ ಶಾರೀರಿಕ ಕಾಯಿಲೆಗಳಿಗೆ ದುರಾತ್ಮಗಳೇ ಕಾರಣ ಎಂದು ನಾವು ಯೋಚಿಸಲು ಆಗುವದಿಲ್ಲ. **13**

**- 13:13** ಮತ್ತಾಯ 19:13; ಮಾರ್ಕ 5:23; 6:5; 7:32; 8:23; 16:18. **14**

**- 13:14** ಮತ್ತಾಯ 12:2,9-14. **15**

**13:15** ಇಲ್ಲಿ ಆತನು ಅವರನ್ನು ಕಪಟಿಗಳೇ ಎಂದು ಕರೆದಿದ್ದಾನೆ ಯಾಕಂದರೆ ಅವರು ಎರಡು ಅಭಿಪ್ರಾಯವುಳ್ಳವರಾಗಿದ್ದರು, ಒಂದು ತಮ್ಮ ವಿಷಯವಾಗಿ ಇನ್ನೊಂದು ಇತರರ ವಿಷಯವಾಗಿ. ನಿಮ್ಮ ನೆರೆಯವರನ್ನು ಪ್ರೀತಿಸಿರಿ ಎಂದು ಧರ್ಮಶಾಸ್ತ್ರದಲ್ಲಿ ಬರೆಯಲಾಗಿದ್ದರೂ ಅವರು ನೆರೆಯವರಿಗಿಂತ ತಮ್ಮ ಪಶುಗಳ ಬಗ್ಗೆ ಹೆಚ್ಚು ಕಾಳಜಿಯುಳ್ಳವರಾಗಿದ್ದರು – ಯಾಜಕ 19:18. **16**

**13:16** ಈಕೆ ಯೆಹೂದ್ಯ ಜನಾಂಗದ ಮೂಲಪಿತೃವಾದ ಅಬ್ರಹಾಮನ ಸಂತತಿಯಾಗಿದ್ದಳು.

*"ಸೈತಾನ"*– 1 ಪೂರ್ವ 21:1; ಮತ್ತಾಯ 4:1-10; ಯೋಹಾನ 8:44; 12:31. **17**

**13:17** *"ನಾಚಿಕೊಂಡರು"*– ಕೀರ್ತನೆ 25:3; 44:7; 78:66; 83:16; 132:18. **18-21**

**- 13:18-21** ಮತ್ತಾಯ 13:31-33. **23**

**13:23** ಇಡೀ ಜನಸಂಖ್ಯೆಗೆ ಹೋಲಿಸಿದರೆ ಕೆಲವರು ಯಾವುದಾದರೊಂದು ಸಮಯದಲ್ಲಿ ರಕ್ಷಣೆ ಹೊಂದುತ್ತಾರೆ (ಮತ್ತಾಯ 7:14), ಆದರೆ ಎಲ್ಲಾ ಕಾಲಗಳಲ್ಲಿ ಹಾಗೂ ಸ್ಥಳಗಳಲ್ಲಿ ರಕ್ಷಣೆ ಹೊಂದಿದವರನ್ನು ಒಟ್ಟಾಗಿ ಸೇರಿಸುವಾಗ ಸಂಖ್ಯೆ ಅಧಿಕವಾಗಿರುವದು. ಪ್ರಕ 7:9 ರೊಂದಿಗೆ ಹೋಲಿಸಿ ನೋಡಿರಿ. **24**

**13:24** ದೇವರು ಎಷ್ಟು ಜನರನ್ನು ರಕ್ಷಿಸುತ್ತಾನೆ ಎಂಬದನ್ನು ಯಾರೂ ಲೆಕ್ಕಿಸಲು ಪ್ರಯತ್ನಿಸಬಾರದು ಬದಲಾಗಿ ರಕ್ಷಣೆ ಹೊಂದುವವರಲ್ಲಿ ತಮ್ಮ ಹೆಸರು ಇದೆಯೋ ಅಥವಾ ಇಲ್ಲವೋ ಎಂಬದರ ಬಗ್ಗೆ ಮಾತ್ರವೇ ಯೋಚಿಸಬೇಕು.

*"ಹೆಣಗಾಡಿರಿ"*– ಗ್ರೀಕ್ ಭಾಷೆಯಲ್ಲಿಯೂ ಇದು ಒಂದೇ ಪದವಾಗಿದೆ. ದೇವರ ಆತ್ಮೀಕ

ರಾಜ್ಯದೊಳಗೆ ಪ್ರವೇಶಿಸಲು ಪ್ರತಿಯೊಬ್ಬರೂ ಆಸಕ್ತಿಯಿಂದ ಮತ್ತು ಉತ್ಸಾಹದಿಂದ ಪ್ರಯತ್ನಿಸಬೇಕು. ಇದರ ಅರ್ಥ ಒಬ್ಬ ವ್ಯಕ್ತಿ ಕಠಿಣ ಪರಿಶ್ರಮದಿಂದ ಅಥವಾ ಒಳ್ಳೆಯ ಪ್ರಸಿದ್ಧಿಯಿಂದ ಅಥವಾ ಬೇರೆ ಯಾವುದರಿಂದಲೋ ದೇವರ ರಾಜ್ಯದೊಳಗೆ ಪ್ರವೇಶವನ್ನು ಪಡೆಯಬಹುದು ಎಂಬದಾಗಿಯಲ್ಲ. ಬದಲಾಗಿ ಇಕ್ಕಟ್ಟಾದ ಬಾಗಿಲಿನಿಂದ ಅದರೊಳಗೆ ಹೋಗುವವರಿಗೆ ಕಷ್ಟಗಳು ಮತ್ತು ಅಡೆತಡೆಗಳು ಎದುರಾಗುತ್ತವೆ, ವಿರೋಧಿಸುವ ಅನೇಕ ಶಕ್ತಿಗಳು ಪ್ರಬಲವಾಗಿರುತ್ತವೆ ಎಂಬದಾಗಿದೆ. ಹಾಗೆಯೇ ಯಾರೆಲ್ಲಾ ಇದರ ಮೂಲಕ ಪ್ರವೇಶಿಸುವದಿಲ್ಲವೋ ಅವರಿಗೆ ದೊಡ್ಡ ಅಪಾಯ ಎದುರಾಗುವದು ಎಂಬದನ್ನೂ ಇದು ಸೂಚಿಸುತ್ತದೆ. ಹಾಗೆಯೇ ಯಾರೆಲ್ಲಾ ಪ್ರವೇಶಿಸುತ್ತಾರೋ ಅವರು ಮಹದಾದ ಹಾಗೂ ಅದ್ಭುತವಾದ ಕಾರ್ಯಗಳನ್ನು ಹೊಂದುವರು ಮತ್ತು ಅನುಭವಿಸುವರು, ಅವು ಅವರ ಶ್ರಮೆಗಳಿಗೆ ಪ್ರತಿಫಲವಾಗಿರುವವು ಎಂಬದನ್ನೂ ಸೂಚಿಸುತ್ತದೆ. ಮತ್ತಾಯ 7:13-14; 11:12 ರಲ್ಲಿ ನೋಟ್ಸ್ ನೋಡಿರಿ. ಮತ್ತಾಯ **5:29-30** ರೊಂದಿಗೆ ಹೋಲಿಸಿ ನೋಡಿರಿ. **25**

**13:25** ಅವಕಾಶದ ಬಾಗಿಲು ಸದಾಕಾಲವೂ ತೆರೆದಿರುವದಿಲ್ಲ – ಮತ್ತಾಯ 25:10-11; ಜ್ಞಾನೋ 1:20-33. **26**

**13:26** ಆತನ ವಾಕ್ಯವನ್ನು ಕೇಳಿಸಿಕೊಳ್ಳಲು ತಮಗೆ ದೊರೆತ ಅವಕಾಶಗಳು ತಮ್ಮ ಅಪರಾಧಗಳನ್ನು ಹೆಚ್ಚಿಸುತ್ತಿವೆ ಎಂಬದನ್ನು ಅವರು ಅರ್ಥಮಾಡಿಕೊಳ್ಳಬೇಕಾಗಿತ್ತು ಯಾಕಂದರೆ ಅವರು ಅವುಗಳಿಗೆ ವಿಧೇಯರಾಗಲಿಲ್ಲ. **27**

- **13:27** ಮತ್ತಾಯ 7:23; 25:12. **28-30**

- **13:28-30** ಮತ್ತಾಯ 8:11-12; 19:30. **31**

**13:31** ಮತ್ತಾಯ 14:1. ಯೇಸು ಕ್ರಿಸ್ತನನ್ನು ಹೆದರಿಸುವವರು ಆತನಿಂದ ತಪ್ಪಿಸಿಕೊಳ್ಳಬಹುದು ಎಂಬದಾಗಿ ಅವರು ವ್ಯರ್ಥವಾಗಿ ಊಹಿಸಿಕೊಂಡರೇ? **32**

**13:32** ನರಿಗೆ ಮೋಸದ ಪ್ರಾಣಿ ಎಂಬ ಹೆಸರಿದೆ. ಆದರೆ ಯೇಸು ಕ್ರಿಸ್ತನು ಹೆರೋದನಿಗಾಗಲಿ ಅಥವಾ ಬೇರೆ ಯಾರಿಗಾಗಲಿ ಹೆದರದೆ ತನ್ನ ಗುರಿ ಸಾಧಿಸಲು ಮುಂದಾದನು. ಕರ್ತನಾದ ಯೇಸು ಕ್ರಿಸ್ತನು ತಾನೇನು ಮಾಡುತ್ತಿದ್ದೇನೆ ಮತ್ತು ತನಗೇನಾಗುವದು ಹಾಗೂ ತಾನು ಹೇಗೆ ಮತ್ತು ಯಾವಾಗ ಭೂಲೋಕದಲ್ಲಿ ತನ್ನ ಕಾರ್ಯವನ್ನು ಮುಗಿಸುವನು ಎಂಬದು ಚೆನ್ನಾಗಿ ಗೊತ್ತಿತ್ತು – ವ 33; ಮತ್ತಾಯ 16:21; 17:22-23; ಯೋಹಾನ 7:30. **33**

**13:33** ಇದನ್ನು ವ್ಯಂಗ್ಯವಾಗಿ ಹೇಳಲಾಗಿದೆ. ಯೆರೆಸಲೇಮಿನಲ್ಲಿ ಅನೇಕ ಪ್ರವಾದಿಗಳನ್ನು ಕೊಲ್ಲಲಾಗಿತ್ತು ಮತ್ತು ಯೇಸು ಕ್ರಿಸ್ತನಿಗೂ ತಾನು ಹೆರೋದನ ಕೈಯಿಂದಾಗಲಿ ಅಥವಾ ಬೇರೆ ಸ್ಥಳದಲ್ಲಾಗಲಿ ಸಾಯುವದಿಲ್ಲ ಬದಲಾಗಿ ಅಲ್ಲೇ ಸಾಯಬೇಕು ಎಂಬದು ಗೊತ್ತಿತ್ತು. **34-35**

- **13:34-35** ಮತ್ತಾಯ 23:37-38.

# 14 1

**14:1** *"ಫರಿಸಾಯರು"*– ಮತ್ತಾಯ 3:7. 13:10-17 ರ ನಿಮಿತ್ತವಾಗಿ ಅವರು ಯೇಸು ಕ್ರಿಸ್ತನನ್ನು ಗಮನಿಸುತ್ತಿದ್ದರು.

*"ಸಬ್ಬತ್"*– ವಿಮೋ 20:8-11. **2**

**14:2** ಜಲೋದರ ಎಂಬದು ಒಂದು ಬಗೆಯ ಕಾಯಿಲೆಯಾಗಿದ್ದು, ಅದಕ್ಕೆ ಒಳಗಾಗುವವರ ಕಾಲುಗಳಲ್ಲಿ ಊತ ಕಾಣಿಸಿಕೊಳ್ಳುತ್ತದೆ. **3**

**14:3** ಯೇಸು ಕ್ರಿಸ್ತನಿಗೆ ಉತ್ತರ ಗೊತ್ತಿತ್ತು – 13:15-16; ಮತ್ತಾಯ 12:11-12. ಅವರು ಬುದ್ಧಿಪೂರ್ವಕವಾಗಿ ಯೋಚನೆ ಮಾಡುವಂತೆ ಮಾಡಲು ಯೇಸು ಕ್ರಿಸ್ತನು ಪ್ರಯತ್ನಿಸಿದನು.

*"ಧರ್ಮೋಪದೇಶಕರು"*– 10:25 ರ ನೋಟ್ ನೋಡಿರಿ. **7**

- **14:7** ಮತ್ತಾಯ 23:6-7. **11**

**14:11** ಯೇಸು ಕ್ರಿಸ್ತನು ಇಲ್ಲಿ ಮೇಲೆ ತಿಳಿಸಲಾಗಿರುವ ವಿಷಯದ ಆತ್ಮೀಕ ಅಳವಡಿಸುವಿಕೆಯ ಬಗ್ಗೆ ತಿಳಿಸುತ್ತಿದ್ದಾನೆ. ದೇವರು ಮಾನವರನ್ನು ತಗ್ಗಿಸುವವನು ಅಥವಾ ಹೆಚ್ಚಿಸುವವನಾಗಿದ್ದಾನೆ, ಅವರ ಸ್ವಭಾವ ಮತ್ತು ಮನಸ್ಥಿತಿಯ ಆಧಾರದ ಮೇರೆಗೆ ಈ ಕಾರ್ಯಗಳನ್ನು ಆತನು ಮಾಡುತ್ತಾನೆ – 11:43; 18:14; 20:46; ಜ್ಞಾನೋ 3:34; 25:6-7; ಮತ್ತಾಯ 18:4; 23:12; ಯಾಕೋಬ 4:10; 1 ಪೇತ್ರ 5:6. **12-14**

**14:12-14** ಯೇಸು ಕ್ರಿಸ್ತನು ಇಲ್ಲಿ ಅನುಸರಿಸಲು ಒಳ್ಳೆಯ ಮಾದರಿಯನ್ನು ತಿಳಿಸಿದ್ದಾನೆ, ಆದರೆ ಎಷ್ಟು ಜನ ನಿಜವಾಗಿಯೂ ಅದನ್ನು ಅನುಸರಿಸಿದ್ದಾರೆ? ಬಹುತೇಕ ಜನರು ಕೇಳಿಸಿಕೊಳ್ಳುವವರಾಗಿದ್ದರೂ ಅದರಂತೆ ನಡೆಯದವರಾಗಿದ್ದಾರೆ. **14**

**14:14** *“ಮುಯ್ಯಿಗೆಮುಯ್ಯಿ ತೀರಿಸುವದು”*– ದೇವರು ಈ ಕಾರ್ಯವನ್ನು ಮಾಡುತ್ತಾನೆ – ಜ್ಞಾನೋ 19:17; 14:21; ಮತ್ತಾಯ 10:42.

*“ನೀತಿವಂತರು ಜೀವಿತರಾಗಿ ಎದ್ದುಬರುವರು”*– ಯೋಹಾನ 5:28-29; 1 ಕೊರಿಂಥ 15:22-23,51,52; 1 ಥೆಸ 4:16; ಪ್ರಕ 20:4-6. **15**

**14:15** *“ಊಟ ಮಾಡುವವನು”*– ಅಂದರೆ ಊಟದಲ್ಲಿ ಅಥವಾ ಔತಣದಲ್ಲಿ ಭಾಗಿಯಾಗುವದು. ಯೆಶಾಯ 25:6; ಮತ್ತಾಯ 8:11; 25:1-10; 26:29; ಪ್ರಕ 19:9 ರೊಂದಿಗೆ ಹೋಲಿಸಿ ನೋಡಿರಿ.

*“ದೇವರ ರಾಜ್ಯ”*– ಮತ್ತಾಯ 4:17. ಇದರಲ್ಲಿ ಔತಣ ಮಾಡುವವರು ನಿಜವಾಗಿಯೂ ಧನ್ಯರಾಗಿದ್ದಾರೆ. ಆದರೆ ಮುಂದಿನ ಸಾಮ್ಯದಲ್ಲಿ ಕರ್ತನಾದ ಯೇಸು ಕ್ರಿಸ್ತನು ಹೇಳುವದೇನೆಂದರೆ ಅನೇಕ ಜನರು ಇದನ್ನು ಅರ್ಥಮಾಡಿಕೊಳ್ಳುವದಿಲ್ಲ ಮತ್ತು ಆ ಔತಣಕ್ಕೆ ಹೋಗಲು ಕೊಡಲಾಗುವ ಪ್ರತಿಯೊಂದು ಆಹ್ವಾನವನ್ನು ತಿರಸ್ಕರಿಸುತ್ತಾರೆ. ಮತ್ತಾಯ 22:1-14 ರೊಂದಿಗೆ ಹೋಲಿಸಿ ನೋಡಿರಿ. **16**

**14:16** *“ಒಬ್ಬಾನೊಬ್ಬ ಮನುಷ್ಯನು”*– ದೇವರನ್ನು ಸೂಚಿಸುತ್ತದೆ. ಮೊದಲನೆಯದಾಗಿ ಆತನು ಯೆಹೂದ್ಯರಿಗೆ ಆಹ್ವಾನವನ್ನು ಕಳುಹಿಸಿದನು, ಯೇಸು ಕ್ರಿಸ್ತನು ಅವರಿಗಾಗಿಯೇ ಬಂದನು – ಮತ್ತಾಯ 10:6; 15:24; ರೋಮಾ 1:16. ಈಗ ಆತನು ಲೋಕದಾದ್ಯಂತವಿರುವ ಜನರಿಗೆ ಆಹ್ವಾನ ಕೊಡುತ್ತಿದ್ದಾನೆ – ಮತ್ತಾಯ 28:18-20; ಮಾರ್ಕ 16:15; ಲೂಕ 24:46-47. **17**

**14:17** ರಕ್ಷಣೆ ಮತ್ತು ದೇವರ ರಾಜ್ಯಕ್ಕೆ ಸಂಬಂಧಿಸಿದ ಕಾರ್ಯಗಳನ್ನೆಲ್ಲಾ ದೇವರು ತಾನೇ ಸಿದ್ಧಮಾಡಿದ್ದಾನೆ. ಯೇಸು ಕ್ರಿಸ್ತನೇ ದೇವರು ಸಿದ್ಧಮಾಡಿರುವ ಔತಣ. ಯೋಹಾನ 6:27,33,35,56-58 ರೊಂದಿಗೆ ಹೋಲಿಸಿ ನೋಡಿರಿ. ಜನರು ಮಾಡಬೇಕಾಗಿರುವದೆಲ್ಲಾ ದೇವರ ಆಹ್ವಾನವನ್ನು ಅಂಗೀಕರಿಸಿಕೊಳ್ಳಬೇಕು ಮತ್ತು ನಂಬಿಕೆಯಿಂದ ಆತನ ಬಳಿಗೆ ಬರಬೇಕು. **18**

**14:18** ಇಲ್ಲೊಂದು ಅದ್ಭುತವಾದ ಸಂಗತಿಯನ್ನು ನೋಡಬಹುದಾಗಿದೆ! ಔತಣದ ಊಟದಲ್ಲಿ ಭಾಗಿಯಾಗಲು ಯಾರಿಗೆ ಇಷ್ಟವಿರುವದಿಲ್ಲ? ಯಾವುದೋ ಬೇಡವಾದ ಕಾರ್ಯಕ್ಕೆ ತಮ್ಮನ್ನು ಆಹ್ವಾನಿಸಲಾಗಿದೆ ಆದ್ದರಿಂದ ಹೇಗಾದರೂ ಮಾಡಿ ಅದನ್ನು

ತಪ್ಪಿಸಬೇಕು ಎಂಬ ರೀತಿಯಲ್ಲಿ ಈ ಜನರು ನಡೆದುಕೊಂಡದ್ದನ್ನು ನಾವು ನೋಡಬಹುದು. ಅವರ ನಡತೆಗೆ ಕಾರಣಗಳನ್ನು ನಾವು ಯೋಹಾನ 3:19-20; 7:7; 15:18; ರೋಮಾ 8:6-7; 2 ಕೊರಿಂಥ 4:3-4; ಎಫೆ 4:18 ರಲ್ಲಿ ನೋಡಬಹುದಾಗಿದೆ. ಕರ್ತನಾದ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳದಿರಲು ಜನರು ಕೊಡುವ ಕಾರಣಗಳು ಇಲ್ಲಿ ಕೊಡಲಾಗಿರುವ ಕಾರಣಗಳಂತೆಯೇ ಬುದ್ಧಿಯಿಲ್ಲದವುಗಳಾಗಿವೆ. ಹೊಲವನ್ನು ನೋಡದೆ ಅದನ್ನು ಕೊಂಡುಕೊಳ್ಳುವವನು ಎಂಥಾ ಬುದ್ಧಿವಂತನು? ಅಥವಾ ಎತ್ತುಗಳನ್ನು ನೋಡದೆ ಮತ್ತು ಪರೀಕ್ಷಿಸದೆ ಕೊಳ್ಳುವವರು ಯಾರು (ವ 19)? ತನ್ನ ಹೆಂಡತಿ ತನ್ನೊಂದಿಗೆ ಔತಣಕ್ಕೆ ಬರಲು ಇಷ್ಟಪಡುತ್ತಾಳೋ ಇಲ್ಲವೋ ಎಂದು ಯೋಚಿಸದವನು ಎಂಥಾ ಬುದ್ಧಿವಂತನು (ವ 20)? ಸತ್ಯವೇನೆಂದರೆ ಅವರಿಗೆ ಊಟಕ್ಕೆ ಹೋಗಲು ಇಷ್ಟವಿರಲಿಲ್ಲ, ಇದನ್ನು ಅವರು ಕೊಟ್ಟ ಕಾರಣದಿಂದಲೇ ನಾವು ತಿಳಿಯಬಹುದು. **21**

**14:21** ಖಂಡಿತವಾಗಿಯೂ ಆ ವ್ಯಕ್ತಿಗೆ ಕೋಪ ಬಂದಿತು. ತನ್ನ ಆಹ್ವಾನವನ್ನು ನಿರಾಕರಿಸುವ ಮೂಲಕ ಕರೆಯಲ್ಪಟ್ಟವರು ಆತನನ್ನು ಅವಮಾನಿಸಿದರು. ರಕ್ಷಣೆ ಮತ್ತು ಆಶೀರ್ವಾದ ಹೊಂದಲು ಹಾಗೂ ಪರಲೋಕಕ್ಕೆ ಬಾಧ್ಯರಾಗಲು ದೇವರು ಕೊಡುವ ಆಹ್ವಾನವನ್ನು ತಿರಸ್ಕರಿಸುವವರು ಆತನನ್ನು ಅವಮಾನಿಸುವವರಾಗಿದ್ದಾರೆ. ಆದ್ದರಿಂದ ಆತನ ಕೋಪ ನ್ಯಾಯವಾಗಿದೆ. ಆದರೆ ಅಂತ್ಯದಲ್ಲಿ ಆತನ ಮನೆ ಜನರಿಂದ ತುಂಬಿರುವರು ಅಲ್ಲಿ ನಾವು ಬಡವರು ಮತ್ತು ಅಂಗವಿಕಲರನ್ನು ಸಹ ನೋಡಬಹುದು. 1 ಕೊರಿಂಥ 1:26-29 ನೋಡಿರಿ. **23**

**14:23** ಜನರು ರಕ್ಷಣೆ ಹೊಂದಬೇಕೆಂದು ದೇವರು ಬಯಸುವದನ್ನು ಇದು ತೋರಿಸುತ್ತದೆ. ಕ್ರಿಸ್ತನಲ್ಲಿ ಆತನು ಸಿದ್ಧಮಾಡಿರುವಂಥವುಗಳು ಮತ್ತು ಕ್ರಿಸ್ತನ ಸೇವಕರ ಮೂಲಕ ಎಲ್ಲಾ ಕಡೆಗಳಿಗೂ ಆತನು ಕಳುಹಿಸುವ ಆಹ್ವಾನಗಳೂ ಸಾಕಾಗುವದಿಲ್ಲ. ರಕ್ಷಣೆ ಹೊಂದದಂತೆ ಜನರಲ್ಲಿರುವ ಹಠದ ಸ್ವಭಾವವನ್ನು ಜಯಿಸಲು ಆತನು ಎಲ್ಲಾ ರೀತಿಯ ಸಾಧನಗಳನ್ನು ಉಪಯೋಗಿಸುತ್ತಾನೆ. ಸೃಷ್ಟಿಕರ್ತನು ತನ್ನ ಸೃಷ್ಟಿಗಳಿಗೆ ಆಶೀರ್ವಾದ ಪಡೆದುಕೊಳ್ಳುವಂತೆ ಮನವಿ ಮಾಡಿಕೊಳ್ಳುತ್ತಿದ್ದಾನೆ, ಆದ್ದರಿಂದ ಅವರು ಅತ್ಮೀಕ ತಿಳುವಳಿಕೆಯುಳ್ಳವರಾಗಿ, ಆಸಕ್ತಿಯಿಂದ ಅವುಗಳನ್ನು ಬಯಸಬೇಕು (ಯೆಶಾಯ 55:1-3; ಯೆಹೆಜ್ಕೇಲ 18:30-32; 2 ಕೊರಿಂಥ 5:18-21). **24**

**14:24** ಆತನನ್ನು ನಿರಾಕರಿಸುತ್ತಿದ್ದ ಯೆಹೂದ್ಯರಿಗೆ ಇದು ಎಚ್ಚರಿಕೆಯಾಗಿದೆ (ಮತ್ತಾಯ 21:43 ರೊಂದಿಗೆ ಹೋಲಿಸಿ ನೋಡಿರಿ), ಹಾಗೆಯೇ ಯೇಸು ಕ್ರಿಸ್ತನ ಬಳಿಗೆ ಬರಲು ದೇವರು ಕೊಡುವ ಆಹ್ವಾನವನ್ನು ನಿರಾಕರಿಸುವ ಜನರಿಗೂ ಇದು ಅನ್ವಯವಾಗುತ್ತದೆ. **25**

**14:25** ಜನರ ಗುಂಪಿನಲ್ಲಿದ್ದ ಬಹುತೇಕರು ಆತನ ನಿಜವಾದ ಹಿಂಬಾಲಕರಲ್ಲ ಎಂಬದು ಆತನಿಗೆ ಗೊತ್ತಿತ್ತು. ಮತ್ತು ಅನೇಕರು ನಿಸ್ಸಂದೇಹವಾಗಿ 16-23 ವಚನಗಳ ಹಾಗೆ ತಪ್ಪಾಗಿ ವ್ಯಾಖ್ಯಾನಿಸುತ್ತಾರೆ ಮತ್ತು ಶಿಷ್ಯತ್ವದ ಅವಶ್ಯಕತೆಗಳು ಅತ್ಯಂತ ಪ್ರಾಮುಖ್ಯವಲ್ಲ ಎಂದು ನೆನೆಸುತ್ತಾರೆ. ತನ್ನನ್ನು ಹಿಂಬಾಲಿಸುವವರು ಮತ್ತು ತನ್ನಿಂದ ಕಲಿತುಕೊಳ್ಳುವವರಿಗೆ ಆತನು ಪ್ರಾಮುಖ್ಯವಾಗಿರುವ ಮೂರು ಅವಶ್ಯಕತೆಗಳನ್ನು ತಿಳಿಸಿದ್ದಾನೆ. ಅವು ಯಾವುವೆಂದರೆ: ಇತರರ ವಿಷಯದಲ್ಲಿ ಶಿಷ್ಯನ ಮನೋಭಾವನೆ ಸರಿಯಾಗಿರಬೇಕು (ವ 26) ತನ್ನ ವಿಷಯದಲ್ಲಿ ಅವನ ಮನೋಭಾವನೆ ಸರಿಯಾಗಿರಬೇಕು (ವ 26,27) ಮತ್ತು ಇತರೆ ಕಾರ್ಯಗಳ ವಿಷಯದಲ್ಲಿಯೂ ಅವನ ಮನೋಭಾವನೆ ಸರಿಯಾಗಿರಬೇಕು (ವ 33). ಈ ಅವಶ್ಯಕತೆಗಳು ಹೃದಯದ ಆಂತರಿಕ ಮನೋಭಾವನೆಗಳಾಗಿವೆ ಮತ್ತು ದೇವರು ಅಲ್ಲಿ ಮಾಡುವ ಕಾರ್ಯಗಳನ್ನು ಪ್ರಕಟಿಸುತ್ತವೆ. ಸ್ವಭಾವ ಸಿದ್ಧವಾಗಿ ಇವುಗಳು ನಮ್ಮಲ್ಲಿ ಯಾರಲ್ಲಿಯೂ ಇಲ್ಲ, ಆದರೆ ಪವಿತ್ರಾತ್ಮನು ಜನರಲ್ಲಿ ಕಾರ್ಯಮಾಡುತ್ತಾ ಅವರನ್ನು ಯೇಸು ಕ್ರಿಸ್ತನಲ್ಲಿನ ನಿಜವಾದ ನಂಬಿಕೆಗೆ ನಡೆಸುವಾಗ ಇವುಗಳು ಉಂಟಾಗುತ್ತವೆ. ಶಿಷ್ಯತ್ವಕ್ಕೆ ಯೇಸು ಕ್ರಿಸ್ತನು ಎದುರುನೋಡುವ ಅರ್ಹತೆಗಳ ಬೇಡಿಕೆಯು ಮನುಷ್ಯರು ಬಯಸುವ ಬುದ್ಧಿವಂತಿಕೆ, ವಿದ್ಯಾಭ್ಯಾಸ, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ, ರಾಷ್ಟ್ರೀಯತೆ ಅಥವಾ ಇತರೆ ವಿಷಯಗಳಲ್ಲ ಎಂಬದನ್ನು ಗಮನಿಸಿರಿ. **26**

**14:26** ಕರ್ತನಾದ ಯೇಸು ಕ್ರಿಸ್ತನು ತನ್ನ ಶಿಷ್ಯರ ಹೃದಯದಲ್ಲಿ ತನಗೆ ಪ್ರಥಮ ಸ್ಥಾನವಿರಬೇಕೆಂದು ಬಯಸುತ್ತಾನೆ. ಮತ್ತಾಯ 10:37 ನೋಡಿರಿ. ಯೇಸು ಕ್ರಿಸ್ತನು ಮೊದಲು, ಇತರರು ನಂತರ ಮತ್ತು ಕಡೆಯದಾಗಿ ತಾನು (ಅಥವಾ ಇಲ್ಲವೇ ಇಲ್ಲ – ವ 27) ಕ್ರಮ ಹೀಗಿರಬೇಕು. ಆದರೆ ಕ್ರೈಸ್ತರೆಂಬದಾಗಿ ಹೇಳಿಕೊಳ್ಳುವ ಅನೇಕ ವಿಶ್ವಾಸಿಗಳಲ್ಲಿ ಇಂದು ಈ ಕ್ರಮ ಬುಡಮೇಲಾಗಿದೆ – ಮೊದಲು ತಾನು, ನಂತರ ಇತರರು, ಕಡೆಯದಾಗಿ ಕ್ರಿಸ್ತನು (ಅಥವಾ ಇಲ್ಲವೇ ಇಲ್ಲ).

*"ಹಗೆ"*– ಇದನ್ನು ನಾವು ಮತ್ತಾಯ 10:37 ರೊಂದಿಗೆ ಹೋಲಿಸಿ ನೋಡಬೇಕು. ಇಲ್ಲಿ

“ಹಗೆ” ಎಂದರೆ “ಪ್ರೀತಿ ಕಡಿಮೆಯಾಗಿರಬೇಕು” ಅನ್ನಿಸುತ್ತದೆ. ಶಿಷ್ಯರು ನಿಜವಾಗಿ ಯಾರನ್ನೂ ಹಗೆ ಮಾಡಬಾರದು (ಮತ್ತಾಯ 5:43-48; 22:37-38). ಕೆಲವೊಮ್ಮೆ ನಮ್ಮ ಕುಟುಂಬದ ಸದಸ್ಯರ ಮೇಲೆ ನಮಗಿರುವ ಪ್ರೀತಿ ಕ್ರಿಸ್ತನ ಮೇಲಿರುವ ಪ್ರೀತಿಗೆ ಹೋಲಿಸಿದರೆ ಹಗೆಯಾಗಿ ತೋರಬೇಕು. ಆತನ ಮೇಲಿರುವ ಪ್ರೀತಿ ಅವರನ್ನು ಬಿಡುವಂತೆ ಮಾಡುತ್ತದೆ, ಒಂದುವೇಳೆ ಅವಶ್ಯವಿದ್ದರೆ, ಆತನನ್ನು ಹಿಂಬಾಲಿಸುವ ನಿಮಿತ್ತ ಆತನಿಗೆ ಪ್ರಾಣವನ್ನು ಕೊಡುವಂತೆ ಮಾಡುತ್ತದೆ.

*“ತನ್ನ ಪ್ರಾಣವನ್ನು ಹಗೆ ಮಾಡದಿದ್ದರೆ”*– ಶಿಷ್ಯನು ತನಗಾಗಿ ಮಾತ್ರವೇ ಜೀವಿಸುವವನಾಗಿರಬಾರದು. ಕ್ರಿಸ್ತನ ಮೇಲೆ ಅವನಿಗಿರುವ ಪ್ರೀತಿ, ತನ್ನನ್ನು ಹಗೆ ಮಾಡಿಕೊಳ್ಳುವಂತಿರಬೇಕು ಮತ್ತು ತನ್ನಲ್ಲಿರುವ ಎಲ್ಲಾ ಸ್ವಾರ್ಥವನ್ನು ಸಾಯಿಸಲು ಪ್ರೋತ್ಸಾಹಪಡಿಸುವಂತಿರಬೇಕು. ಲೂಕ 9:23 ರೊಂದಿಗೆ ಹೋಲಿಸಿ ನೋಡಿರಿ.

*“ಶಿಷ್ಯ”*– ಮತ್ತಾಯ 10:1 ರ ನೋಟ್ ನೋಡಿರಿ. ನಿಜವಾದ ವಿಶ್ವಾಸಿಯಾಗಿರುವದೆಂದರೆ ಶಿಷ್ಯನಾಗಿರುವದಾಗಿದೆ. ಜನರು ಯೇಸು ಕ್ರಿಸ್ತನಿಂದ ಕಲಿತುಕೊಳ್ಳದೆ ಹೋದರೆ ಆತನ ವಿಶ್ವಾಸಿಗಳಾಗುತ್ತಾರೆ ಎಂದು ನಾವು ಯೋಚಿಸುವದು ಹೇಗೆ (ಶಿಷ್ಯ ಎಂದರೆ ವಿದ್ಯಾರ್ಥಿ, ಸೂಚನೆಗಳನ್ನು ಪಾಲಿಸುವವನು)? ಶಿಷ್ಯರಾಗದೆ ವಿಸ್ವಾಸಿಗಳಾಗಲು ಬಯಸುವವರು ಕರ್ತನಾದ ಯೇಸು ಕ್ರಿಸ್ತನು ಅಥವಾ ಆತನ ಬೋಧನೆಗಳ ಮೇಲೆ ತಮಗೆ ಪ್ರೀತಿಯಿಲ್ಲ ಎಂದು ತೋರಿಸುವವರಾಗಿದ್ದಾರೆ. ಒಂದುವೇಳೆ ಅವರು ಆತನನ್ನು ಅಥವಾ ಆತನ ಬೋಧನೆಯನ್ನು ಪ್ರೀತಿಸದೆ ಹೋದರೆ ತಮ್ಮನ್ನು ವಿಶ್ವಾಸಿಗಳೆಂದು ಕರೆದುಕೊಳ್ಳುವದು ವ್ಯರ್ಥವಲ್ಲವೇ? 1 ಕೊರಿಂಥ 16:22. **27**

**- 14:27** ಮತ್ತಾಯ 10:38; ಲೂಕ 9:23. **28-29**

**14:28-29** ಶಿಷ್ಯತ್ವ ಎಂದರೆ ಜೀವವನ್ನು ಕಟ್ಟುವದಾಗಿದೆ – ದೇವರಿಗಾಗಿ ಆತ್ಮೀಕ ಜೀವಿತವನ್ನು ಕಟ್ಟುವದಾಗಿದೆ (ಮತ್ತಾಯ 7:24). ಬೇಡಿಕೆಗಳನ್ನು ಪೂರೈಸಲು ಆಗದ ವ್ಯಕ್ತಿ ಕಟ್ಟಲು ಮತ್ತು ಮುಗಿಸಲು ಆಗುವದಿಲ್ಲ. ಅನೇಕರ ಪ್ರಾರಂಭ ಉತ್ತಮವಾಗಿರುತ್ತದೆ ಆದರೆ ಅದನ್ನು ಮುಂದುವರೆಸಲು ಆಗುವದಿಲ್ಲ. ಇದಕ್ಕೆ ಕಾರಣ ಪ್ರಾರಂಭದಿಂದಲೇ ಅವರ ಅಂತರ್ಯದ ಆಲೋಚನೆಗಳು ಸರಿಯಿಲ್ಲ. **31-32**

**14:31-32** ಶಿಷ್ಯತ್ವ ಎಂದರೆ ಹೋರಾಟ-ಆತ್ಮೀಕ ಹೋರಾಟ (ಎಫೆ 6:10-18). ಯೇಸು

ಕ್ರಿಸ್ತನ ಅವಶ್ಯಕತೆಗಳನ್ನು ಪೂರೈಸಲು ಆಗದವರು ಗೆಲ್ಲಲು ಆಗುವದಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಯೇಸು ಕ್ರಿಸ್ತನನ್ನು ಪ್ರೀತಿಸುವದೊಂದೇ ಸೈತಾನನನ್ನು ಸೋಲಿಸಲು ನಮ್ಮ ಮುಂದಿರುವ ಮಾರ್ಗವಾಗಿದೆ. ಪ್ರಕ 12:11 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನ ಶಿಷ್ಯರಾಗಲು ಬಯಸುವವರು ಹೋರಾಟವನ್ನು ಮುಗಿಸಲು ಮತ್ತು ಜಯಿಸಲು ಏನು ಬೇಕೋ ಅದನ್ನು ಮುಂಚಿತವಾಗಿಯೇ ತಿಳಿದುಕೊಳ್ಳಬೇಕು (ವ 28,31). **33**

**14:33** ಶಿಷ್ಯರ ಮನೋಭಾವನೆಯು ಕಾರ್ಯಗಳ ವಿಷಯಗಳಲ್ಲಿಯೂ ಸರಿಯಾಗಿರಬೇಕು (6:20-24; 12:15; ಮತ್ತಾಯ 6:19; 1 ತಿಮೊ 6:6-11). ನಾವು ಕ್ರಿಸ್ತನ ನಿಮಿತ್ತ ನಮ್ಮ ಸಂಪನ್ಮೂಲಗಳನ್ನೆಲ್ಲಾ ಬಿಟ್ಟುಕೊಡಲು ಮುಂದಾಗದೆ ಹೋದರೆ ಆತ್ಮೀಕ ಕಟ್ಟಡವನ್ನು ಮುಗಿಸಲು ಅಥವಾ ಯುದ್ಧವನ್ನು ಜಯಿಸಲು ನಮಗೆ ಬೇಕಾಗುವ ಸಂಪನ್ಮೂಲಗಳನ್ನೆಲ್ಲಾ ದೇವರು ಕೊಡುವದಿಲ್ಲ. ಫಿಲಿಪ್ಪಿ 3:7-8 ರೊಂದಿಗೆ ಹೋಲಿಸಿ ನೋಡಿರಿ. ಇದು ದೋಷಾತೀತವಾದ ತತ್ವವಾಗಿದೆ – ಬಿಟ್ಟುಬಿಡುವವರು ಹೊಂದುವರು, ದುರಾಸೆಯಿಂದ ಕೂಡಿಸಿಕೊಳ್ಳುವವರು ಕಳೆದುಕೊಳ್ಳುವರು (9:24; 17:33; ಮತ್ತಾಯ 10:39; ಯೋಹಾನ 12:25 ರೊಂದಿಗೆ ಹೋಲಿಸಿ ನೋಡಿರಿ). ಇಲ್ಲಿ ಇನ್ನೊಂದು ಸಂಗತಿಯನ್ನು ನೋಡಬಹುದು – ನಮಗಿರುವದನ್ನೆಲ್ಲಾ ನಾವು ಕ್ರಿಸ್ತನ ನಿಮಿತ್ತ ಬಿಡಲು ಬಯಸದಿದ್ದರೆ, ಆತನಿಗಿಂತ ಮತ್ತು ಆತನ ಆಶೀರ್ವಾದಗಳಿಗಿಂತ ನಾವು ನಮಗಿರುವವುಗಳಿಗೆ ಬೆಲೆ ಕೊಡುತ್ತೇವೆ ಎಂಬದನ್ನು ಇದು ಸೂಚಿಸುತ್ತದೆ. ಆದ್ದರಿಂದ ನಾವು ಬೆಲೆ ಕೊಡದಿರುವವುಗಳನ್ನು ದೇವರು ನಮಗೆ ಯಾಕೆ ಕೊಡಬೇಕು? ಜ್ಞಾನೋ 4:7; ಮಾರ್ಕ 10:21-22. **34-35**

**14:34-35** ಮತ್ತಾಯ 5:13; ಮಾರ್ಕ 9:50. ಯೇಸು ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಂಡು ಶಿಷ್ಯತ್ವಕ್ಕೆ ಬೇಕಾದ ಅರ್ಹತೆಗಳು ನಮ್ಮಲ್ಲಿ ಇಲ್ಲವೆಂದರೆ ಅರ್ಥ ಉಪ್ಪು ತನ್ನ ರುಚಿಯನ್ನು ಕಳೆದುಕೊಂಡಿದೆ ಎಂಬದಾಗಿದೆ. ಅದು ಯಾವುದಕ್ಕೂ ಉಪಯೋಗವಾಗುವದಿಲ್ಲ, ಅದನ್ನು ಬಿಸಾಡಲಾಗುತ್ತದೆ (ಮತ್ತಾಯ 25:30 ರೊಂದಿಗೆ ಹೋಲಿಸಿ ನೋಡಿರಿ). ಶಿಷ್ಯತ್ವ, ತ್ಯಾಗವಿಲ್ಲದ ಕ್ರೈಸ್ತತ್ವವು ಉಪಯೋಗವಿಲ್ಲದ್ದು ಮಾತ್ರವಲ್ಲ, ಬದಲಾಗಿ ಸೈತಾನನು ನಮ್ಮನ್ನು ಉಪಯೋಗಿಸಿಕೊಳ್ಳಲು ಸೂಕ್ತವಾದ ಸಾಧನವಾಗಿರುತ್ತದೆ. ಇದನ್ನು ಓದುತ್ತಿರುವ ಪ್ರತಿಯೊಬ್ಬ ವ್ಯಕ್ತಿ “ನಾನು ನಿಜವಾಗಿ ಯೇಸು ಕ್ರಿಸ್ತನ ಶಿಷ್ಯನಾಗಿದ್ದೇನೆಯೇ? ಅವಶ್ಯಕತೆಗಳ ಬೆಳಕಿನಲ್ಲಿ, ನಾನು ನಿಜವಾಗಿಯೂ ಆತನ

ಶಿಷ್ಯನಾಗಲು ಬಯಸುತ್ತೇನೆಯೇ" ಎಂದು ಪ್ರಶ್ನಿಸಿಕೊಳ್ಳಬೇಕು? ಈ ಪ್ರಶ್ನೆಗಳಿಗೆ ನಾವು ಕೊಡುವ ಉತ್ತರ ಅತ್ಯಂತ ಪ್ರಾಮುಖ್ಯವಾಗಿರುತ್ತದೆ ಮತ್ತು ನಿತ್ಯವಾದ ಪರಿಣಾಮಗಳನ್ನು ಹೊಂದಿರುತ್ತದೆ.

# 15 1

**15:1** ಮತ್ತಾಯ 5:46 ರಲ್ಲಿ ಸುಂಕದವರ ಕುರಿತಾದ ನೋಟ್ ನೋಡಿರಿ. "ಪಾಪಿಗಳು" ಎಂದರೆ ಫರಿಸಾಯರ ಹಾಗೆ ನೀತಿವಂತರು ಮತ್ತು ಪರಿಶುದ್ಧರೆಂದು ತೋರ್ಪಡಿಸಿಕೊಳ್ಳುವವರಲ್ಲ. **2**

**15:2** ಮತ್ತಾಯ 9:11-13 ನೋಡಿರಿ. ತಾವು ಮಾಡಬೇಕಾದ ಕಾರ್ಯವನ್ನು ಯೇಸು ಕ್ರಿಸ್ತನು ಮಾಡಿದಾಗ ಅವರು ಆರೋಪ ಮಾಡಿದರು – ಯೆಹೆಜ್ಕೇಲ 34:2-4; ಜೆಕರ್ಯ 11:16.

*"ಫರಿಸಾಯರು"*– ಮತ್ತಾಯ 3:7. **3**

**15:3** ಮತ್ತಾಯ 13:1,18-23 ರಲ್ಲಿ ಕೊಡಲಾಗಿರುವ ಸಾಮ್ಯದ ನೋಟ್ ನೋಡಿರಿ. **4-7**

**15:4-7** ಮತ್ತಾಯ 18:12-14 ರ ನೋಟ್ಸ್ ನೋಡಿರಿ. **7**

**15:7** ಮತ್ತಾಯ 3:2 ರಲ್ಲಿ ಪಶ್ಚಾತ್ತಾಪದ ಕುರಿತು ಕೊಡಲಾಗಿರುವ ನೋಟ್ ನೋಡಿರಿ. ಹಾಗೆಯೇ ಮತ್ತಾಯ 9:13 ನೋಡಿರಿ. ಕರ್ತನಾದ ಯೇಸು ಕ್ರಿಸ್ತನು ಕಳೆದುಹೋಗಿರುವ ಕುರಿಯನ್ನು ಹುಡುಕಿಕೊಂಡು ಹೋದದ್ದರ ಬಗ್ಗೆ ಧಾರ್ಮಿಕ ನಾಯಕರು ಆರೋಪಿಸಿದರು (ಪಾಪಿಗಳು – ವ 2). ಅವರ ಗುಣಗುಟ್ಟುವಿಕೆ ಮತ್ತು ಟೀಕೆಗೆ ಗುರಿಯಾದ ವಿಷಯ ಇಡೀ ಪರಲೋಕದಲ್ಲಿ ಸಂತೋಷವನ್ನುಂಟು ಮಾಡಿತು.

*"ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದವರು"*– ಅಂಥವರು ಯಾರಾದರೂ ಇದ್ದಾರೆಯೇ? ಹೌದು, ಪರಲೋಕದಲ್ಲಿರುವವರು ತಿರುಗಿಕೊಳ್ಳುವ ಅವಶ್ಯಕತೆಯಿಲ್ಲ. ಭೂಲೋಕದಲ್ಲಿಯೂ ಅನೇಕರು ತಮ್ಮ ಅಲೆದಾಟಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡಿದ್ದಾರೆ ಮತ್ತು ಕ್ರಿಸ್ತನ ಕಡೆಗೆ ಬಂದಿದ್ದಾರೆ. ಇನ್ನೂ ಕೆಲವರು ಫರಿಸಾಯರ ಹಾಗೆ (18:9), ನಾವು ದೇವರ ಕಡೆಗೆ ತಿರುಗಿಕೊಳ್ಳುವ ಅವಶ್ಯಕತೆಯಿಲ್ಲ ಎಂಬದಾಗಿ

ಯೋಚಿಸುವವರಾಗಿದ್ದಾರೆ, ಆದರೆ ಅಂಥವರೇ ಮೊದಲು ದೇವರ ಕಡೆಗೆ ತಿರುಗಿಕೊಳ್ಳಬೇಕಾಗಿದೆ. **8-10**

**15:8-10** ಕುರಿಮರಿಯು ಮಂದೆಯನ್ನು ಬಿಟ್ಟು ಅರಣ್ಯದಲ್ಲಿ ತಪ್ಪಿಸಿಕೊಂಡಿತ್ತು (ವ 4). ನಾಣ್ಯವು ಸ್ತ್ರೀಯ ಮನೆಯೊಳಗೆ ಕಳೆದುಹೋಗಿತ್ತು. ಅಲೆದಾಡುವ ತನ್ನ ಬುದ್ಧಿಹೀನ ಕಾರ್ಯದ ನಿಮಿತ್ತ ಕುರಿ ತಪ್ಪಿಸಿಕೊಂಡಿತ್ತು. ಸ್ತ್ರೀಯ ಅಜಾಗರೂಕತೆಯಿಂದ ನಾಣ್ಯ ಕಳೆದುಹೋಗಿತ್ತು. ಸ್ತ್ರೀ ಯೇಸು ಕ್ರಿಸ್ತನಿಗೆ ಎಷ್ಟು ಮಾತ್ರವೂ ಸೂಚನೆಯಲ್ಲ (ಯಾಕಂದರೆ ಆತನು ಎಂದಿಗೂ ಅಜಾಗರೂಕನಲ್ಲ) ಆದರೆ ಆಕೆ ಕ್ರಿಸ್ತನ ಸಭೆಯನ್ನು ಸೂಚಿಸುತ್ತಾಳೆ. ಕಳೆದುಹೋದ ಕುರಿಮರಿ ಮತ್ತು ಕಳೆದುಹೋದ ನಾಣ್ಯ ಇಬ್ಬರೂ ನಾಶನದ ಮಾರ್ಗದಲ್ಲಿರುವ ಪಾಪಿಯನ್ನು ಅಥವಾ ಬಹುಶಃ ಹಿಂಜಾರುತ್ತಿರುವ ಕ್ರೈಸ್ತರನ್ನು ಸೂಚಿಸುತ್ತವೆ. ಇವುಗಳು ದೊರೆಯುವಾಗ ಆಗುವ ಫಲಿತಾಂಶ ಒಂದೇ – ಸಂತೋಷ. **11-32**

**15:11-32** ಕುರಿ ತನ್ನ ಬುದ್ಧಿಯಿಲ್ಲದ ಅಲೆದಾಟದಿಂದ ತಪ್ಪಿಸಿಕೊಂಡಿತು ಮತ್ತು ನಾಣ್ಯ ಅಜಾಗರೂಕತೆಯಿಂದ ಕಳೆದುಹೋಗಿತ್ತು. ಮಗನು ಸ್ವೇಚ್ಛೆಯಿಂದಲೇ ತಂದೆಯ ಮನೆಯನ್ನು ಬಿಟ್ಟು ತನ್ನ ಮನ ಬಂದ ಹಾಗೆ ನಡೆದುಕೊಳ್ಳುವ ಆಯ್ಕೆಮಾಡಿಕೊಂಡನು. ಯೆಶಾಯ 53:6 ರೊಂದಿಗೆ ಹೋಲಿಸಿ ನೋಡಿರಿ. **12**

**15:12** ಇಲ್ಲಿ ಮಗನು ನಿತ್ಯತ್ವದ ಆಲೋಚನೆಯಿಲ್ಲದೆ, ಈ ಲೋಕದ ಕಾರ್ಯಗಳನ್ನು ಕೂಡಲೇ ಬಯಸುವ ಮನಸ್ಥಿತಿಯನ್ನು ಪ್ರತಿನಿಧಿಸುತ್ತಾನೆ. **13**

**15:13** ತಾನು ಬಯಸುವ ಕಾರ್ಯಗಳಿಗೆ ತಂದೆ ಅಡ್ಡಿಪಡಿಸಬಾರದು ಎಂಬದಾಗಿ ಇವನು ಬಯಸಿದನು. ದೇವರಿಂದ ಯಾವುದೇ ಅಡಚಣೆಯಾಗದಂತೆ ತಮ್ಮ ಮನಸ್ಸಿಗೆ ಬಂದ ಹಾಗೆ ಜೀವಿಸಲು ಬಯಸುವವರ ಹಾಗೆ ಇವನಿದ್ದಾನೆ. ಆತ್ಮೀಕ ವಿಷಯಗಳಲ್ಲಿ ದೇವರನ್ನು ಕಡೆಗಣಿಸುವವರು ಹೇಗಿರುತ್ತಾರೆ ಎಂಬದನ್ನು ಅವನ ಜೀವನ ಶೈಲಿ ತೋರಿಸುತ್ತವೆ-ಅವರು ತಮ್ಮ ಸಾಮರ್ಥ್ಯ, ಸಮಯ, ಆಲೋಚನೆಗಳು, ತಲಾಂತುಗಳನ್ನು ದೇವರಿಗಾಗಿ ಉಪಯೋಗಿಸುವ ಬದಲು ವ್ಯರ್ಥವಾದ ಕಾರ್ಯಗಳಿಗೆ ಉಪಯೋಗಿಸುತ್ತಾರೆ (ಯೆಶಾಯ 55:1-2; ಪ್ರಸಂಗಿ 2:4-11). **15**

**15:15** ಯೆಹೂದ್ಯರು ಹಂದಿಗಳನ್ನು ಪ್ರಯೋಜನವಿಲ್ಲದವುಗಳು ಮತ್ತು ಅಶುದ್ಧ ಪ್ರಾಣಿಗಳು ಎಂದು ಪರಿಗಣಿಸುತ್ತಿದ್ದರು (ಯಾಜಕ 11:7). ಈ ವ್ಯಕ್ತಿ ಬಹಳ ಕೀಳಾದ ಸ್ಥಿತಿಗೆ ಬಂದನು. ಪಾಪಿಯ ಪರಿಸ್ಥಿತಿಯೂ ಹೀಗೆಯೇ ಇರುತ್ತದೆ – ಅವನು ತನ್ನ

ಪ್ರಯೋಜನವಿಲ್ಲದ, ಅಶುದ್ಧವಾದ ಕಾರ್ಯಗಳಿಂದ ತುಂಬಿಸಿಕೊಳ್ಳುತ್ತಾರೆ (ಯೆಶಾಯ 64:6; ಮತ್ತಾಯ 15:18-20; 23:27; ರೋಮಾ 1:24; 6:19; ಎಫೆ 4:17-19; 1 ಪೇತ್ರ 1:18 ರೊಂದಿಗೆ ಹೋಲಿಸಿ ನೋಡಿರಿ). **16**

**15:16** ಈ ಲೋಕದಲ್ಲಿ ಪಾಪಿಗಳಿಗೆ ಸಿಗುವಂಥದ್ದು ಹಂದಿಗಳ ಆಹಾರ ಮಾತ್ರವೇ ಆಗಿದೆ. ಪೌಲನು ಕಲಿಸಿರುವದನ್ನು ನೋಡಿರಿ – ಫಿಲಿಪ್ಪಿ 3:8. ಮತ್ತು ಒಂದರ್ಥದಲ್ಲಿ ಇದು ಬಹಳ ಪ್ರಾಮುಖ್ಯವಾಗಿದೆ ಯಾಕಂದರೆ ಅವರಿಗೆ ಸಹಾಯ ಮಾಡಲು ಅಥವಾ ಸಹಾಯ ಮಾಡಲು ಶಕ್ತರಾಗಿರುವವರು ಲೋಕದಲ್ಲಿ ಯಾರೂ ಇಲ್ಲ. ಪಾಪದಿಂದ ಆತ್ಮೀಕ ಬಡತನ ಮತ್ತು ಹೀನವಾದ ಪರಿಸ್ಥಿತಿ ಎದುರಾಗುತ್ತದೆ, ದೇವರಲ್ಲದೆ ಬೇರೆ ಯಾರಿಂದಲೂ ಪಾಪಿಗಳಿಗೆ ಸಹಾಯ ಮಾಡಲು ಸಾಧ್ಯವಿಲ್ಲ – ರೋಮಾ 5:6; 7:18. **17**

**15:17** ದೇವರನ್ನು ತ್ಯಜಿಸಿ ತಮ್ಮ ಮನಸ್ಸಿಗೆ ಬಂದ ಹಾಗೆ ಜೀವಿಸುವ ಜನರು ಆತ್ಮೀಕವಾಗಿ ತಿಳುವಳಿಕೆಯಿಲ್ಲದವರಾಗಿದ್ದಾರೆ (ಪ್ರಸಂಗಿ 9:3), ಆದ್ದರಿಂದ ಅವರು ತಿಳುವಳಿಕೆ ಹೊಂದಬೇಕಾಗಿರುವದು ಬಹಳ ಅವಶ್ಯವಾಗಿದೆ. ತನ್ನ ತಂದೆಯ ಮನೆಯನ್ನು ನೆನಪಿಸಿಕೊಂಡಿದ್ದು ಈ ವ್ಯಕ್ತಿ ಕೆಲವು ಒಳ್ಳೆಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಹಕರಿಸಿತು. **18-19**

**15:18-19** ಇದುವೇ ಪಶ್ಚಾತ್ತಾಪದ ಭಾಷೆಯಾಗಿದೆ – ಮತ್ತಾಯ 3:6; 1 ಯೋಹಾನ 1:9. ಯೇಸು ಕ್ರಿಸ್ತನು ಈ ಅಧ್ಯಾಯದ ಪ್ರಾರಂಭದಿಂದಲೂ ಇದನ್ನೇ ಕಲಿಸುತ್ತಾ ಇದ್ದಾನೆ – ವ 1,2,7. **20**

**15:20** ದೇವರು ಎಂಥವನು ಮತ್ತು ತನ್ನ ಬಳಿಗೆ ಬರುವ ಪಾಪಿಗಳೊಂದಿಗೆ ಹೇಗೆ ನಡೆದುಕೊಳ್ಳುತ್ತಾನೆ ಎಂಬದನ್ನು ತಿಳಿದುಕೊಳ್ಳಿರಿ. ಆತನು ಗದರಿಸುವದಿಲ್ಲ, ಆರೋಪ ಮಾಡುವದಿಲ್ಲ, ಶಿಕ್ಷಿಸುವದಿಲ್ಲ ಬದಲಾಗಿ ಪ್ರೀತಿಯಿಂದ ಸ್ವಾಗತಿಸಿಕೊಳ್ಳುತ್ತಾನೆ.

*"ಮುದ್ದಿಟ್ಟನು"*– ಅವನು ಒದೆಯನ್ನಾಗಲಿ ಅಥವಾ ಶಾಪಗಳನ್ನಾಗಲಿ ಕೇಳದೆ ಮುತ್ತು ಪಡೆದುಕೊಂಡನು (ಯೆಶಾಯ 55:7; ಯೋಹಾನ 3:16; 6:37; ಎಫೆ 2:4-5; ತೀತ 3:4-5; ಯಾಕೋಬ 4:8 ರೊಂದಿಗೆ ಹೋಲಿಸಿ ನೋಡಿರಿ). **21**

**15:21** ದೇವರ ವಿಷಯದಲ್ಲಿ ನಾವು ನಡೆದುಕೊಳ್ಳುವ ರೀತಿಯ ಕುರಿತಾದ ಈ ವಿಷಯ

ಸತ್ಯವಾಗಿದೆ. ನಾವೆಲ್ಲರೂ ದೇವರ ಮಕ್ಕಳಾಗಿರಲು ಅಯೋಗ್ಯರು ಎಂಬದನ್ನು ನಿರೂಪಿಸಿದ್ದೇವೆ (ಕೀರ್ತನೆ 51:4-5; ಯೆಶಾಯ 64:6; ರೋಮಾ 3:9-19). ನಾವು ಇದನ್ನು ಅರಿತುಕೊಳ್ಳಬೇಕು ಮತ್ತು ದೀನತೆಯಿಂದ ಅರಿಕೆ ಮಾಡಿಕೊಳ್ಳಬೇಕು. **22**

**15:22** ದೇವರು ತನ್ನ ಕಡೆಗೆ ತಿರುಗಿಕೊಳ್ಳುವ ಪಾಪಿಗೆ ತನ್ನಲ್ಲಿರುವ ಉತ್ತಮವಾದ ವಸ್ತ್ರಗಳನ್ನು ಕೊಡುತ್ತಾನೆ – ಯೆಶಾಯ 6:10; ಜೆಕರ್ಯ 3:4; ರೋಮಾ 3:21-24. ಉಂಗುರ ಅಂಗೀಕಾರ ಮತ್ತು ಉನ್ನತ ಸ್ಥಾನಕ್ಕೆ ಏರಿಸಲ್ಪಡುವಿಕೆಯನ್ನು ಸೂಚಿಸುತ್ತದೆ (ಆದಿ 41:42; ಎಸ್ತೇರ 3:10,12 ನೋಡಿರಿ. ಎಫೆ 1:13-14; 2:4-7 ರೊಂದಿಗೆ ಹೋಲಿಸಿ ನೋಡಿರಿ). ಪಶ್ಚಾತ್ತಾಪಪಡುವ ಪಾಪಿಯು ಅಂಗೀಕರಿಸಲ್ಪಟ್ಟಿದ್ದಾನೆ ಎಂಬದನ್ನು ತಿಳಿಯಲು ದೇವರು ಅವನಿಗೆ ಗುರುತುಗಳನ್ನು ಕೊಡುತ್ತಾನೆ. ಹೊಸ ಪಾದರಕ್ಷೆಗಳು ಎಫೆ 6:15ರಲ್ಲಿ ಹೇಳಲಾಗಿರುವ ಸತ್ಯವನ್ನು ಸೂಚಿಸುತ್ತವೆ. **23**

**15:23** ಯೆಹೂದ್ಯರು ಮಾಂಸಹಾರಿಗಳಾಗಿದ್ದರು ಮತ್ತು ಅವರಿಗೆ ಹಬ್ಬವನ್ನು ಆಚರಿಸಲು ಕರು ಉತ್ತಮವಾದ ಸಂಕೇತವಾಗಿದ್ದರಿಂದ ಅದುವೇ ಅವರಿಗೆ ದೊರೆಯುವಂಥದ್ದಾಗಿತ್ತು. ಸಂತೋಷಪಡುವ ವಿಶೇಷವಾದ ಸಂದರ್ಭವನ್ನು ಅವರಿಗೆ ಅರ್ಥವಾಗುವಂತೆ ವ್ಯಕ್ತಪಡಿಸಲು ಯೇಸು ಕ್ರಿಸ್ತನು ಉತ್ತಮವಾದ ಪದವನ್ನು ಬಳಸಿದನು. ಒಂದುವೇಳೆ ನಾವು ಈಗ ಸಾಮ್ಯವನ್ನು ಹೇಳುತ್ತಿರುವದಾದರೆ, ಬಹುಶಃ ಭಾರತದಲ್ಲಿ ಒಂದೇ ವಿಷಯವನ್ನು ಕಲಿಸಲು ನಾವು ವಿವಿಧ ಪದಗಳನ್ನು ಬಳಸುವವರಾಗಿರುತ್ತೇವೆ. **24**

**15:24** ತಂದೆ ಹೇಳುವದೇನೆಂದರೆ ನನ್ನ ಮಗ "ಸತ್ತವನಾಗಿದ್ದನು." ಆದಿ 2:17; ಎಫೆ 2:1,5; ಕೊಲೊ 2:13; 1 ತಿಮೊ 5:6 ರೊಂದಿಗೆ ಹೋಲಿಸಿ ನೋಡಿರಿ. ಪಾಪದ ನಿಮಿತ್ತ ನಾವು ಆತ್ಮೀಕವಾಗಿ ಮೃತಪಡುವದರಿಂದ ಹೊಸದಾಗಿ ಹುಟ್ಟುವದು ಖಂಡಿತವಾದ ಅನಿವಾರ್ಯತೆಯಾಗಿದೆ (ಯೋಹಾನ 3:3,5,7). ಪಶ್ಚಾತ್ತಾಪಪಡುವ ಪಾಪಿಗಳ ವಿಷಯದಲ್ಲಿ ಪರಲೋಕದಲ್ಲಾಗುವ ಸಂತೋಷ ಮತ್ತು ಸಂಭ್ರಮದ ಬಗ್ಗೆ ಈ ಇಡೀ ಅಧ್ಯಾಯ ಕಲಿಸುತ್ತದೆ – ವ 7,10; ಜೆಫ 3:17 ನೋಡಿರಿ. ಪ್ರತಿಸಲ ಒಬ್ಬ ಪಾಪಿಯು ದೇವರ ಕಡೆಗೆ ತಿರುಗಿಕೊಳ್ಳುವಾಗ ಅದು ಆತನಿಗೆ ವಿಶೇಷವಾದ ಸಂದರ್ಭವಾಗಿರುತ್ತದೆ. **28**

**15:28** ಯೇಸು ಕ್ರಿಸ್ತನು ಪಾಪಿಗಳನ್ನು ದೇವರ ಬಳಿಗೆ ನಡೆಸಿದಾಗ ಆತನ ಮೇಲೆ ಗುಣಗುಟ್ಟಿದ ಇಸ್ರಾಯೇಲಿನ ನಾಯಕರನ್ನು ದೊಡ್ಡ ಮಗನು ಸೂಚಿಸುತ್ತಾನೆ (ವ 2). ಮತ್ತು ಯೇಸು ಕ್ರಿಸ್ತನು ಈ ಅಧ್ಯಾಯದಲ್ಲಿರುವ ಸಾಮ್ಯಗಳನ್ನೆಲ್ಲಾ ಅವರಿಗೆ ಹೇಳಿದನು

(ವ 3,8,11). ಅಂಥ ಜನರು ಭೂಮಿಯಿಂದ ಕಣ್ಮರೆಯಾಗಿಲ್ಲ. 28-30 ವಚನಗಳಲ್ಲಿ ಇಂಥವರ ಕೆಲವು ಪಾಪಗಳನ್ನು ನಾವು ನೋಡುತ್ತೇವೆ – ಕರುಣೆ ತೋರಿಸುವಾಗ ಕೋಪಿಸಿಕೊಳ್ಳುವದು, ಹೆಚ್ಚಳಪಡುವದು, ಇತರರನ್ನು ಆಶೀರ್ವದಿಸುವಾಗ ಹೊಟ್ಟೆಕಿಚ್ಚು ಪಡುವದು, ದ್ವೇಷ (ಅವನು ಕಿರೀಮಗನನ್ನು "ತಮ್ಮ" ಎಂಬದಾಗಿಯೂ ಕರೆಯಲಿಲ್ಲ – ವ 30) ಮತ್ತು ಔತಣದಲ್ಲಿ ಭಾಗಿಯಾಗಲು ಅವನು ನಿರಾಕರಿಸಿದನು. 14:18; ಮತ್ತಾಯ 23:13 ರೊಂದಿಗೆ ಹೋಲಿಸಿ ನೋಡಿರಿ. ದೇವರ ದೃಷ್ಟಿಯಲ್ಲಿ ಈ ಪಾಪಗಳು ಕಿರೀಮಗನ ಪಾಪದಂತೆಯೇ ಕೆಟ್ಟದ್ದಾಗಿವೆ (ಅಥವಾ ಅದಕ್ಕಿಂತಲೂ ಘೋರವಾದದ್ದಾಗಿವೆ). **31**

**15:31** ಇಸ್ರಾಯೇಲ್ ದೇವರ ವಿಶೇಷವಾದ ಜನಾಂಗವಾಗಿತ್ತು (ಧರ್ಮೋ 7:6). ದೇವರ ರಾಜ್ಯವು ಯೆಹೂದ್ಯರಿಗೆ ಕೈಗಳಲ್ಲಿಯೇ ಇತ್ತು – ಮತ್ತಾಯ 21:43. ಹಾಗೆಯೇ ರೋಮಾ 3:1-2; 9:3,5 ನೋಡಿರಿ. ಹಿರೀಮಗನು ಯೇಸು ಕ್ರಿಸ್ತನ ಕಾಲದಲ್ಲಿ ಜೀವಿಸುತ್ತಿದ್ದ ಅವರ ನಾಯಕರನ್ನು ಪ್ರತಿನಿಧಿಸುತ್ತಾನೆ. 1 ಕೊರಿಂಥ 3:21-23 ರಲ್ಲಿ ಈಗಿನ ವಿಶ್ವಾಸಿಗಳ ಬಗ್ಗೆ ಏನು ಹೇಳಲಾಗಿದೆ ಎಂಬದನ್ನು ನೋಡಿರಿ. ದೇವರ ಬಳಿ ಇರುವದೆಲ್ಲವೂ ಅವರದ್ದಾಗಿದೆ. **32**

**15:32** ವಚನ 24.

# 16₁

**16:1** ಕೆಟ್ಟ ನಿರ್ವಹಣೆಯ ನಿಮಿತ್ತ ಐಶ್ವರ್ಯವಂತನಿಗೆ ನಷ್ಟವಾಗಿದೆ ಎಂಬದು ಆರೋಪವಾಗಿದೆ.

*"ಹಾಳುಮಾಡುತ್ತಾನೆ"*– ಗ್ರೀಕ್ ಭಾಷೆಯಲ್ಲಿ ಇದೇ ಪದವನ್ನು 15:13,30 ರಲ್ಲಿ ಬರೆಯಲ್ಪಟ್ಟಿರುವ ತಪ್ಪಿ ಹೋದ ಮಗನ ವಿಷಯದಲ್ಲಿ ಬರೆಯಲಾಗಿದೆ. **4**

**16:4** ಇವನು ತನ್ನ ಉದ್ಯೋಗವನ್ನು ಕಳೆದುಕೊಂಡ ನಂತರ ಭವಿಷ್ಯದಲ್ಲಿ ತನಗೆ ಸಹಾಯ ಮಾಡುವ ಸಲುವಾಗಿ ಸ್ನೇಹಿತರನ್ನು ಮಾಡಿಕೊಂಡನು. **8**

**16:8** ಯಜಮಾನನು ಮನೆವಾರ್ತೆಯವನ ಅಪ್ರಾಮಾಣಿಕತೆಯನ್ನು ಹೊಗಳುತ್ತಿಲ್ಲ – ಅವನು ಅದನ್ನು ಹಗೆಮಾಡುವವನಾಗಿದ್ದನು. ಮನೆವಾರ್ತೆಯವನು ಭವಿಷ್ಯಕ್ಕಾಗಿ ಮಾಡಿರುವ ಏರ್ಪಾಡುಗಳನ್ನು ನೋಡಿ ಆತನು ಯಾವುದೇ ಸಹಾಯ ಮಾಡಲಿಲ್ಲ. ಕರ್ತನಾದ

ಯೇಸು ಕ್ರಿಸ್ತನು ಇದರ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾನೆ.

*"ಲೌಕಿಕರು"*– ಈ ಲೋಕದ ಜನರು – ಅವಿಧೇಯತೆಗೆ ಒಳಗಾಗಿರುವ ಲೋಕಕ್ಕೆ ಬಂಧಿಯಾಗಿರುವವರು, ದೇವರ ಬಗ್ಗೆ ತಿಳುವಳಿಕೆಯಿಲ್ಲದವರು. "ಬೆಳಕಿನ ರಾಜ್ಯದವರು" – ಅಂದರೆ ಲೋಕಕ್ಕೆ ಬೆಳಗಾಗಿರುವ ಯೇಸು ಕ್ರಿಸ್ತನಿಗೆ ಸೇರಿದವರು – ಮತ್ತಾಯ 5:14; ಯೋಹಾನ 12:36; ಎಫೆ 5:8; 1 ಥೆಸ 5:5. ದೇವಜನರು ಪರಲೋಕದ ವಿಷಯದಲ್ಲಿ ಜಾಣರಾಗಿ ನಡೆದುಕೊಳ್ಳುವದಕ್ಕಿಂತ ಹೆಚ್ಚಾಗಿ ಲೌಕಿಕ ಜನರು ಲೋಕದ ವಿಷಯಗಳಲ್ಲಿ ಹೆಚ್ಚು ಜಾಣರಾಗಿ ನಡೆದುಕೊಳ್ಳುತ್ತಾರೆ. ಅವರು ಭೂಲೋಕದಲ್ಲಿ ತಮ್ಮ ಭವಿಷ್ಯದ ಬಗ್ಗೆ ಯೋಚಿಸುತ್ತಾರೆ ಮತ್ತು ಬಹುತೇಕ ಜನರು ಈ ಸಾಮ್ಯದಲ್ಲಿ ಬರುವ ಮನೆವಾರ್ತೆಯವನ ಹಾಗೆ, ಸ್ನೇಹಿತರನ್ನು ಮಾಡಿಕೊಳ್ಳಲು ಹಣವನ್ನು ಉಪಯೋಗಿಸುತ್ತಾರೆ. 9

**16:9** ಈ ಸಾಮ್ಯದಿಂದ ನಾವು ಕಲಿತುಕೊಳ್ಳಬೇಕೆಂದು ಆತನು ಬಯಸುವ ಪಾಠವೇನೆಂಬದನ್ನು ಯೇಸು ಕ್ರಿಸ್ತನು ಹೇಳಿದ್ದಾನೆ. ಬೆಳಕಿನ ರಾಜ್ಯದವರು ಈ ಲೋಕದ ಯಾವುದೇ ಸಂಪನ್ಮೂಲಗಳು ತಮ್ಮ ಬಳಿ ಇದ್ದರೂ ಅವುಗಳನ್ನು ಜನರಿಗೆ ಸಹಾಯವಾಗುವ ಹಾಗೆ ಜಾಣತನದಿಂದ ಆತ್ಮೀಕ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ನಂತರ ಅಂಥ ಜನರು ಅವರನ್ನು ಪರಲೋಕದಲ್ಲಿ ಸ್ವಾಗತಿಸುತ್ತಾರೆ. ಇದರ ಅರ್ಥ ಜನರಿಗೆ ಆರ್ಥಿಕ ಸಹಾಯ ಮಾಡುವ ಮೂಲಕ ರಕ್ಷಣೆ ಮತ್ತು ಪರಲೋಕದಲ್ಲಿ ಸ್ಥಾನ ಸಂಪಾದಿಸಿಕೊಳ್ಳಬಹುದು ಎಂಬದಲ್ಲ (ಎಫೆ 2:8-9; ತೀತ 3:5-6 ನೋಡಿರಿ). ಹಾಗೆಯೇ ನಾವು ಪರಲೋಕದಲ್ಲಿ ಗಂಟು ಮಾಡಿಟ್ಟುಕೊಳ್ಳಬಹುದು ಮತ್ತು ಭೂಲೋಕದಲ್ಲಿ ಯಾರಿಗೆ ಸಹಾಯ ಮಾಡಿರುತ್ತೇವೆಯೋ ಅವರನ್ನು ಅಲ್ಲಿ ಸಂಧಿಸಬಹುದು ಎಂಬದಾಗಿಯೂ ಅಲ್ಲ (ಮತ್ತಾಯ 6:19-21; 25:34-40; ಕೀರ್ತನೆ 112:5-6,9; ಇಬ್ರಿ 6:10 ರೊಂದಿಗೆ ಹೋಲಿಸಿ ನೋಡಿರಿ).

*"ಅನ್ಯಾಯದ ಧನದ ಮೂಲಕ"*– ಗ್ರೀಕ್ ಭಾಷೆಯಲ್ಲಿಯೂ "ಅನ್ಯಾಯದ ಧನ" ಎಂಬದಾಗಿ ಬರೆಯಲ್ಪಟ್ಟಿದೆ. ಈ ಪದದ ಅರ್ಥ ಅನ್ಯಾಯ ಅಥವಾ ವಂಚನೆಯ ಮೂಲಕ ಸಂಪಾದಿಸಿರುವ ಹಣ ಎಂಬದಲ್ಲ. ಇದರ ಅರ್ಥ ಅನ್ಯಾಯದಿಂದ ತುಂಬಿರುವ ಲೋಕದಲ್ಲಿ ಸಂಪಾದಿಸಿರುವ ಹಣ ಎಂಬದಾಗಿದೆ. ಅನ್ಯಾಯದಿಂದ ತುಂಬಿರುವ ಈ ಲೋಕದೊಂದಿಗೆ ಸೇರಿರುವ ವಿಷಯಗಳೆಲ್ಲವೂ ಕೆಲವು ಹಂತದ ಮಟ್ಟಿಗೆ ಲೌಕಿಕ ಅನ್ಯಾಯಕ್ಕೆ ಒಳಪಟ್ಟಿದೆ. 10

**16:10** ಮೇಲಿನ ಸಾಮ್ಯದಲ್ಲಿ ಆತನು ಅಪ್ರಾಮಾಣಿಕತೆಯನ್ನು ಶ್ಲಾಘಿಸುತ್ತಿದ್ದಾನೆ

ಎಂಬದಾಗಿ ಯಾರಾದರೂ ಯೋಚಿಸುವದಾದರೆ, ಆತನು ಅತ್ಯಂತ ಪ್ರಾಮುಖ್ಯವಾಗಿರುವ ತತ್ವವನ್ನು ಇದರಲ್ಲಿ ವ್ಯಕ್ತಪಡಿಸಿದ್ದಾನೆ ಎಂಬದನ್ನು ಮರೆಯಬಾರದು. ಒಬ್ಬ ವ್ಯಕ್ತಿಯ ಸ್ವಭಾವವನ್ನು ನಾವು ಸಣ್ಣ ವಿಷಯಗಳಲ್ಲಿ ಹಾಗೆಯೇ ದೊಡ್ಡ ವಿಷಯಗಳಲ್ಲಿಯೂ ನೋಡಬಹುದಾಗಿದೆ. ಕರ್ತನು ಇದನ್ನು 19:11-26; ಮತ್ತಾಯ 25:21-23 ರಲ್ಲಿ ಯಾವ ರೀತಿ ಅಳವಡಿಸಿದ್ದಾನೆ ಎಂಬದನ್ನು ನೋಡಿರಿ. ಹಣವನ್ನು ಯಾವ ರೀತಿ ಉಪಯೋಗ ಮಾಡುತ್ತೇವೆ ಎಂಬ ವಿಷಯದಲ್ಲಿ ನಾವೆಲ್ಲರೂ ಪರೀಕ್ಷಿಸಲ್ಪಡುತ್ತೇವೆ ಹಾಗೂ ಅದರಿಂದ ಅನೇಕ ಕಾರ್ಯಗಳು ಪ್ರಕಟಗೊಳ್ಳುತ್ತವೆ. ಕೆಲವು ಕ್ರೈಸ್ತರಂತೂ ಒಂದುವೇಳೆ ನಾವು ಸರಿಯಾದ ಸಿದ್ಧಾಂತಗಳಲ್ಲಿ ನಂಬಿಕೆಯನ್ನಿಟ್ಟರೆ ಮೋಸ ಮಾಡಬಹುದು, ಸುಳ್ಳು ಹೇಳಬಹುದು ಹಾಗೂ ಇತರರನ್ನು ವಂಚಿಸಬಹುದು ಎಂದು ಯೋಚಿಸುತ್ತಾರೆ. ಇದು ಸಂಪೂರ್ಣವಾಗಿ ತಪ್ಪು ಹಾಗೂ ಅಪಾಯಕಾರಿ ಆಲೋಚನೆಯಾಗಿದೆ. ಒಂದುವೇಳೆ ಅಪ್ರಾಮಾಣಿಕತೆ ಒಬ್ಬ ವ್ಯಕ್ತಿಯ ಜೀವಿತದಲ್ಲಿ ಆಳ್ವಿಕೆ ಮಾಡುತ್ತಿರುವದಾದರೆ, ಸತ್ಯವಾಗಿರುವ (ಯೋಹಾನ 14:6) ಕರ್ತನಾದ ಯೇಸು ಕ್ರಿಸ್ತನನ್ನು ಅವನು ಬಲ್ಲವನಾಗಿದ್ದಾನೆ ಹಾಗೂ ಪ್ರೀತಿಸುವವನಾಗಿದ್ದಾನೆ ಎಂದು ಹೇಳಲು ಸಾಧ್ಯವೇ? ಯೇಸು ಕ್ರಿಸ್ತನನ್ನು ಪ್ರೀತಿಸುವದೆಂದರೆ ಸತ್ಯವನ್ನೂ ಪ್ರೀತಿಸುವದಾಗಿದೆ. ಕರ್ತನು ನಮಗೆ ಏನನ್ನೇ ಒಪ್ಪಿಸಿದರೂ ಅದರ ವಿಷಯದಲ್ಲಿ ಸಂಪೂರ್ಣವಾದ ಪ್ರಾಮಾಣಿಕತೆ ಮತ್ತು ನಂಬಿಗಸ್ತಿಕೆಯನ್ನು ಎದುರುನೋಡುವವನಾಗಿದ್ದಾನೆ (1 ಕೊರಿಂಥ 4:1-2). ದೇವರ ರಾಜ್ಯದಲ್ಲಿ ವಿಶ್ವಾಸಿಗಳ ಭವಿಷ್ಯದ ಸ್ಥಾನವು ಈ ವಿಷಯದ ಮೇಲೆಯೇ ಆಧಾರವಾಗಿರುತ್ತದೆ. ಈಗ ಹಣದ ವಿಷಯದಲ್ಲಿ ಅಪ್ರಾಮಾಣಿಕರು ಮತ್ತು ಅಪನಂಬಿಗಸ್ತರು ಆಗಿರುವವರಿಗೆ ಭವಿಷ್ಯದಲ್ಲಿ ಅತ್ಯಂತ ಅಪಾಯಕಾರಿ ಪರಿಸ್ಥಿತಿಗಳು ಎದುರಾಗುತ್ತವೆ. 11

**16:11** ನಿಜವಾದ ಧನವು ಆತ್ಮೀಕ ಧನವಾಗಿದ್ದು, ದೇವರ ರಾಜ್ಯದ ನಿತ್ಯವಾದ ಧನವಾಗಿದೆ. ಅದನ್ನು ನಮಗೆ ಕೊಡುವವನು ಅಥವಾ ಕೊಡದಿರುವವನು ದೇವರು ಮಾತ್ರವೇ ಆಗಿದ್ದಾನೆ. 12

**16:12** *"ಮತ್ತೊಬ್ಬನ ಸೊತ್ತು"*– ಅಂದರೆ ನಮಗೆ ಒಪ್ಪಿಸಲಾಗಿರುವ ಲೌಕಿಕ ಕಾರ್ಯಗಳು. *"ನಿಮ್ಮದು"*– ಎಂದರೆ ಪರಲೋಕ ಸಂಬಂಧದ ಕಾರ್ಯಗಳು, ನಾವು ಕ್ರಿಸ್ತನಲ್ಲಿದ್ದರೆ ನಮ್ಮದಾಗುತ್ತವೆ (1 ಕೊರಿಂಥ 3:21-23; ಕೊಲೊ 1:12; 3:23-25). 13

**16:13** ಮತ್ತಾಯ 6:24 ರ ನೋಟ್ ನೋಡಿರಿ. ಲೂಕನ ಸುವಾರ್ತೆಯಲ್ಲಿ ಮುಖ್ಯ ವಿಷಯವೇನೆಂದರೆ ಲೌಕಿಕ ವಸ್ತುಗಳನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಳ್ಳುವದು

ಮತ್ತು ನಂಬಿಗಸ್ತಿಕೆಯಾಗಿದೆ. ನಂಬಿಗಸ್ತರು ಮತ್ತು ಬುದ್ಧಿವಂತರಾಗಲು ಒಂದೇ ಒಂದು ಮಾರ್ಗವಿದೆ, ಅದು ಯಾವುದೆಂದರೆ ಒಬ್ಬನು ದೇವರನ್ನು ತನ್ನ ಜೀವಿತದ ಯಜಮಾನನನ್ನಾಗಿ ಮಾಡಿಕೊಳ್ಳುವದು ಮತ್ತು ಹಣದ ಯಜಮಾನಿಕೆಯನ್ನು ತಿರಸ್ಕರಿಸುವದಾಗಿದೆ. 14

**16:14** ಈ ಫರಿಸಾಯರು, ಇಂದಿನ ಅನೇಕರ ಹಾಗೆ, ದೇವಕುಮಾರನಿಂದ ಕಲಿತುಕೊಳ್ಳುವ ಬದಲು, ಆತನನ್ನು ಹಾಸ್ಯಮಾಡುವವರಾಗಿದ್ದಾರೆ. ಹಣ ಅವರ ಯಜಮಾನನಾಗಿತ್ತು ಮತ್ತು ಅದು ಒಳ್ಳೇದೆಂದು ಯೋಚಿಸುವ ಮೂಲಕ ಅವರು ವಂಚನೆಗೆ ಒಳಗಾಗಿದ್ದರು. ಹಣ ಒಳ್ಳೆಯ ಸೇವಕನಾಗಿದೆ ಆದರೆ ಕೆಟ್ಟ ಯಜಮಾನನಾಗಿದೆ. ಅದರ ಮೇಲಿನ ಪ್ರೀತಿ ನಮ್ಮನ್ನು ನಾಶನಕ್ಕೆ ನಡೆಸುತ್ತದೆ ಹಾಗೂ ಹಾಳು ಮಾಡುತ್ತದೆ – 1 ತಿಮೊ 6:6-10. 15

**16:15** 10:29; 18:9; ಮತ್ತಾಯ 6:1-2,5,16 ನೋಡಿರಿ. ನಾವು ಏನು ಬೇಕಾದರೂ ಮಾಡಬಹುದು ಮತ್ತು ನಮಗೆ ಬೇಕಾದ್ದನ್ನು ಆಲೋಚಿಸಬಹುದು ಹಾಗೂ ಇವುಗಳು ಯಾವುವು ದೇವರಿಗೆ ಗೊತ್ತಾಗುವದಿಲ್ಲ ಎಂಬದಾಗಿ ಮಾನವರು ಯೋಚಿಸುವದು ಆಶ್ಚರ್ಯಕರವಾದ ಸಂಗತಿಯಾಗಿದೆ (ಕೀರ್ತನೆ 10:11; 64:5; 73:11; 94:7-11). ಈ ವಾಕ್ಯದ ಕಡೆಯ ಮಾತುಗಳನ್ನು ಗಮನಿಸುವದಾದರೆ, ಲೋಕದಲ್ಲಿ ಪಾಪಿಗಳು ಇರುವ ತನಕ ಸತ್ಯವಾಗಿರುವ ಮತ್ತೊಂದು ತತ್ವವನ್ನು ನಾವು ತಿಳಿದುಕೊಳ್ಳಬಹುದಾಗಿದೆ. ಇಲ್ಲಿ ಮುಖ್ಯ ವಿಷಯ ಹಣದಾಸೆಯಾಗಿದೆ – ದೇವರು ಈ ಮನಸ್ಥಿತಿಯನ್ನು ದ್ವೇಷಿಸುತ್ತಾನೆ – ಈ ತತ್ವವು ಮಾನವರು ಹುದುವಾಗಿ ಹೆಚ್ಚಿನ ಆದ್ಯತೆ ಕೊಡುವ ಅನೇಕ ಕಾರ್ಯಗಳಿಗೆ ಅನ್ವಯಿಸುತ್ತದೆ. 16

- **16:16** ಮತ್ತಾಯ 11:12-13. 17

**16:17** ಮತ್ತಾಯ 5:17-18 ರೊಂದಿಗೆ ಹೋಲಿಸಿ ನೋಡಿರಿ. 18

**16:18** ಮತ್ತಾಯ 5:31-32. ದೇವರ ಧರ್ಮಶಾಸ್ತ್ರದ ಮುಂದುವರೆಯುತ್ತಿರುವ ಕಾರ್ಯಗಳ ಕುರಿತು ಯೇಸು ಕ್ರಿಸ್ತನು ಉದಾಹರಣೆಯನ್ನು ಕೊಟ್ಟಿದ್ದಾನೆ. ಬಹುತೇಕ ಫರಿಸಾಯರು ತಮ್ಮ ಹೆಂಡತಿಯರನ್ನು ಬಿಟ್ಟು ಅನೇಕರನ್ನು ಮದುವೆ ಮಾಡಿಕೊಂಡಿದ್ದರು ಎಂಬ ಸಾಧ್ಯತೆ ಬಹಳಷ್ಟಿದೆ. ಈ ಕಾರಣದಿಂದಲೇ ಯೇಸು ಕ್ರಿಸ್ತನು ಇವುಗಳನ್ನು ಹೇಳಿದ್ದಾನೆ ಎಂಬದಾಗಿ ಅನ್ನಿಸುತ್ತದೆ. 19

**16:19** ಮುಂದಿನ ವಾಕ್ಯಗಳಲ್ಲಿ ಕರ್ತನಾದ ಯೇಸು ಕ್ರಿಸ್ತನು ಈಗಾಗಲೇ ಕಲಿಸಿರುವ

ವಿಷಯಕ್ಕೆ ಆದ್ಯತೆಯನ್ನು ಕೊಡಲು ಪ್ರಬಲವಾದ ಉದಾಹರಣೆಯನ್ನು ಕೊಟ್ಟಿದ್ದಾನೆ. ಯೇಸು ಕ್ರಿಸ್ತನ ಬೋಧನೆಯು ಐಶ್ವರ್ಯವಂತರು ಮತ್ತು ಬಡವರ ಕುರಿತು ಹೇಳಿರುವದನ್ನು ನಾವು ನೋಡಬಹುದು. "ಐಶ್ವರ್ಯವಂತನಾದ ಒಬ್ಬ ಮನುಷ್ಯನು" ದೇವರು ತನಗೆ ಕೊಟ್ಟಿರುವವುಗಳ ವಿಷಯದಲ್ಲಿ ನಂಬಿಗಸ್ತನಾಗಿರದ (ವ 13), ಹಣವನ್ನು ಪ್ರೀತಿಸಿದ (ವ 14) ಮತ್ತು ದೇವರ ದೃಷ್ಟಿಗೆ ಅಸಹ್ಯವಾಗಿರುವದನ್ನು ಹೆಚ್ಚಾಗಿ ಬಯಸಿದ (ವ 15) ವ್ಯಕ್ತಿಯನ್ನು ಪ್ರತಿನಿಧಿಸುತ್ತಾನೆ. ದೇವರು ತನಗೆ ಒಪ್ಪಿಸಿದ ಧನವನ್ನು "ಅನುದಿನ" ತನಗಾಗಿ ಉಪಯೋಗ ಮಾಡುವ ಅಪರಾಧಕ್ಕೆ ಒಳಗಾಗಿದ್ದನು. ಅಂದರೆ ಅವನು ಅದನ್ನು ದುರುಪಯೋಗಪಡಿಸುತ್ತಿದ್ದನು. ಬಡವರಿಗೆ ಸಹಾಯ ಮಾಡುವ ಬಯಕೆ ಅವನಿಗಿರಲಿಲ್ಲ (ವ 21). **20**

**16:20** ಲಾಜರನು ಅತ್ಯಂತ ಹೀನ ಸ್ಥಿತಿಯಲ್ಲಿದ್ದನು ಆದರೆ ಐಶ್ವರ್ಯವಂತನು ಅವನಿಗೆ ಸಹಾಯ ಮಾಡಲು ತನ್ನ ಕಿರುಬೆರಳನ್ನು ಸಹ ಉಪಯೋಗಿಸಲಿಲ್ಲ. ಈ ರೀತಿಯಾಗಿ ಅವನು ತನ್ನ ಸ್ವಾರ್ಥ ಹಾಗೂ ಕಠಿಣ ಹೃದಯವನ್ನು ತೋರಿಸಿದನು ಮತ್ತು ಬಡವರಿಗೆ ಸಹಾಯ ಮಾಡಬೇಕೆಂದು ಹೇಳುವ ದೇವರ ವಾಕ್ಯವನ್ನು (ಯಾಜಕ 19:10; ಧರ್ಮೋ 15:7-8; ಕೀರ್ತನೆ 41:1; 82:3; 112:9; ಜ್ಞಾನೋ 19:17; ಮಾರ್ಕ 10:21) ಕಡೆಗಣಿಸಿದನು. **21**

**16:21** ಇವನು ಯೋಹಾನ 11:1-44 ರಲ್ಲಿ ಬರೆಯಲ್ಪಟ್ಟಿರುವ ಲಾಜರನಲ್ಲ. **22**

**16:22** *"ದೇವದೂತರು"*– ಆದಿ 16:7.

*"ಅಬ್ರಹಾಮನು"*– ಆದಿಕಾಂಡ 12-25 ಅಧ್ಯಾಯಗಳು. ದೇವರಲ್ಲಿ ಭರವಸೆಯನ್ನಿಡುವವರೆಲ್ಲರಿಗೆ ಅಬ್ರಹಾಮನನ್ನು ತಂದೆ ಎಂದು ಕರೆಯಲಾಗಿದೆ – ರೋಮಾ 4:11-12. "ಅಬ್ರಹಾಮನ ಎದೆಗೆ ಒರಗಿಕೊಂಡಿದ್ದನು" ಎಂಬದು ಭಿಕ್ಷುಗಾರನು ಅಬ್ರಹಾಮನ ಹಾಗೆ ವಿಶ್ವಾಸಿಯಾಗಿದ್ದನು ಎಂಬದನ್ನು ಸೂಚಿಸುತ್ತದೆ. ದೇವಜನರು ಮರಣದ ನಂತರ ಎಲ್ಲಿಗೆ ಹೋಗುತ್ತಾರೆ ಎಂಬದನ್ನು ಈ ಮಾತುಗಳು ಸೂಚಿಸುತ್ತವೆ. ಅದನ್ನು 23:43 ರಲ್ಲಿ "ಪರದೈಸು" ಎಂಬದಾಗಿ ಕರೆಯಲಾಗಿದೆ. ಬಡವರೆಲ್ಲರೂ ಆಶೀರ್ವಾದದ ಸ್ಥಳಕ್ಕೆ ಹೋಗುವದಿಲ್ಲ – ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವವರು, ಅಬ್ರಹಾಮನ ಹಾಗೆ ನಂಬಿಕೆಯುಳ್ಳವರು ಮಾತ್ರವೇ ಹೋಗುತ್ತಾರೆ (ರೋಮಾ 4:16; 5:1). **23**

**16:23** *“ಪಾತಾಳ”*– ಗ್ರೀಕ್ ಭಾಷೆಯಲ್ಲಿಯೂ ಪಾತಾಳ ಎಂಬದಾಗಿ ಬರೆಯಲ್ಪಟ್ಟಿದೆ. ಗ್ರೀಕ್ ಹೊಸ ಒಡಂಬಡಿಕೆಯಲ್ಲಿ “ಪಾತಾಳ” ಎಂಬದಾಗಿ 11 ಸಲ ಬರೆಯಲ್ಪಟ್ಟಿದೆ (ಮತ್ತಾಯ 11:23; 16:18; ಲೂಕ 10:15; 16:23; ಅಪೊ 2:27,31; 1 ಕೊರಿಂಥ 15:55; ಪ್ರಕ 1:18; 6:8; 20:13-14). ಇಬ್ರಿಯ ಪದ ಸಹ “ಪಾತಾಳ” ಎಂಬದಾಗಿಯೇ ಇದೆ – ಆದಿ 37:35 ರ ನೋಟ್ಸ್ ನೋಡಿರಿ. ಆದರೆ ಯಾರೆಲ್ಲಾ ಪಾಪದಲ್ಲಿಯೇ ಸಾಯುತ್ತಾರೆ ಅವರಿಗೆ ಅದು ಯಾತನೆಯ ಸ್ಥಳವಾಗಿರುತ್ತದೆ (ವ 25). ಐಶ್ವರ್ಯವಂತರೆಲ್ಲರೂ ಅಲ್ಲಿಗೆ ಹೋಗುವದಿಲ್ಲ. ಅಬ್ರಹಾಮನು ಸಹ ಐಶ್ವರ್ಯವಂತನಾಗಿದ್ದನು (ಆದಿ 13:2). ಆದರೆ ಐಶ್ವರ್ಯವಂತರು ರಕ್ಷಣೆ ಹೊಂದುವದು ಬಹಳ ಕಷ್ಟವಾಗಿದೆ – 18:24-25. ಈ ಐಶ್ವರ್ಯವಂತನು ಯಾತನೆಯ ಸ್ಥಳಕ್ಕೆ ಹೋದನು ಯಾಕಂದರೆ ಅವನು ಅವಿಶ್ವಾಸಿಯಾಗಿದ್ದು ತನ್ನ ಜೀವನ ಶೈಲಿಯ ಮೂಲಕ ತನ್ನಲ್ಲಿರುವ ಅವಿಶ್ವಾಸವನ್ನು ತೋರಿಸಿದನು (ವ 19,21). ಇವನು 12:16-21 ರಲ್ಲಿರುವ ಮನುಷ್ಯನು ಮತ್ತು ಯಾಕೋಬ 5:1-5 ರಲ್ಲಿರುವ ಜನರ ಹಾಗಿದ್ದಾನೆ. ಆತನು ಮತ್ತಾಯ 25:41-46 ಮತ್ತು 1 ತಿಮೊ 6:9-10 ನಿದರ್ಶನವಾಗಿ ತಿಳಿಸಿದ್ದಾನೆ. ಈ ಐಶ್ವರ್ಯವಂತನು ಅಬ್ರಹಾಮನಿರುವ ಸ್ಥಳಕ್ಕಿಂತ “ಬಹಳ ದೂರದಲ್ಲಿದ್ದನು” –ಎಂಬದನ್ನು ಗಮನಿಸಿರಿ. ಪರದೈಸು ಮತ್ತು ಪಾತಾಳದ ನಡುವೆ ದೊಡ್ಡ ಡೊಂಗರ ಸ್ಥಾಪನೆಯಾಗಿದ್ದು ಅವೆರೆಡನ್ನು ಬೇರೆ ಮಾಡುತ್ತಿತ್ತು, ಆದರೆ ಒಂದು ಸ್ಥಳದಲ್ಲಿರುವವರು ಇನ್ನೊಂದು ಸ್ಥಳದಲ್ಲಿರುವವರನ್ನು ನೋಡಲು ಮತ್ತು ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಆಗುತ್ತಿತ್ತು. **24**

**16:24** ದಯೆಯನ್ನೇ ತೋರಿಸದವನು ಈಗ ದಯೆ ಬೇಡಿಕೊಳ್ಳುತ್ತಿದ್ದಾನೆ. ಆದರೆ ಅವನಿಗೆ ಕರುಣೆಯೇ ದೊರೆಯಲಿಲ್ಲ (ಮತ್ತಾಯ 5:7; 7:2; ಕೀರ್ತನೆ 18:25-26; ಗಲಾ 6:7). ಮರಣದ ನಂತರವೂ ಐಶ್ವರ್ಯವಂತನು (ಲಾಜರನು ಹಾಗೂ ಅಬ್ರಹಾಮನು ಸಹ) ಪ್ರಜ್ಞೆಯುಳ್ಳವರಾಗಿದ್ದರು. ಮರಣದ ಸಮಯದಲ್ಲಿ ದೇಹ ಮಲಗುತ್ತದೆಯೇ ಹೊರತು ಆತ್ಮ ಮಲಗುವದಿಲ್ಲ.

*“ಉರಿ”*– ಮತ್ತಾಯ 3:10; 5:22; 7:19; 13:40,42; 18:8; 25:41; ಮಾರ್ಕ 8:34-37; ಪ್ರಕ 20:15; 21:8. **25**

**16:25** ಮರಣದ ನಂತರ ಮತ್ತು ದೇವರು ಲೋಕಕ್ಕೆ ನ್ಯಾಯವಿಚಾರಣೆ ಮಾಡಿದ ನಂತರ ಕಾರ್ಯಗಳು ಪ್ರಬಲವಾಗಿ ಬದಲಾಗುತ್ತವೆ. **26**

**16:26** ಮರಣದ ನಂತರದ ಸ್ಥಿತಿಯನ್ನು ಬದಲಾಯಿಸಲು ಆಗುವದಿಲ್ಲ ಮತ್ತು ಶಿಕ್ಷೆಯ ಸ್ಥಳದಿಂದ ಹೊರಗೆ ಬರಲೂ ಆಗುವದಿಲ್ಲ. ಮತ್ತಾಯ 25:46 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ಈ ಕಥೆಯಲ್ಲಿ ಕೊಟ್ಟಿರುವ ಉಪದೇಶವು ಪುನರ್ಜನ್ಮದ ಯೋಚನೆಗೆ ವಿರುದ್ಧವಾಗಿದೆ ಎಂಬದನ್ನು ಗಮನಿಸಿರಿ. ಹಾಗೆಯೇ ಯೋಬ 11:12; ಯೋಹಾನ 3:3; 9:3; ಇಬ್ರಿ 9:27 ಸಹ ನೋಡಿರಿ. ಜನರು ಮರಣದ ರಂಗ ಪ್ರವೇಶಿಸಿದ ನಂತರ, ಅವರು ಮತ್ತೆ ಈ ಲೋಕದಲ್ಲಿ ಹುಟ್ಟಿ ಬರುವದಿಲ್ಲ – ಅವರ ದೇಹಗಳು ಪುನರುತ್ಥಾನಗೊಳ್ಳುವ ತನಕ ಅವರ ಆತ್ಮಗಳು ಅಲ್ಲಿಯೇ ಉಳಿಯುತ್ತವೆ (ಯೋಹಾನ 5:28-29). **27-28**

**16:27-28** ಪಾತಾಳದಲ್ಲಿರುವವರು ಭೂಲೋಕದಲ್ಲಿರುವ ತಮ್ಮ ಸಂಬಂಧಿಕರು ರಕ್ಷಣೆ ಹೊಂದಲಿ ಎಂದು ಬಯಸುತ್ತಾರೆ ಆದರೆ ಅವರಿಗಾಗಿ ಅವರು ಮಾಡುವ ಮನವಿಗಳಿಗೆ ಸದುತ್ತರಗಳು ದೊರೆಯುವದಿಲ್ಲ. **29**

**16:29** *"ಮೋಶೆ ಮತ್ತು ಪ್ರವಾದಿಗಳು"*– ಈಗ ನಾವು ಹಳೆಯ ಒಡಂಬಡಿಕೆ ಎಂದು ಕರೆಯುವ ದೇವರ ವಾಕ್ಯಭಾಗವನ್ನು ಇದು ಸೂಚಿಸುತ್ತದೆ. ಭೂಲೋಕದಲ್ಲಿ ಜೀವಂತವಾಗಿರುವ ಜನರು ದೇವರು ಪ್ರಕಟಪಡಿಸಿರುವ ಸತ್ಯವನ್ನು ನಂಬಬೇಕು ಮತ್ತು ಪಶ್ಚಾತ್ತಾಪ ಹಾಗೂ ನಂಬಿಕೆಯಿಂದ ದೇವರ ಕಡೆಗೆ ತಿರುಗಿಕೊಳ್ಳಬೇಕು. **30**

**16:30** ಇದು ವ್ಯರ್ಥವಾದ ನಿರೀಕ್ಷೆಯಾಗಿದೆ, ಅಬ್ರಹಾಮನು ಮುಂದಿನ ವಚನದಲ್ಲಿ ಇದನ್ನೇ ಹೇಳಿದ್ದಾನೆ. ಜನರ ಪಾಪಮಯ ಹೃದಯಗಳು ಮತ್ತು ಅಪನಂಬಿಕೆಗಳನ್ನು ಸುಲಭವಾಗಿ ಜಯಿಸಲು ಆಗುವದಿಲ್ಲ. **31**

**16:31** ದೇವರ ವಾಕ್ಯಗಳನ್ನು ನಂಬಲು ನಿರಾಕರಿಸುವ ಜನರು ಕರ್ತನಾದ ಯೇಸು ಕ್ರಿಸ್ತನೇ ಮೂರನೆ ದಿನದಲ್ಲಿ ಎದ್ದು ಬಂದಾಗಲೂ ತಮ್ಮ ಅಪನಂಬಿಕೆಯನ್ನು ಬಿಡಲಿಲ್ಲ (ಮತ್ತಾಯ 28:11-15). ಮಾನವರಿಗೆ ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳು ಬೇಕಾಗಿಲ್ಲ, ಬದಲಾಗಿ ಅವರ ಹೃದಯಗಳು ದೀನತೆಯುಳ್ಳವುಗಳು, ನಂಬಿಕೆಯುಳ್ಳವುಗಳು ಮತ್ತು ವಿಧೇಯತೆಯುಳ್ಳವುಗಳಾಗಬೇಕಾಗಿದೆ (ಮತ್ತಾಯ 5:3-8).

# 17 1-2

- **17:1-2** ಮತ್ತಾಯ 18:6-7. **3**

- **17:3** ಮತ್ತಾಯ 18:15. **4**

**17:4** ಮತ್ತಾಯ 18:21-22 ರೊಂದಿಗೆ ಹೋಲಿಸಿ ನೋಡಿರಿ. “ನನಗೆ ಪಶ್ಚಾತ್ತಾಪವಾಯಿತು” ಎಂಬ ಪದವನ್ನು ಗಮನಿಸಿರಿ. **5**

**17:5** *“ಅಪೊಸ್ತಲರು”*– ಮತ್ತಾಯ 10:2.

*“ನಮ್ಮ ನಂಬಿಕೆಯನ್ನು ಹೆಚ್ಚಿಸು”*– ನಾಲ್ಕು ವಿವಿಧ ಪರಿಸ್ಥಿತಿಗಳಲ್ಲಿ ಯೇಸು ಕ್ರಿಸ್ತನು ಒಬ್ಬನಿಗೆ ಅಥವಾ ಎಲ್ಲರಿಗೂ “ಅಲ್ಪ ವಿಶ್ವಾಸದ” ಬಗ್ಗೆ ಹೇಳಿದ್ದಾನೆ (ಮತ್ತಾಯ 6:30; 8:26; 14:31; 16:8. ಕೆಲವು ಪ್ರಾಚೀನ ಹಸ್ತಪ್ರತಿಗಳನ್ನು ನೋಡಿದರೆ 17:20ರಲ್ಲಿಯೂ “ಅಲ್ಪ ವಿಶ್ವಾಸ” ಎಂದು ಬರೆಯಲ್ಪಟ್ಟಿದೆ. ನಂಬಿಕೆಯ ಪ್ರಾಮುಖ್ಯತೆ ಮತ್ತು ತಮ್ಮ ಸ್ವಂತ ನಂಬಿಕೆ ಕಡಿಮೆಯಾಗಿರುವದನ್ನು ಮತ್ತು ಯೇಸು ಕ್ರಿಸ್ತನು ತಮಗೆ ಕೊಟ್ಟಿರುವ ಬೋಧನೆಗನುಸಾರ ಜೀವಿಸಲು ನಂಬಿಕೆ ಅವಶ್ಯವಾಗಿದೆ ಎಂದು ಅರಿತು, ಅವರು ಈ ಮನವಿ ಮಾಡಿಕೊಂಡರು. **6**

**17:6** ಮತ್ತಾಯ 17:20 ರೊಂದಿಗೆ ಹೋಲಿಸಿ ನೋಡಿರಿ. **7-10**

**17:7-10** ಈ ವಾಕ್ಯಗಳಲ್ಲಿ ಯೇಸು ಕ್ರಿಸ್ತನು ವಿಷಯವನ್ನು ಬದಲಾಯಿಸುತ್ತಿರುವಂತೆ ಅನ್ನಿಸುತ್ತದೆ, ಆದರೆ ನಿಜವಾಗಿಯೂ ನಂಬಿಕೆ ಹೇಗೆ ಹೆಚ್ಚಾಗುತ್ತದೆ ಎಂದು ಆತನು ತೋರಿಸುತ್ತಿದ್ದಾನೆ. ಹೇಗೆಂದರೆ ನಾವು ನಮ್ಮ ಕುರಿತು ಹೆಚ್ಚಾಗಿ ತಿಳಿದುಕೊಳ್ಳಬಾರದು ಅಥವಾ ನಮ್ಮ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಬಾರದು ಮತ್ತು ಅತಿಯಾದ ಆತ್ಮವಿಶ್ವಾಸವುಳ್ಳವರಾಗಿ ನಡೆದುಕೊಳ್ಳಬಾರದು ಅಥವಾ ನಾವು ಮಾಡುತ್ತಿರುವ ಸೇವೆಗೆ ದೇವರೇ ನಮಗೆ ಕೃತಜ್ಞತೆ ಹೇಳಬೇಕು ಎಂಬ ರೀತಿಯಲ್ಲಿ ನಮ್ಮ ವಿಷಯವಾಗಿ ನಾವೇ ಹೆಮ್ಮೆಪಡಬಾರದು. ನಮ್ಮ ನಂಬಿಕೆ ಹೆಚ್ಚಾಗಬೇಕಾದರೆ ನಾವು ನಮ್ಮ ಕುರಿತು ದೀನತೆಯ ಆಲೋಚನೆಯುಳ್ಳವರಾಗಿರಬೇಕು, ಯಾವ ರೀತಿ ಆಲೋಚಿಸಿಕೊಳ್ಳಬೇಕೆಂದರೆ (1 ಕೊರಿಂಥ 3:6-7; 2 ಕೊರಿಂಥ 3:5; ಎಫೆ 3:8 ರೊಂದಿಗೆ ಹೋಲಿಸಿ ನೋಡಿರಿ. ರೋಮಾ 7:14-25 ಮತ್ತು 2 ಕೊರಿಂಥ 12:7-10 ರ ನೋಟ್ಸ್ ನೋಡಿರಿ). ಇದಲ್ಲದೆ ನಾವು ಅಯೋಗ್ಯರು

ಎಂಬದಾಗಿ ಅರಿತುಕೊಳ್ಳುವದು ಮಾತ್ರವಲ್ಲ ಬದಲಾಗಿ ನಾವೇನು ಮಾಡಬೇಕೆಂಬದನ್ನು ನಮಗೆ ಹೇಳುವ ಅಧಿಕಾರ ಯೇಸು ಕ್ರಿಸ್ತನಿಗಿದೆ ಮತ್ತು ನಾವು ನಮ್ಮ ಜೀವಿತದಲ್ಲಿ ಆತನ ಕಾರ್ಯಗಳಿಗೆ ಪ್ರಥಮ ಸ್ಥಾನವನ್ನು ಕೊಡಬೇಕು ಹಾಗೂ ಮರು ಪ್ರಶ್ನೆಯಿಲ್ಲದೆ ಆತನಿಗೆ ವಿಧೇಯರಾಗಿ ನಡೆದುಕೊಳ್ಳಬೇಕು ಎಂಬದನ್ನೂ ಅರಿತುಕೊಳ್ಳಬೇಕು. ನಾವು ನಮ್ಮನ್ನು ನಿರಾಕರಿಸಿ ಯೇಸು ಕ್ರಿಸ್ತನು ನಮ್ಮ ಜೀವಿತಗಳ ಕೇಂದ್ರಬಿಂದುವನ್ನಾಗಿ ಮಾಡಿಕೊಳ್ಳುವಾಗ ಮತ್ತು ದೀನತೆಯೊಂದಿಗೆ ಯಾವಾಗಲೂ ಆತನ ಅಧಿಕಾರಕ್ಕೆ ಒಪ್ಪಿಸಿಕೊಡುವಾಗ, ಆತನಲ್ಲಿನ ನಮ್ಮ ನಂಬಿಕೆ ದೃಢವಾಗಿ ಹೆಚ್ಚಾಗುವವದನ್ನು ಹಾಗೂ ಆತನ ಸಾಮರ್ಥ್ಯಗಳ ಮೂಲಕ ಕಾರ್ಯಗಳ ಮಾಡುವದನ್ನು ನೋಡಬಹುದು. ಮೂಲಭೂತವಾಗಿ ವಿಶ್ವಾಸಿಯ ನಂಬಿಕೆಯಿಂದ ಅದ್ಭುತಕಾರ್ಯಗಳು ನಡೆಯುವದಿಲ್ಲ, ಬದಲಾಗಿ ಅವನು ಅಥವಾ ಅವಳು ಯಾರಲ್ಲಿ ನಂಬಿಕೆಯಿಟ್ಟು ಯಾರ ಸೇವೆ ಮಾಡುತ್ತಿರುತ್ತಾರೋ ಆತನು ಅದ್ಭುತಕಾರ್ಯಗಳನ್ನು ಮಾಡುತ್ತಾನೆ. 10

**17:10** *"ಪ್ರಯೋಜನವಿಲ್ಲದವರು"*– ಇಲ್ಲಿ ಉಪಯೋಗಿಸಲಾಗಿರುವ ಈ ಗ್ರೀಕ್ ಪದವನ್ನು ಹೊಸ ಒಡಂಬಡಿಕೆಯಲ್ಲಿ ಇನ್ನೊಂದು ಸಲ ಮಾತ್ರವೇ ಉಪಯೋಗಿಸಲಾಗಿದೆ. ಅದನ್ನು ನಾವು ಮತ್ತಾಯ 25:30 ರಲ್ಲಿ ನೋಡಬಹುದು. ಇದನ್ನು "ಅಯೋಗ್ಯರು" ಅಥವಾ "ಅನರ್ಹರು" ಅಥವಾ "ಉಪಯೋಗವಿಲ್ಲದವರು" –ಎಂಬದಾಗಿಯೂ ಭಾಷಾಂತರ ಮಾಡಬಹುದು. ವಿಶ್ವಾಸಿಗಳಿಗೆ ತಮ್ಮ ವಿಷಯದಲ್ಲಿ ಸರಿಯಾದ ಮನಸ್ಥಿತಿ ಇರುವಾಗ ಯೇಸು ಕ್ರಿಸ್ತನಲ್ಲಿರುವ ಅವರ ನಂಬಿಕೆ ಹೆಚ್ಚಾಗುತ್ತದೆ. ವಿಧೇಯತೆಯ ಹೃದಯವುಳ್ಳವರಾಗಿ ಸತ್ಯವೇದವನ್ನು ಅಧ್ಯಯನ ಮಾಡಿದರೂ ನಮ್ಮ ನಂಬಿಕೆ ಹೆಚ್ಚಾಗುತ್ತದೆ ಎಂಬದನ್ನು ಹೇಳುವ ಅವಶ್ಯಕತೆ ಇದೆಯೇ? ರೋಮಾ 10:17 ನೋಡಿರಿ. 11

**17:11** 9:51 ನೋಡಿರಿ. 12

**17:12** *"ಕುಷ್ಠರೋಗಿಗಳು"*– ಯಾಜಕ 13:1 ರ ನೋಟ್ಸ್ ನೋಡಿರಿ. ಅವರು ಯಾಕೆ ದೂರದಲ್ಲಿ ನಿಂತುಕೊಂಡರು ಎಂಬದಕ್ಕೆ ಕಾರಣವನ್ನು ಯಾಜಕ 13:45-46 ರಲ್ಲಿ ನೋಡಬಹುದಾಗಿದೆ. 13

**17:13** ಯಾರೆಲ್ಲಾ ಇಂಥ ಮಾತುಗಳನ್ನು ಕರ್ತನಾದ ಯೇಸು ಕ್ರಿಸ್ತನಿಗೆ ವ್ಯರ್ಥವಾಗಿ ಹೇಳಿದ್ದಾರೆ? ಮತ್ತಾಯ 8:2-3. 14

- **17:14** ಮತ್ತಾಯ 8:4. 16

**17:16** *"ಸಮಾರ್ಯದವನು"*– ಮತ್ತಾಯ 10:5; ಯೋಹಾನ 4:9. **17-18**

**17:17-18** ಕೃತಜ್ಞತೆ ಸಲ್ಲಿಸದಿರುವದು ಘೋರವಾದ ಪಾಪವಾಗಿದೆ ಮತ್ತು ಕರ್ತನಾದ ಯೇಸು ಕ್ರಿಸ್ತನಿಗೆ ಮೆಚ್ಚಿಕೆಯಾಗದ ಕಾರ್ಯವಾಗಿದೆ. ರೋಮಾ 1:21 ಸಹ ನೋಡಿರಿ. ಕೃತಜ್ಞತೆ ಸಲ್ಲಿಸುವದರ ಕುರಿತಾದ ನೋಟ್ಸ್ ಯಾಜಕ 7:12-13; ಕೀರ್ತನೆ 7:17; 1 ಥೆಸ 5:18 ರಲ್ಲಿ ನೋಡಿರಿ. **19**

- **17:19** 7:50; 8:48; ಮತ್ತಾಯ 9:22; 15:28 ನೋಡಿರಿ. **20**

**17:20** *"ಫರಿಸಾಯರು"*– ಮತ್ತಾಯ 3:7.

*"ದೇವರ ರಾಜ್ಯ"*– ಮತ್ತಾಯ 4:17. ಫರಿಸಾಯರು ದೇವರ ರಾಜ್ಯದ ಬಗ್ಗೆ ಬಹಿರಂಗವಾಗಿ ಏನಾದರೂ ಪ್ರಕಟನೆಯಾಗಲಿ ಎಂದು ಬಯಸುತ್ತಿದ್ದರು ಅಂದರೆ ಯೆಶಾಯ 11 ನೇ ಅಧ್ಯಾಯದಲ್ಲಿ ವಿವರಿಸಲಾಗಿರುವಂಥ ಕಾರ್ಯಗಳನ್ನು ಬಯಸುತ್ತಿದ್ದರು. ಯೇಸು ಕ್ರಿಸ್ತನ ಉತ್ತರ ಸೂಚಿಸುವದೇನೆಂದರೆ ದೇವರ ರಾಜ್ಯವು ಈಗಾಗಲೇ ಬಂದಿದೆ, ಆದರೆ ಅವರು ಅಂದುಕೊಳ್ಳುತ್ತಿರುವ ರೀತಿಯಲ್ಲಿ ಅಲ್ಲ. ಮತ್ತಾಯ 3:2; 4:17; 5:3; 11:12; 12:28 ರೊಂದಿಗೆ ಹೋಲಿಸಿ ನೋಡಿರಿ. ಇಲ್ಲಿ ಆತನು ಆತ್ಮೀಕ ಹಾಗೂ ಮಾನವ ಹೃದಯಲ್ಲಿರುವ ದೇವರ ರಾಜ್ಯದ ಅಂಶದ ಕುರಿತು ಮಾತನಾಡುತ್ತಿದ್ದಾನೆ. **21**

**17:21** *"ಇಲ್ಲಿ ಇದೆ"*– ಇಲ್ಲಿ ಉಪಯೋಗಿಸಲಾಗಿರುವ ಗ್ರೀಕ್ ಪದವನ್ನು ಕೆಲವು ಆವೃತ್ತಿಗಳು "ನಿಮ್ಮೊಳಗಿದೆ" –ಎಂದು ಭಾಷಾಂತರ ಮಾಡಿವೆ. ಆದರೆ ದೇವರ ರಾಜ್ಯವು ಆ ಫರಿಸಾಯರಲ್ಲಿ, ಅವರ ಹೃದಯಗಳಲ್ಲಿ ಇರಲಿಲ್ಲ. ಅವರ ಮಧ್ಯದಲ್ಲಿತ್ತು ಯಾಕಂದರೆ ಅರಸನು ಅವರ ಮಧ್ಯದಲ್ಲಿದ್ದನು ಮತ್ತು ಆತನ ಜನರಲ್ಲಿ ಕೆಲವರು ಆತನನ್ನು ಮತ್ತು ಆತನ ರಾಜ್ಯವನ್ನು ಅಂಗೀಕರಿಸಿಕೊಂಡಿದ್ದರು. ದೇವರ ರಾಜ್ಯದ ಕಣ್ಣಿಗೆ ಕಾಣದಿರುವ ಅಂಶವನ್ನು ಗಮನಕ್ಕೆ ತರುವ ಮೂಲಕ, ಮುಂದೆ ಭವಿಷ್ಯದಲ್ಲಿ ದೇವರ ರಾಜ್ಯವು ಕಣ್ಣಿಗೆ ಕಾಣುವ ಹಾಗೆ ಪ್ರಕಟಗೊಳ್ಳುತ್ತದೆ ಎಂಬ ಅಂಶವನ್ನು ನಿರಾಕರಿಸುತ್ತಿಲ್ಲ (ವ 24,30). **22**

**17:22** ಮತ್ತಾಯ 8:20 ರಲ್ಲಿ ಮನುಷ್ಯ ಕುಮಾರನ ಕುರಿತಾದ ನೋಟ್ ನೋಡಿರಿ. ಆತನು ಪರಲೋಕಕ್ಕೆ ಹೋಗುತ್ತಾನೆ ಮತ್ತು ಆತನ ಶಿಷ್ಯರು ಮಹದಾದ ಕಷ್ಟಗಳು ಹಾಗೂ ಸಮಸ್ಯೆಗಳು ಎದುರಿಸುವರು ಮತ್ತು ಆತನ ಬರೋಣವನ್ನು ಎದುರುನೋಡುತ್ತಿರುವರು. **23**

- **17:23** ಮತ್ತಾಯ 24:23. **24**

- **17:24** ಮತ್ತಾಯ 24:27. **25**

- **17:25** 5:35; 9:22,43-45; 12:50; 13:32-33; ಮತ್ತಾಯ 16:21; ಯೆಶಾಯ 53:3 ನೋಡಿರಿ. **26-27**

- **17:26-27** ಮತ್ತಾಯ 24:37-39. **28-29**

- **17:28-29** ಆದಿ 19:1-28. **31**

- **17:31** ಮತ್ತಾಯ 24:17-18. **32**

**17:32** ಆದಿ 19:17,26. ದೇವರ ನ್ಯಾಯತೀರ್ಪು ವ್ಯಕ್ತವಾಗಲು ಪ್ರಾರಂಭಿಸುವಾಗ ಲೌಕಿಕ ಕಾರ್ಯಗಳನ್ನು ಬಯಸುವದು ಮೂರ್ಖತನವಾಗಿದೆ. ಆದರೆ ಲೋಟನ ಹೆಂಡತಿಗೆ ತಾವು ಬಿಟ್ಟು ಬರುತ್ತಿದ್ದ ವಸ್ತುಗಳ ಮೇಲೆಯೇ ಮನಸ್ಸಿತ್ತು ಎಂಬದಾಗಿ ಅನ್ನಿಸುತ್ತದೆ. ನಮ್ಮ ಗಂಟು ಸರಿಯಾದ ಸ್ಥಳದಲ್ಲಿದೆಯೇ ಎಂಬದನ್ನು ದೃಢಪಡಿಸಿಕೊಳ್ಳೋಣ (ಮತ್ತಾಯ 6:19-21). **33**

- **17:33** ಮತ್ತಾಯ 10:39. **34-35**

**17:34-35** ಮತ್ತಾಯ 24:40-41 ರೊಂದಿಗೆ ಹೋಲಿಸಿ ನೋಡಿರಿ. **37**

- **17:37** ಮತ್ತಾಯ 24:48.

# 18 1

**18:1** *"ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡಿರಿ"*– 11:3,5-10; 1 ಥೆಸ 5:17; ಎಫೆ 6:18 ನೋಡಿರಿ. ನಮ್ಮ ಪ್ರಾರ್ಥನೆಗಳಿಗೆ ನಮಗೆ ಕೂಡಲೇ ಉತ್ತರ ಸಿಗದಿರುವಾಗ, ಅಥವಾ ನಾವಂದುಕೊಳ್ಳುವ ರೀತಿಯಲ್ಲಿ ಉತ್ತರಗಳು ಸಿಗದಿರುವಾಗ, ಪ್ರಾರ್ಥನೆ ಮಾಡುವದನ್ನೇ ನಿಲ್ಲಿಸಿಬಿಡುವಂತೆ ಮನಸ್ಸಾಗುತ್ತದೆ. ಒಂದುವೇಳೆ ಇಂಥ ಶೋಧನೆಗಳು ನಮ್ಮ ಸ್ವಂತ ಮನಸ್ಸು ಮತ್ತು ಹೃದಯಗಳಿಂದ ಬಾರದೆ ಹೋದರೆ, ಸೈತಾನನು ಅವುಗಳನ್ನು ನಮ್ಮೊಳಗೆ ಸೇರಿಸಲು ಪ್ರಯತ್ನಿಸುತ್ತಾನೆ. ಅಂಥ ಶೋಧನೆಗಳಿಗೆ ಅವಕಾಶ ಕೊಡದಿರೋಣ. ಪ್ರಾರ್ಥನೆ ಮಾಡುವದನ್ನು ನಿಲ್ಲಿಸಿದರೆ ಜೀವಿತದಲ್ಲಿ

ಸೋಲುಗಳು ಎದುರಾಗುತ್ತವೆ ಮತ್ತು ದೇವರ ಸೇವೆಯಲ್ಲಿ ನಾವು ಯಾವುದೇ ಫಲಗಳನ್ನು ಕಾಣಲು ಆಗುವದಿಲ್ಲ. ನಮ್ಮ ನಿರಾಸೆಗಳು ಏನೇ ಆಗಿದ್ದರೂ, ಎಂಥಾ ಸೋಲುಗಳನ್ನೇ ಅನುಭವಿಸಿದ್ದರೂ, ನಮ್ಮ ಹಿಂದಿನ ಪಾಪಗಳು ಎಷ್ಟೇ ಘೋರವಾಗಿದ್ದರೂ, ನಮ್ಮ ಸದ್ಯದ ಪಾಪ ಕಾರ್ಯಗಳ ವಿಷಯದಲ್ಲಿ ನಮ್ಮ ಮನಸ್ಥಿತಿ ಹೇಗೇ ಇದ್ದರೂ, ಪ್ರಾರ್ಥನೆ ಮಾಡಿದರೆ ಯಾವುದೇ ಪ್ರಯೋಜನವಿಲ್ಲ ಎಂಬ ಆಲೋಚನೆಗಳು ಎಷ್ಟೇ ಬಂದರೂ, ದೇವರು ಹತ್ತಿರದಲ್ಲಿಲ್ಲ ಎಂಬದಾಗಿ ಅನ್ನಿಸಿದರೂ, ನಮ್ಮ ಪ್ರಾರ್ಥನೆಗಳಿಗೆ ಉತ್ತರವೇ ಸಿಗುವದಿಲ್ಲ ಎಂಬದಾಗಿ ಅನ್ನಿಸಿದರೂ, ಅಪನಂಬಿಕೆಯನ್ನು ಹುಟ್ಟಿಸುವಂಥ ಎಷ್ಟೇ ಶೋಧನೆಗಳು ಎದುರಾದರೂ, ನಮ್ಮ ಪರಿಸ್ಥಿತಿಗಳು ಅಥವಾ ಮಾನಸಿಕ ಸ್ಥಿತಿಗಳು ಅಥವಾ ಆತ್ಮೀಕ ಹೋರಾಟಗಳು ಏನೇ ಇದ್ದರೂ ಪ್ರಾರ್ಥನೆ ಮಾಡುವದನ್ನು ಮಾತ್ರ ನಿಲ್ಲಿಸದೆ ಇರೋಣ. ಪ್ರಾರ್ಥನೆ ಮಾಡುವದನ್ನು ನಿಲ್ಲಿಸುವದು ಪಾಪವಾಗಿದೆ (1 ಸಮು 12:23 ರೊಂದಿಗೆ ಹೋಲಿಸಿ ನೋಡಿರಿ) ಮತ್ತು ನಮ್ಮನ್ನು ಮತ್ತಷ್ಟು ಪಾಪಕ್ಕೆ ನಡೆಸುತ್ತದೆ. ಪ್ರಾರ್ಥನೆ ಮಾಡದಿರುವದು ಹತಾಶೆ ಮತ್ತು ಆತ್ಮೀಕ ಜೀವಿತದಲ್ಲಿ ನಾಶನ ಹೊಂದುವಂತೆ ಮಾಡುತ್ತದೆ. ಆದ್ದರಿಂದ ನಾವು ಏನೇ ಮಾಡಿದರೂ ಅಥವಾ ಮಾಡದಿದ್ದರೂ, ಮಾಡಲಾದರೂ ಅಥವಾ ಮಾಡಲಾಗದಿದ್ದರೂ ಕರ್ತನಾದ ಯೇಸು ಕ್ರಿಸ್ತನ ತಂದೆಯೂ ಮತ್ತು ದೇವರೂ ಆಗಿರುವ ಒಬ್ಬನೇ ದೇವರಿಗೆ ಪ್ರಾರ್ಥನೆ ಮಾಡುವದನ್ನು ಮುಂದುವರೆಸೋಣ. 2

**18:2** ಕೀರ್ತ 82. 7

**18:7** ದೇವರು ಅನ್ಯಾಯಗಾರನಾದ ಈ ನ್ಯಾಯಾಧಿಪತಿಗೆ ಸಮಾನನಾಗಿದ್ದಾನೆ ಎಂದು ಕರ್ತನಾದ ಯೇಸು ಕ್ರಿಸ್ತನು ಹೇಳುತ್ತಿಲ್ಲ. ಆತನು ಹೇಳುತ್ತಿರುವದೇನೆಂದರೆ ಅನ್ಯಾಯಗಾರನಾಗಿರುವ ನ್ಯಾಯಾಧಿಪತಿಯೇ ಮತ್ತೆಮತ್ತೆ ನ್ಯಾಯಕ್ಕಾಗಿ ಮನವಿ ಮಾಡುವಾಗ ಅದನ್ನು ಪೂರೈಸುವದಾದರೆ, ನಂಬಿಗಸ್ತನು ಮತ್ತು ನೀತಿವಂತನು ಆಗಿರುವ ಲೋಕದ ನ್ಯಾಯಾಧಿಪತಿಯು ಸತತವಾಗಿ ಪ್ರಾರ್ಥನೆ ಮಾಡುವ ತನ್ನ ಜನರಿಗೆ ಇನ್ನೆಷ್ಟರ ಮಟ್ಟಿಗೆ ನ್ಯಾಯವನ್ನು ಒದಗಿಸುವನು (ಇದಲ್ಲದೆ ನೀತಿಯುಳ್ಳ ಈ ನ್ಯಾಯಾಧಿಪತಿಯು ಪ್ರೀತಿ ಕರುಣೆಯುಳ್ಳ ತಂದೆಯಾಗಿದ್ದಾನೆ ಎಂಬದನ್ನೂ ಮರೆಯಬೇಡಿರಿ.) ಇದರ ಅರ್ಥ ಆತನ ಜನರು ತಮಗೆ ಒಳ್ಳೆಯದಾಗಲಿ ಅಥವಾ ಕೆಟ್ಟದಾಗಲಿ ಸತತವಾಗಿ ಪ್ರಾರ್ಥನೆ ಮಾಡಿದರೆ ಯಾವ ಬೇಡಿಕೆಯನ್ನಾದಲೂ ಹೊಂದಬಹುದು ಎಂಬದಾಗಿಯಲ್ಲ. ಬದಲಾಗಿ ಒಂದುವೇಳೆ ಅವರು ಒಳ್ಳೆಯದಾಗಿರುವ, ಹಿತವಾದ ಕಾರ್ಯಗಳನ್ನು ಬೇಡಿಕೊಂಡರೆ ಅಥವಾ ಆತನ

ಚಿತ್ತದನುಸಾರವಾಗಿ ಏನೇ ಬೇಡಿಕೊಂಡರೂ ಹೊಂದುವರು ಎಂಬದಾಗಿದೆ. 1 ಯೋಹಾನ 5:14-15 ರೊಂದಿಗೆ ಹೋಲಿಸಿ ನೋಡಿರಿ. **8**

**18:8** *"ಮನುಷ್ಯ ಕುಮಾರನು"*– ಮತ್ತಾಯ 8:20. ಆತನ ಎರಡನೇ ಬರೋಣದ ಕುರಿತು ಮತ್ತಾಯ 16:27 ನೋಡಿರಿ. ಯೇಸು ಕ್ರಿಸ್ತನ ಎರಡನೇ ಬರೋಣದ ಸಮಯವು ಹತ್ತಿರವಾಗುವಾಗ ಹೆಚ್ಚು ಕಷ್ಟ ಸಂಕಟಗಳು ಎದುರಾಗುತ್ತವೆ, ಆ ಸಮಯದಲ್ಲಿ ಕೆಲವರು ಮಾತ್ರವೇ ಅಧಿಕ ನಂಬಿಕೆಯುಳ್ಳವರಾಗಿರುತ್ತಾರೆ (ಮತ್ತಾಯ 24:9-12; 2 ಥೆಸ 2:3; 1 ತಿಮೊ 4:1; 2 ತಿಮೊ 4:3-4). **9**

**18:9** 16:15; 7:39; 5:30; ಜ್ಞಾನೋ 30:12-13; ಯೆಶಾಯ 65:5; ಯೆರೆ 2:35 ನೋಡಿರಿ. ಅಂಥ ಜನರು ಆಗಲು ಮತ್ತು ಈಗಲು ಯೆಶಾಯ 64:6; ಯೆರೆ 17:9 ರ ಸತ್ಯದ ವಿಷಯದಲ್ಲಿ ಅಜ್ಞಾನಿಗಳಾಗಿರುತ್ತಾರೆ. 10-12 ವಚನಗಳಲ್ಲಿ ಫರಿಸಾಯನು ಮಾಡಿದ ಪ್ರಾರ್ಥನೆಯಲ್ಲಿ ಆ ಅಜ್ಞಾನವನ್ನು ನಾವು ನೋಡಬಹುದು. ಮಾನವರ ಮನೋನೇತ್ರಗಳು ತೆರೆಯುವಾಗ ತಾವು ಹೇಗಿದ್ದೇವೆಂಬದನ್ನು ಮತ್ತು ದೇವರು ನಿಜವಾಗಿಯೂ ಹೇಗಿದ್ದಾನೆಂದು ನೋಡಲು ಸಾಧ್ಯವಾಗುತ್ತದೆ ಆದರೂ ಪರಿಶುದ್ಧನು ಮತ್ತು ಎಲ್ಲಾ ಮಾನವರಿಗಿಂತಲೂ ಉನ್ನತನಾಗಿದ್ದಾನೆ. **10**

**18:10** *"ಸುಂಕದವನು"*– ಮತ್ತಾಯ 5:46. **12**

**18:12** *"ಉಪವಾಸ"*– ಮತ್ತಾಯ 6:16.

*"ದಶಮಭಾಗ"*– ಒಬ್ಬನು ತನ್ನ ಆದಾಯದ ಹತ್ತರಲ್ಲೊಂದು ಭಾಗ ಕೊಡುವದನ್ನು ಹಳೆಯ ಒಡಂಬಡಿಕೆಯಲ್ಲಿ ಕಲಿಸಲಾಗಿದೆ – ಆದಿ 28:22; ಯಾಜಕ 27:30; ಸಂಖ್ಯಾ 18:21. ಫರಿಸಾಯರು ಇದನ್ನು ಮಾಡುತ್ತಿದ್ದರು (ಮತ್ತಾಯ 6:16; 23:23), ಆದರೆ ಇದಕ್ಕಿಂತಲೂ ಪ್ರಾಮುಖ್ಯವಾಗಿರುವ ನ್ಯಾಯ, ಕರುಣೆ ಮತ್ತು ನಂಬಿಗಸ್ತಿಕೆ ಹಾಗೂ ಧರ್ಮಶಾಸ್ತ್ರದ ಎರಡು ಮಹಾ ಆಜ್ಞೆಗಳನ್ನು ಕಡೆಗಣಿಸುತ್ತಿದ್ದರು (ಮತ್ತಾಯ 22:37-40). **13**

**18:13** ಇಲ್ಲಿ ಕ್ಲುಪ್ತವಾದ ಪ್ರಾರ್ಥನೆಯನ್ನು ನೋಡಬಹುದಾಗಿದೆ, ಆದರೆ ಪಾಪಿಯ ಹೃದಯದಿಂದ ಬಂದ ಈ ಪ್ರಾರ್ಥನೆಯು ನೇರವಾಗಿ ದೇವರ ಹೃದಯವನ್ನು ಮುಟ್ಟಿತು.

ಜನರಿಗೆ ಯಾವ ರೀತಿಯ ತಿಳುವಳಿಕೆ ಬೇಕು ಎಂಬದನ್ನು ಇದು ಪ್ರಕಟಪಡಿಸುತ್ತದೆ – ಅವರು ತಮ್ಮ ಪಾಪವನ್ನು ಮತ್ತು ದೇವರು ಕರುಣೆಯುಳ್ಳವನು ಎಂಬದನ್ನು ತಿಳಿದುಕೊಳ್ಳಬೇಕು. ನಮ್ಮ ಪಾಪಿತನ ಮತ್ತು ಅಯೋಗ್ಯತನ ಪ್ರಾರ್ಥನೆಯಲ್ಲಿ ನಮ್ಮನ್ನು ಅರ್ಹರನ್ನಾಗಿಸುವದಿಲ್ಲ ಎಂಬದನ್ನು ನಾವು ಕಲಿತುಕೊಳ್ಳಬೇಕು. ಬದಲಾಗಿ ಇದಕ್ಕೆ ವಿರುದ್ಧವಾದದ್ದು ಮುಖ್ಯವಾಗಿದೆ. ಇದು ನಮ್ಮಲ್ಲಿ ಪವಿತ್ರಾತ್ಮನು ಮಾಡುವ ಕಾರ್ಯವನ್ನು ಸೂಚಿಸುತ್ತದೆ ಮತ್ತು ದೇವರಿಗೆ ಮೆಚ್ಚಿಕೆಯಾದದ್ದಾಗಿದೆ. ಕೀರ್ತನೆ 51:17; ಯೆಶಾಯ 6:5; 57:15; 66:2; ಮತ್ತಾಯ 5:3; 6:12 ನೋಡಿರಿ. ದೇವರ ಕರುಣೆಯ ಕುರಿತಾಗಿ ತಿಳಿಯಲು ಕೀರ್ತನೆ 51:1; ಎಫೆ 2:4; ತೀತ 3:5; 1 ಪೇತ್ರ 1:3 ನೋಡಿರಿ. **14**

**18:14** ಇದರ ಅರ್ಥ ಫರಿಸಾಯನು ತನ್ನನ್ನು ನೀತಿವಂತನೆಂದು ಮತ್ತು ಸುಂಕದವನು ತನ್ನ ಪಾಪಿ ಎಂದು ಅಂದುಕೊಂಡಿದ್ದರು ದೇವರು ಸುಂಕದವನ್ನು ನೀತಿವಂತನೆಂದು ಮತ್ತು ಫರಿಸಾಯನನ್ನು ಪಾಪಿ ಎಂದು ಎಣಿಸಿದನು ಎಂಬದಾಗಿದೆ.

*"ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ"*– ಎಂದರೆ ನೀತಿವಂತನೆಂದು ಎಣಿಸಲ್ಪಟ್ಟನು. ರೋಮಾ 1:17; 3:21-28; 4:7-8 ನೋಡಿರಿ. ಕಣ್ಣೀರಿಟ್ಟು ತನ್ನ ಪಾಪಗಳನ್ನು ಅರಿಕೆ ಮಾಡಿಕೊಂಡವನು ಎಷ್ಟೋ ಪಾಪಮಾಡಿದ್ದರೂ ಅವೆಲ್ಲವೂ ಪರಿಹರಿಸಲ್ಪಟ್ಟವನಾಗಿ ಮನೆಗೆ ಹೋದನು. ದೇವರು ಮಾನವರೊಂದಿಗೆ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ ಎಂಬದನ್ನು ಯೇಸು ಕ್ರಿಸ್ತನ ಮಾತುಗಳು ಪ್ರಕಟಪಡಿಸುತ್ತವೆ ಮತ್ತು ನಾವು ಅವುಗಳನ್ನು ಕಲಿಯುವದು ಉತ್ತಮವಾಗಿದೆ (14:11; ಮತ್ತಾಯ 23:12; ಯಾಕೋಬ 4:6). **15-17**

- **18:15-17** ಮತ್ತಾಯ 19:13-15; ಮತ್ತಾಯ 18:3. **18-30**

**18:18-30** ಮತ್ತಾಯ 19:16-29; ಮಾರ್ಕ 10:17-30 ರಲ್ಲಿ ಇದರ ಕುರಿತಾದ ನೋಟ್ಸ್ ನೋಡಿರಿ. **31-33**

- **18:31-33** ಮತ್ತಾಯ 20:17-19; ಮಾರ್ಕ 10:32-34. **31**

**18:31** ಹಳೆಯ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ಪ್ರವಾದನೆ ಪುಸ್ತಕಗಳ ಪ್ರವಾದಿಗಳನ್ನು ಯೇಸು ಕ್ರಿಸ್ತನು ಸೂಚಿಸುತ್ತಿದ್ದಾನೆ. ಉದಾಹರಣೆಗೆ ಕೀರ್ತನೆ 22; ಯೆಶಾಯ 53; ಜೆಕರ್ಯ 13:7 ನೋಡಿರಿ. **32**

**18:32** *"ಅನ್ಯರು"*– ಯೆಹೂದ್ಯರಲ್ಲದವರು. **34**

- **18:34** 9:45; ಮಾರ್ಕ 9:32; ಮತ್ತಾಯ 16:22 ನೋಡಿರಿ. **35-43**

- **18:35-43** ಮತ್ತಾಯ 20:29-34; ಮಾರ್ಕ 10:46-52. **35**

**18:35** ಯೇಸು ಕ್ರಿಸ್ತನು ಯೆರಿಕೋವಿಗೆ ಹೋಗುವಾಗ ಈ ಘಟನೆ ಸಂಭವಿಸಿತು ಎಂಬದಾಗಿ ಮತ್ತಾಯ ಮತ್ತು ಮಾರ್ಕ ಹೇಳಿದ್ದಾರೆ. ಹಾಗಾದರೆ ಇದರಲ್ಲಿ ಏನಾದರೂ ವ್ಯತ್ಯಾಸ ಇದೆಯೇ? ಇಲ್ಲ. ಹಳೆಯ ಯೆರಿಕೋ ಪಟ್ಟಣ ಹಾಗೆಯೇ ಇದ್ದು, ಅದರಲ್ಲಿ ಕೆಲವು ಜನರು ಜೀವಿಸುತ್ತಿದ್ದರು. ಅದರ ದಕ್ಷಿಣ ಭಾಗದಲ್ಲಿ ಹೊಸ ಯೆರಿಕೋ ಪಟ್ಟಣವನ್ನು ಕಟ್ಟಲಾಗಿತ್ತು. ಯೇಸು ಕ್ರಿಸ್ತನು ಹಳೆಯ ಯೆರಿಕೋ ಪಟ್ಟಣದಿಂದ ಹೊರಡುತ್ತಿದ್ದನು ಎಂದು ಮತ್ತಾಯ ಮತ್ತು ಮಾರ್ಕನು ಹೇಳುತ್ತಾರೆ, ಆತನು ಹೊಸದರ ಸಮೀಪಕ್ಕೆ ಬರುವದನ್ನು ಲೂಕನು ಹೇಳಿದ್ದಾನೆ. ಮಾರ್ಕ 4:1 ರ ನೋಟ್ ನೋಡಿರಿ. **38**

**18:38** *"ದಾವೀದ ಕುಮಾರನು"*– ಮತ್ತಾಯ 1:1. **42**

**18:42** ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದರ ಶಕ್ತಿಯನ್ನು ಮತ್ತೊಮ್ಮೆ ನೋಡಬಹುದಾಗಿದೆ (ಮತ್ತಾಯ 9:22; ಮಾರ್ಕ 10:52). **43**

**18:43** ದೇವರಿಗೆ ಸ್ತೋತ್ರ ಸಲ್ಲಿಸುವದು ಲೂಕನ ಸುವಾರ್ತೆಯ ಪ್ರಮುಖ ಧ್ಯೇಯವಾಗಿದೆ – 1:64; 2:13,20; 18:43; 19:37; 24:53.

# 19 1

**19:1** 18:35 ನೋಡಿರಿ. ಇದು ಹೊಸ ಯೆರಿಕೋ. **2**

**19:2** *"ಸುಂಕದವನು"*– ಮತ್ತಾಯ 5:46. **4**

**19:4** ಇದು ಐಶ್ವರ್ಯವಂತನಿಗೆ ತಕ್ಕದಾದ ಮತ್ತು ಅರ್ಹವಾದ ಸ್ವಭಾವವಲ್ಲ ಎಂಬದಾಗಿ ಅನೇಕರು ಯೋಚಿಸುತ್ತಾರೆ, ಆದರೆ ಕರ್ತನಾದ ಯೇಸು ಕ್ರಿಸ್ತನನ್ನು ನೋಡಲು ಅವನು ಎಷ್ಟು ಉತ್ಸುಕನಾಗಿದ್ದನು ಹಾಗೂ ಇತರರು ಏನಂದುಕೊಳ್ಳುವರು ಎಂಬದಾಗಿ ಯೋಚಿಸಲಿಲ್ಲ ಎಂಬದನ್ನು ಇದು ತೋರಿಸುತ್ತದೆ. **5**

**19:5** ಕರ್ತನಾದ ಯೇಸು ಕ್ರಿಸ್ತನು ಜಕ್ಕಾಯನನ್ನು ಭೇಟಿಯೇ ಮಾಡಿರಲಿಲ್ಲ, ಆದರೂ ಅವನು ಎಲ್ಲಿದ್ದಾನೆ ಎಂಬದು ಮತ್ತು ಅವನ ಕುರಿತಾದ ಎಲ್ಲಾ ವಿಷಯಗಳು ಆತನಿಗೆ

ಗೊತ್ತಿದ್ದವು (ಯೋಹಾನ 1:48-50; 2:24-25 ರೊಂದಿಗೆ ಹೋಲಿಸಿ ನೋಡಿರಿ). ಜಕ್ಕಾಯನು ಪಾಪದಲ್ಲಿ ಜೀವಿಸುವವನಾಗಿದ್ದಾನೆ ಆದರೆ ಸತ್ಯವನ್ನು ತಿಳಿಯಬೇಕೆಂಬ ಬಯಕೆಯುಳ್ಳವನಾಗಿದ್ದಾನೆ ಎಂಬದು ಆತನಿಗೆ ಗೊತ್ತಿತ್ತು ಮತ್ತು ಆತನ ನಿಜವಾದ ಸೇವೆ ಏನು ಎಂಬದೂ ಆತನಿಗೆ ಗೊತ್ತಿತ್ತು (ವ 10). ಅವನ ಮನೆಗೆ ಹೋಗಬೇಕೆಂಬ ಆಂತರಿಕ ಬಯಕೆ ಯೇಸು ಕ್ರಿಸ್ತನಿಗಿತ್ತು. ಅದು ದೈವೀಕ ಪ್ರೀತಿಯ ಬಯಕೆಯಾಗಿತ್ತು. ಯೋಹಾನ 4:4 ನೋಡಿರಿ. 2 ಕೊರಿಂಥ 5:14 ರೊಂದಿಗೆ ಹೋಲಿಸಿ ನೋಡಿರಿ. 6

**19:6** ಇಸ್ರಾಯೇಲಿನ ಧಾರ್ಮಿಕ ನಾಯಕರು ಮತ್ತು ಬಹುತೇಕ ಜನರು ಈ ಕಾರ್ಯವನ್ನು ಮಾಡದವರಾಗಿದ್ದರು (ಯೋಹಾನ 1:11). 7

**19:7** 18:9; 15:1-2; ಮತ್ತಾಯ 9:10-13; 11:19 ರೊಂದಿಗೆ ಹೋಲಿಸಿ ನೋಡಿರಿ. 8

**19:8** ಜಕ್ಕಾಯನು ಆ ದಿನ ಹೊಸ ಯಜಮಾನನನ್ನು ಆರಿಸಿಕೊಂಡನು ಮತ್ತು ಆತನನ್ನು "ಕರ್ತನೇ" ಎಂದು ಕರೆದನು. ಆ ದಿನದ ತನಕ ಹಣ ಅವನ ಯಜಮಾನನಾಗಿತ್ತು (16:13). ದೇವರ ರಾಜ್ಯದೊಳಗೆ ಸೇರಿದ ಕೆಲವೇ ಕೆಲವು ಐಶ್ವರ್ಯವಂತರಲ್ಲಿ ಇವನೂ ಒಬ್ಬನಾಗಿದ್ದಾನೆ (18:24-25), ಅಲ್ಲದೆ 12:16 ರಲ್ಲಿ ಹೇಳಲಾಗಿರುವ ಬುದ್ಧಿಯಿಲ್ಲದ ಐಶ್ವರ್ಯವಂತನು, 16:19 ರಲ್ಲಿ ಹೇಳಲಾಗಿರುವ ಐಶ್ವರ್ಯವಂತನು ಮತ್ತು 18:23 ರ ಐಶ್ವರ್ಯವಂತನಾಗಿದ್ದ ಯೌವನಸ್ಥ ಅಧಿಕಾರಿಗಿಂತ ಹೆಚ್ಚು ವ್ಯತ್ಯಾಸವುಳ್ಳವನಾಗಿದ್ದಾನೆ. ಆದರೆ ಇವನು ಯೇಸು ಕ್ರಿಸ್ತನಿಗೆ ಕರ್ತನೇ ಎಂದು ಕರೆದ ಮಾತ್ರಕ್ಕೆ ದೇವರ ರಾಜ್ಯಕ್ಕೆ ಬಾಧ್ಯಸ್ಥನಾಗಲಿಲ್ಲ (ಮತ್ತಾಯ 7:21). ತನ್ನ ಕ್ರಿಯೆಯ ಮೂಲಕ ಆತನಲ್ಲಿ ತನಗೆ ನಿಜವಾದ ನಂಬಿಕೆ ಇದೆ ಎಂಬದನ್ನು ಅವನು ಪ್ರಕಟಪಡಿಸಿದನು. ಅನೇಕ ಮಾಡಲು ಬಯಸದ ಕಾರ್ಯವನ್ನು ಜಕ್ಕಾಯನು ಮಾಡಿದನು (16:14; ಮತ್ತಾಯ 19:21-24). ಅವನ ಹೃದಯದಲ್ಲಿ ದೇವರು ಕಾರ್ಯ ಮಾಡುತ್ತಿದ್ದಾನೆ ಎಂಬದಕ್ಕೆ ಇದುವೇ ಸಾಕ್ಷಿಯಾಗಿದೆ.

*"ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳಕೊಂಡದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ"*– ಯಾಜಕ 6:1-5; ಸಂಖ್ಯಾ 5:5-7 ನೋಡಿರಿ. ಧರ್ಮಶಾಸ್ತ್ರ ಬೇಡುವದಕ್ಕಿಂತ ಹೆಚ್ಚಿನದನ್ನು ಕೊಡಲು ಜಕ್ಕಾಯನು ಬಯಸುವವನಾಗಿದ್ದನು. ಇದರ ಮೂಲಕ ಅವನು ಪಶ್ಚಾತ್ತಾಪದ ಫಲಗಳನ್ನು ತೋರಿಸಿದನು (ಮತ್ತಾಯ 3:8 ರ ನೋಟ್

ನೋಡಿರಿ). ಪಶ್ಚಾತ್ತಾಪವು ವಿಷಯಗಳ ಕುರಿತು ನಮ್ಮಲ್ಲಾಗುವ ಮಹತ್ವದ ಬದಲಾವಣೆಯಾಗಿದೆ. ಇಂದು ಸಭೆಯಲ್ಲಿಯೂ ಅನೇಕರು ಅನ್ಯಾಯ ಹಾಗೂ ವಕ್ರ ಮಾರ್ಗಗಳ ಮೂಲಕ ಆಸ್ತಿ ಅಥವಾ ಹಣ ಸಂಪಾದನೆ ಮಾಡುವವರಾಗಿದ್ದಾರೆ. ಆದರೆ ಸಿಕ್ಕಿಕೊಳ್ಳುವಾಗ ತಾವು ತೆಗೆದುಕೊಂಡಿರುವದನ್ನು ಹಿಂದಿರುಗಿಸದೆ ಎಲ್ಲರೂ ತಮ್ಮನ್ನು ಕ್ಷಮಿಸಬೇಕು ಹಾಗೂ ಅಂಗೀಕರಿಸಿಕೊಳ್ಳಬೇಕು ಎಂಬದಾಗಿ ಬಯಸುತ್ತಾರೆ. ಅವರು ತಮ್ಮನ್ನು ದೇವಜನರೆಂದು ಗುರುತಿಸಬೇಕಾಗಿ ಬಯಸುತ್ತಾರೆ ಮತ್ತು ಅದೇ ಸಮಯದಲ್ಲಿ ವಕ್ರಮಾರ್ಗದಿಂದ ದೊರೆಯುವ ಬೌತಿಕ ಲಾಭಗಳನ್ನು ಅನುಭವಿಸಲು ಬಯಸುತ್ತಾರೆ! ಇಂಥ ಮನೋಭಾವನೆಯು ನಿಜವಾದ ಪಶ್ಚಾತ್ತಾಪವನ್ನು ತೋರಿಸುವದಿಲ್ಲ, ಅದರ ವಿಷಯದಲ್ಲಿ ಜನರ ಅಭಿಪ್ರಾಯ ಏನೇ ಇದ್ದರೂ ದೇವರು ಅದನ್ನು ಅಂಗೀಕರಿಸಿಕೊಳ್ಳುವದಿಲ್ಲ. ವಿಶ್ವಾಸಿಗಳು ತಮ್ಮಿಂದ ಇತರರಿಗೆ ಅನ್ಯಾಯವಾಗಿದ್ದರೆ ಅದಕ್ಕೆ ತಕ್ಕ ಪರಿಹಾರ ಕೊಡಬೇಕಾದದ್ದು ಅತ್ಯಂತ ಪ್ರಾಮುಖ್ಯವಾದದ್ದಾಗಿದೆ. 9

**19:9** ಒಬ್ಬ ವ್ಯಕ್ತಿಯಲ್ಲಾಗುವ ದೊಡ್ಡ ಬದಲಾವಣೆ ಅಂದರೆ ಅವನನ್ನು ಪಾಪದಿಂದ ರಕ್ಷಣೆಗೆ ನಡೆಸುವದು ಮತ್ತು ಮರಣದಿಂದ ಜೀವಕ್ಕೆ ನಡೆಸುವದು, ಕೂಡಲೇ ಸಂಭವಿಸುತ್ತದೆ (ಯೋಹಾನ 5:24). ರಕ್ಷಣೆಯ ಕುರಿತಾದ ನೋಟ್ಸ್ ಅಪೊ 4:12; ರೋಮಾ 1:16ರಲ್ಲಿ ನೋಡಿರಿ. ಜಕ್ಕಾಯನು "ಅಬ್ರಹಾಮನ ವಂಶಿಕನು" ಎಂಬದಾಗಿ ಯೇಸು ಕ್ರಿಸ್ತನು ಹೇಳಿರುವ ಮಾತಿನ ಅರ್ಥ, ಜಕ್ಕಾಯನು ಕೇವಲ ವಂಶಿಕನಲ್ಲ ಬದಲಾಗಿ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರೆಲ್ಲರಿಗೆ "ತಂದೆಯಾಗಿರುವ" ಅಬ್ರಹಾಮನ ನಿಜವಾದ ಮಗನು ಎಂದು ಹೇಳಿದನು (ಆದಿ 15:6; ರೋಮಾ 4:11,16). ಮತ್ತು ಜಕ್ಕಾಯನು ತನ್ನ ಜೀವಿತದ ಫಲಗಳ ಮೂಲಕ, ತಾನು ನಂಬಿದವನು ಎಂಬದನ್ನು ನಿರೂಪಿಸಿದನು. ಒಂದುವೇಳೆ ಈ ಫಲಿತಾಂಶಗಳು ಇಲ್ಲದಿರುವವರು ನಿಜವಾಗಿಯೂ ಕ್ರಿಸ್ತನನ್ನು ನಂಬಿದ್ದಾರೆಯೇ ಎಂದು ನಾವು ಪ್ರಶ್ನಿಸಬಹುದು. 10

**19:10** *"ಮನುಷ್ಯಕುಮಾರನು"*– ಮತ್ತಾಯ 8:20 ರಲ್ಲಿ ನೋಟ್ ನೋಡಿರಿ. ಆತನು ಈ ಲೋಕಕ್ಕೆ ಯಾಕೆ ಬಂದನು ಎಂಬ ಪ್ರಮುಖ ಕಾರಣವನ್ನು ಇಲ್ಲಿ ತಿಳಿಸಿದ್ದಾನೆ (ಯೋಹಾನ 3:16-17 ರೊಂದಿಗೆ ಹೋಲಿಸಿ ನೋಡಿರಿ). ಹಾಗೆಯೇ ಮತ್ತಾಯ 5:17 ರಲ್ಲಿರುವ ರೆಫರೆನ್ಸಸ್ ನೋಡಿರಿ.

*"ಕೆಟ್ಟುಹೋಗಿರುವದು"*– 15:4-10,32; ಯೋಹಾನ 3:16. ಕೆಟ್ಟುಹೋಗಿರುವದೆಂದರೆ

ದೇವರಿಂದ ದೂರವಾಗಿರುವದು, ನಾಶನಕ್ಕೆ ನಡೆಸುವ ಅಗಲವಾದ ಮಾರ್ಗದಲ್ಲಿರುವದಾಗಿದೆ (ಯೆಶಾಯ 53:6; ಮತ್ತಾಯ 7:13; ಎಫೆ 4:18). ಒಂದುವೇಳೆ ಯೇಸು ಕ್ರಿಸ್ತನು ಕೆಟ್ಟುಹೋಗಿರುವ ಮನುಷ್ಯರನ್ನು ಹುಡುಕಿ ರಕ್ಷಿಸದೆ ಹೋದರೆ ಅವರು ರಕ್ಷಣೆ ಹೊಂದುವ ಸಾಧ್ಯತೆಯೇ ಇಲ್ಲ. ಅವರು ತಾವಾಗಿಯೇ ನಿಜವಾದ ದೇವರನ್ನು ಎಂದಿಗೂ ಹುಡುಕಲಾರರು (ರೋಮಾ 3:11). **11-27**

**19:11-27** ಈ ಸಾಮ್ಯದಲ್ಲಿ ಕೆಲವು ರೀತಿಯಲ್ಲಿ ಮತ್ತಾಯ 25:14-30 ರಲ್ಲಿ ಹೇಳಲಾಗಿರುವ ಸಾಮ್ಯಕ್ಕೆ ಸಮಾನವಾಗಿದೆ ಆದರೆ ಬೇರೆ ರೀತಿಯಲ್ಲಿ ವ್ಯತ್ಯಸ್ಥವಾಗಿದೆ. ವಿವಿಧ ಸಮಯ ಹಾಗೂ ಸ್ಥಳಗಳಲ್ಲಿ ಇವುಗಳನ್ನು ಹೇಳಲಾಗಿದೆ. **11**

**19:11** *"ದೇವರ ರಾಜ್ಯ"*– ಮತ್ತಾಯ 4:17. ಕರ್ತನಾದ ಯೇಸು ಕ್ರಿಸ್ತನು ತನ್ನನ್ನು ಇಸ್ರಾಯೇಲಿನ ಅರಸನಾದ ಮೆಸ್ಸೀಯನೆಂದು ಬಹಿರಂಗವಾಗಿ ಪ್ರಕಟಪಡಿಸಿಕೊಳ್ಳುವನು, ನಂತರ ರೋಮನ್ ಸರ್ಕಾರದ ನೊಗವನ್ನು ಬಿಸಾಡುವನು ಮತ್ತು ಇಸ್ರಾಯೇಲಿನ ಅಧಿಕಾರ ಹಾಗೂ ಪ್ರಭಾವವನ್ನು ಪುನರ್ ಸ್ಥಾಪಿಸುವನು ಎಂಬದಾಗಿ ಜನರು ಅಂದುಕೊಂಡಿದ್ದರು. ಆದರೆ ಯೇಸು ಕ್ರಿಸ್ತನು ಹೇಳುತ್ತಿರುವದು ಅಂಥ ಕಾರ್ಯ ಆಗುವದೇ ಇಲ್ಲ. ಬದಲಾಗಿ ನಾನು ಹೊರಟುಹೋಗುತ್ತೇನೆ (ವ 12), ಮತ್ತು ಇಸ್ರಾಯೇಲ್ ನನ್ನನ್ನು ಅರಸನನ್ನಾಗಿ ಹೊಂದಲು ನಿರಾಕರಿಸುವದು (ವ 14). ಆದರೂ ನಾನು ಹಿಂದಿರುಗಿ ಬರುತ್ತೇನೆ (ವ 15). ಆ ಸಮಯದಲ್ಲಿ ನನ್ನ ಸೇವಕರು ಕೆಲಸ ಮಾಡಬೇಕು (ವ 13) ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ. **12**

**19:12** ಕರ್ತನಾದ ಯೇಸು ಕ್ರಿಸ್ತನು ಗಣ್ಯವಾದ ಜನನ ಹೊಂದಿದನು! 1:35; ಮತ್ತಾಯ 1:1 ನೋಡಿರಿ. ಆಗಿನ ಯೂದಾಯದಲ್ಲಿ ಒಬ್ಬ ವ್ಯಕ್ತಿ ಅರಸನಾಗಿ ನೇಮಕಗೊಳ್ಳಬೇಕಾದರೆ ಅನೇಕ ಕಾರ್ಯಗಳು ನಡೆಯಬೇಕಾಗಿತ್ತು. ಹೆರೋದರು ರೋಮ್ ಗೆ ಹೋಗುತ್ತಿದ್ದರು ಮತ್ತು ತಮ್ಮ ಅಧಿಕಾರವನ್ನು ಅಲ್ಲಿ ಪಡೆಯುತ್ತಿದ್ದರು. ಕರ್ತನಾದ ಯೇಸು ಕ್ರಿಸ್ತನಿಗೆ ರೋಮ್ ನಿಂದ ಅಲ್ಲ ಬದಲಾಗಿ ಪರಲೋಕದಿಂದ ಅಧಿಕಾರವು ದೊರೆಯಿತು (ಮತ್ತಾಯ 28:18; ಯೋಹಾನ 17:2; ಅಪೊ 2:33-36; ಫಿಲಿಪ್ಪಿ 2:9-11; 1 ಪೇತ್ರ 3:22). ಆತನು ಹಿಂದಿರುಗಿ ಬರುವನು ಆದರೆ ಅದು ಆತನ ಸಮಯದಲ್ಲಾಗುವದು (ಮತ್ತಾಯ 16:27; ಅಪೊ 1:22). **13**

**19:13** *"ಸೇವಕರು"*– ಕ್ರಿಸ್ತನ ಸೇವಕರೆಂಬ ಕರೆಯಲ್ಪಡುವವರೆಲ್ಲರನ್ನು ಸೂಚಿಸುತ್ತದೆ (ರೋಮಾ 6:16-22), ಆತನಲ್ಲಿ ನಂಬಿಕೆಯುಳ್ಳವರಾಗಿ ಜೀವಿಸುವವರನ್ನು ಸೂಚಿಸುತ್ತದೆ. "ಶ್ರೀಮಂತನಾದ ಮನುಷ್ಯನು" ಪ್ರತಿಯೊಬ್ಬನಿಗೂ "ಒಂದು ಮೊಹರಿ" ಹಣವನ್ನು ಕೊಟ್ಟನು. ಗ್ರೀಕ್ ನಲ್ಲಿ ಮೊಹರಿಯನ್ನು "ಮಿನ" –ಎಂದು ಕರೆಯಲಾಗುತ್ತದೆ. ಇದು ಒಬ್ಬ ಕೆಲಸದವನ ಮೂರು ತಿಂಗಳ ಸಂಬಳಕ್ಕೆ ಸಮಾನವಾದದ್ದಾಗಿದೆ. ಮತ್ತಾಯ 25:14-30 ರಲ್ಲಿ ಹೇಳಲಾಗಿರುವ ಸಾಮ್ಯದಲ್ಲಿ, ಸೇವಕರಿಗೆ ಇದಕ್ಕಿಂತ ಹೆಚ್ಚಿನದಾಗಿ ಮತ್ತು ಒಬ್ಬೊಬ್ಬನಿಗೆ ಒಂದೊಂದು ರೀತಿಯ ಮೊತ್ತವನ್ನು ಕೊಡಲಾಗಿದೆ. ಕೆಲವು ವಿಷಯಗಳಲ್ಲಿ ದೇವರ ಸೇವಕರೆಲ್ಲರೂ ವಿಭಿನ್ನರಾಗಿರುತ್ತಾರೆ, ಕೆಲವು ವಿಷಯಗಳಲ್ಲಿ ಸಮಾನರಾಗಿರುತ್ತಾರೆ. ಅವರ ನಂಬಿಗಸ್ತಿಕೆಯನ್ನು ಎಲ್ಲಾ ವಿಷಯಗಳಲ್ಲಿಯೂ ಪರೀಕ್ಷಿಸಲಾಗುತ್ತದೆ – 16:10; 1 ಕೊರಿಂಥ 4:2.

*"ವ್ಯಾಪಾರ"*– "ತೊಡಗಿಸಿಕೊಳ್ಳುವಿಕೆ" – ಅಂದರೆ ನಿಮ್ಮನ್ನು ವ್ಯಾಪಾರದಲ್ಲಿ ತೊಡಗಿಸಿಕೊಳ್ಳಿರಿ. **14**

**19:14** ಈ ಘಟನೆಯು ಅರ್ಕೆಲಾಯನು ಎಂಬ ವ್ಯಕ್ತಿಯ ಜೀವಿತದಲ್ಲಿ ಮೂವರು ವರ್ಷಗಳ ಹಿಂದೆ ನಡೆದಿತ್ತು. ಆದರೆ ಸಾಮ್ಯವು ಕರ್ತನಾದ ಯೇಸು ಕ್ರಿಸ್ತನನ್ನು ಸೂಚಿಸುತ್ತದೆ – ಅವನು ಯೇಸು ಕ್ರಿಸ್ತನು ಅರಸನಾಗುವದು ಬೇಡ ಎಂದು ಯೆಹೂದ್ಯರು ರೋಮನ್ನರಿಗೆ ಹೇಳಿದರು (ಯೋಹಾನ 19:13-16) ಮತ್ತು ಇದಾದ ನಂತರ ಬಹುತೇಕರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಲೇ ಇಲ್ಲ (1 ಥೆಸ 2:14-16). **15**

**19:15** ಕರ್ತನಾದ ಯೇಸು ಕ್ರಿಸ್ತನು ಬಹಿರಂಗವಾಗಿ ಅರಸನೆಂದು ಪ್ರಕಟಿಸಲ್ಪಡುವನು ಮತ್ತು ಪ್ರಭಾವದಲ್ಲಿ ಹಿಂದಿರುಗುವನು ಮತ್ತು ಲೋಕದಲ್ಲಿರುವ ಯಾವ ಶಕ್ತಿಯೂ ಅದನ್ನು ತಡೆಯಲಾರದು (ಪ್ರಕ 11:15; 19:11-16). ನಂತರ ಕ್ರಿಸ್ತನು ತನ್ನ ಸೇವಕರನ್ನು ನ್ಯಾಯವಿಚಾರಿಸುವನು – 1 ಕೊರಿಂಥ 3:12-15; 2 ಕೊರಿಂಥ 5:10; ಪ್ರಕ 11:18. **16**

**19:16** ಆತನು ದೀನತೆಯಿಂದ ತನ್ನ ಯಶಸ್ಸನ್ನು "ಮೊಹರಿಗೆ" ಸಲ್ಲಿಸಿದನೆ ಹೊರತು ತನಗೆ ತೆಗೆದುಕೊಳ್ಳಲಿಲ್ಲ. 17:10 ರೊಂದಿಗೆ ಹೋಲಿಸಿ ನೋಡಿರಿ. **17**

**19:17** 16:10 ನೋಡಿರಿ. ಅತ್ಯಂತ ಸಣ್ಣ ವಿಷಯದಲ್ಲಿ ಅವನು ತನ್ನನ್ನು ಸಾಬೀತುಪಡಿಸಿಕೊಂಡನು. ಅವನು ಸಣ್ಣ ವಿಷಯದಲ್ಲಿ ತೋರಿದ ಆಸಕ್ತಿಯ ನಿಮಿತ್ತ ಅವನಿಗೆ

ದೊರೆತ ಬಹುಮಾನವು ಅತ್ಯಂತ ವಿಶೇಷವಾದದ್ದಾಗಿತ್ತು. ದೇವರು ತನಗೆ ನಂಬಿಗಸ್ತರಾಗಿದ್ದವರನ್ನು ಸನ್ಮಾನಿಸುವಾಗ, ಅವರು ಸಣ್ಣ ಕಾರ್ಯಗಳನ್ನೇ ಮಾಡಿದ್ದರೂ ದೊಡ್ಡ ಬಹುಮಾನಗಳನ್ನು ಹೊಂದುತ್ತಾರೆ (ಮತ್ತಾಯ 10:42 ರೊಂದಿಗೆ ಹೋಲಿಸಿ ನೋಡಿರಿ). "ಗ್ರಾಮಗಳು" ದೇವರ ರಾಜ್ಯ ಭೂಲೋಕದಲ್ಲಿ ಪ್ರಕಟಗೊಳ್ಳುವಾಗ ದೊರೆಯುವ ಘನತೆ ಮತ್ತು ಅಧಿಕಾರದ ಸ್ಥಾನವನ್ನು ಸೂಚಿಸುತ್ತವೆ. 22:30; ಮತ್ತಾಯ 19:28; ಪ್ರಕ 3:21; 20:6 ರೊಂದಿಗೆ ಹೋಲಿಸಿ ನೋಡಿರಿ. **18**

**19:18** ಪ್ರತಿಯೊಬ್ಬ ಸೇವಕನಿಗೆ ಸಮಾನವಾಗಿ ಹಣವನ್ನು ಕೊಡಲಾಗಿದ್ದು, ಅವರೆಲ್ಲರನ್ನು ಸಮಾನವಾಗಿ ಪರೀಕ್ಷಿಸಲಾಯಿತು ಎಂಬದನ್ನು ಸೂಚಿಸುತ್ತದೆ. ಈ ವ್ಯಕ್ತಿ ಮತ್ತು ಮೊದಲನೆಯ ಸೇವಕನು ಸಾಧಿಸಿದ ಫಲಿತಾಂಶದಲ್ಲಿ ಮಾತ್ರ ನಾವು ಯಾಕೆ ವ್ಯತ್ಯಾಸವನ್ನು ನೋಡುತ್ತೇವೆ? ಮೊದಲನೆಯದವನು ಕಠಿಣ ಪರಿಶ್ರಮ ಹಾಕಿರುವ ಸಾಧ್ಯತೆಗಳು ಬಹಳ ಇವೆ. 1 ಕೊರಿಂಥ 15:10; ಕೊಲೊ 1:29; 3:23; 4:13 ರೊಂದಿಗೆ ಹೋಲಿಸಿ ನೋಡಿರಿ. ರೋಮಾ 16:3-12 ರಲ್ಲಿ ಕೆಲಸ ಮಾಡಿದ, ಕಠಿಣವಾಗಿ ಕೆಲಸ ಮಾಡಿದ ಮತ್ತು ಪರಿಶ್ರಮದಿಂದ ಕಠಿಣವಾಗಿ ಕೆಲಸ ಮಾಡಿದ ವಿಶ್ವಾಸಿಗಳ ಪಟ್ಟಿಯನ್ನು ನೋಡಿರಿ. **19**

**19:19** ಇವನ ಪರಿಶ್ರಮ ಮತ್ತು ಸಾಧನೆಗಳು ಮೊದಲನೆಯವನಷ್ಟು ಮಹತ್ವವಾಗಿರಲಿಲ್ಲ ಆದ್ದರಿಂದಲೇ ಇವನ ಬಹುಮಾನವೂ ಮಹತ್ವವಾಗಿರಲಿಲ್ಲ (ಪ್ರಕ 22:12 ನೋಡಿರಿ). ಆದರೂ ಅಂಥ ಸಣ್ಣ ಕಾರ್ಯಕ್ಕೆ ಅವನಿಗೆ ದೊರೆತ ಬಹುಮಾನ ದೊಡ್ಡದಾಗಿತ್ತು. **20-26**

**- 19:20-26** ಮತ್ತಾಯ 25:24-30. **22**

**19:22** ಮತ್ತಾಯ 25:26 ಹೇಳುವದೇನೆಂದರೆ ಅಲ್ಲಿನ ಸೇವಕನು ಸೋಮಾರಿಯಾಗಿದ್ದನು ಮತ್ತು ದುಷ್ಟನಾಗಿದ್ದನು, ಇಲ್ಲಿಯೂ ಇದು ಸತ್ಯವಾಗಿದೆ. ಈ ಸೇವಕನು ಸೋಮಾರಿಯಾಗಿರಬಹುದು ಆದ್ದರಿಂದಲೇ ತನ್ನ ಯಜಮಾನನ ಆಜ್ಞೆಗೆ ಅವಿಧೇಯನಾದನು (ವ 13) ಅಥವಾ ಅವನಿಗೆ ದುಡಿಯುವ ಅಸಕ್ತಿಯಿದ್ದರೂ ತನಗಾಗಿ ದುಡಿಯಬೇಕೆಂದು ಮಾತ್ರವೇ ಬಯಸಿರಬಹುದು. ದೇವರು ವಿಶ್ವಾಸಿಗಳೆಲ್ಲರನ್ನೂ ತನ್ನ ಸೇವೆಗಾಗಿ ಕರೆದಿದ್ದಾನೆ. ಆದರೆ ಕರೆಯಲ್ಪಟ್ಟಿರುವ ಅನೇಕ ಕ್ರೈಸ್ತರು ತಮ್ಮ ಎಲ್ಲಾ ಕಾರ್ಯಗಳನ್ನು ಮಾಡುವವರಾಗಿದ್ದಾರೆ (ಫಿಲಿಪ್ಪಿ 2:21). ಸೋಮಾರಿಗಳು ದೇವರ ಆಜ್ಞೆಯ ವಿಷಯಗಳಲ್ಲಿ ವ್ಯತ್ಯಾಸವಾಗಿ ನಡೆದುಕೊಳ್ಳುತ್ತಾರೆ ಮತ್ತು ತಮ್ಮ ಕಾರ್ಯಗಳಿಗೆ ಮಾತ್ರವೇ

ಹೆಚ್ಚಿನ ಆದ್ಯತೆಯನ್ನು ಕೊಡುತ್ತಾರೆ-ಇವರು ಖಂಡಿತವಾಗಿಯೂ ಅವಿಧೇಯತೆಯುಳ್ಳವರಾಗಿದ್ದಾರೆ (1 ಸಮು 15:22-23). ಈ ವ್ಯಕ್ತಿ ಮಾಡಿದ ಕಾರ್ಯಕ್ಕಾಗಿಯಲ್ಲ ಬದಲಾಗಿ ಮಾಡದಿರುವ ಕಾರ್ಯಕ್ಕಾಗಿ ಈತನನ್ನು ವಿಚಾರಿಸಲಾಯಿತು ಎಂಬದನ್ನು ನಾವು ಗಮನಿಸಬೇಕು. ಮತ್ತಾಯ 25:41-46 ರೊಂದಿಗೆ ಹೋಲಿಸಿ ನೋಡಿರಿ. **27**

**19:27** ಆತನನ್ನು ಅರಸನನ್ನಾಗಿ ನಿರಾಕರಿಸುವ ಮೂಲಕ ಇವರು ಆತನ ವೈರಿಗಳೆಂದು ತೋರ್ಪಡಿಸಿಕೊಂಡರು. ಈಗಲೂ ಅನೇಕರು ಹಾಗೆಯೇ ಮಾಡುತ್ತಿದ್ದಾರೆ. ಕರ್ತನಾದ ಯೇಸು ಕ್ರಿಸ್ತನನ್ನು ತಮ್ಮ ಜೀವಿತಗಳ ರಕ್ಷಕನು ಹಾಗೂ ಅರಸನನ್ನಾಗಿ ಅಂಗೀಕರಿಸಿಕೊಳ್ಳಲು ನಿರಾಕರಿಸುವ ಮೂಲಕ ಮಾನವರು ಆತನ ಮೇಲೆ ತಮಗಿರುವ ಹಗೆಯನ್ನು ತೋರಿಸುತ್ತಿದ್ದಾರೆ (ಯೋಹಾನ 1:11; 3:19-20; 15:18; ರೋಮಾ 8:7). ಈ ವಾಕ್ಯದ ಕಡೆಯ ಭಾಗ ಹೇಳುವದನ್ನು ಗಮನಿಸಿದರೆ ನ್ಯಾಯವಿಚಾರಣೆಯ ದಿನದಲ್ಲಿ ಅವರ ಸ್ಥಿತಿ ಬಹಳ ಗಂಭೀರವಾಗಿರುತ್ತದೆ. 2 ಥೆಸ 1:7-10; ಪ್ರಕ 19:11-16 ರೊಂದಿಗೆ ಹೋಲಿಸಿ ನೋಡಿರಿ. **28-38**

- **19:28-38** ಮತ್ತಾಯ 21:1-9. **32-34**
- **19:32-34** ಮಾರ್ಕ 11:4-6. **38**

**19:38** 2:14 ನೋಡಿರಿ. **39**

**19:39** ಮತ್ತಾಯ 21:15-16 ರೊಂದಿಗೆ ಹೋಲಿಸಿ ನೋಡಿರಿ. **40**

**19:40** ಸಂದರ್ಭವು ಎಷ್ಟು ಮಹತ್ತರವಾಗಿರುತ್ತದೆ ಎಂದರೆ ಯಾವುದಾದರು ಮೂಲದಿಂದ ಉತ್ಸಾಹದ ಸ್ತುತಿಯು ಘೋಷವು ಕೇಳಿಸುವಂತೆ ದೇವರು ಮಾಡುತ್ತಾನೆ. **41**

**19:41** ಶಿಲುಬೆಯ ಮರಣ ಮತ್ತು ಶ್ರಮೆಗಳು ಆತನಿಗಾಗಿ ಅಲ್ಲಿ ಕಾಯುತ್ತಿದ್ದವು, ಆದರೆ ಆತನು ತನಗಾಗಿ ಕಣ್ಣೀರಿಡಲಿಲ್ಲ. ಆತನನ್ನು "ಕಣ್ಣೀರಿನ ಮನುಷ್ಯನು" (ಯೆಶಾಯ 53:3) ಎಂದು ಕರೆಯಲಾಗಿದೆ, ಆದರೆ ಆತನು ಇತರರ ದುಸ್ಥಿತಿಗಾಗಿ ಕಣ್ಣೀರಿಡುತ್ತಿದ್ದನು. **42**

**19:42** ಅವರು ಪಶ್ಚಾತ್ತಾಪಪಟ್ಟು ಯೇಸು ಕ್ರಿಸ್ತನನ್ನು ತಮ್ಮ ಮೆಸ್ಸೀಯ ಹಾಗೂ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿದ್ದರೆ ಅವರಿಗೆ ಸಮಾಧಾನ ದೊರೆಯುತ್ತಿತ್ತು ಆದರೆ ದೇವರು ಅವರ ದುಷ್ಟತನಕ್ಕಾಗಿ ಅವರನ್ನು ಶಿಕ್ಷಿಸುತ್ತಿದ್ದನು ಮತ್ತು ಅವರನ್ನು ಮಂಕುತನದಲ್ಲಿ

ಇರಿಸುವಂಥದ್ದು ಶಿಕ್ಷೆಯ ಒಂದು ಭಾಗವಾಗಿತ್ತು. ಮತ್ತಾಯ 11:25; 13:11-16; ಯೋಹಾನ 9:41 ರೊಂದಿಗೆ ಹೋಲಿಸಿ ನೋಡಿರಿ. **43-44**

**19:43-44** 24:2; 21:6,20,24; ಮತ್ತಾಯ 24:2 ನೋಡಿರಿ. ಇದು ಕ್ರಿ.ಶ 70 ರಲ್ಲಿ ಸಂಭವಿಸಿತು. ರೋಮನ್ ಸೈನ್ಯ ಬಂದು ಯೆರೂಸಲೇಮನ್ನು ಹಾಳುಮಾಡಿತು. ದೇವರು ಯೇಸು ಕ್ರಿಸ್ತನಾಗಿ ಈ ಲೋಕಕ್ಕೆ ಬಂದನು ಆದರೆ ಯೆರೂಸಲೇಮಿನ ಜನರು ಆತನನ್ನು ಘೋರ ಅಪರಾಧಿಯಂತೆ ಕಂಡರು. ದೇವರ ನ್ಯಾಯತೀರ್ಪು ಅವರ ಮೇಲೆ ಸ್ವಾಗತಾರ್ಹವಾಗಿತ್ತು. **45-46**

- **19:45-46** ಮತ್ತಾಯ 21:12-16. **47**

- **19:47** 22:2; ಮತ್ತಾಯ 12:14; 26:4; ಯೋಹಾನ 5:18; 7:1 ನೋಡಿರಿ. **48**

**19:48** 20:19 ನೋಡಿರಿ.

# 20 1-8

- **20:1-8** ಮತ್ತಾಯ 21:23-27. **1**

**20:1** *"ಸುವಾರ್ತೆ"*– 2:10; 4:18; 8:1; 9:6; ಮತ್ತಾಯ 4:23; 9:35; ಮಾರ್ಕ 1:1. **9-19**

- **20:9-19** ಮತ್ತಾಯ 21:33-46. **9**

- **20:9** ಮತ್ತಾಯ 25:19. **13**

- **20:13** ಮತ್ತಾಯ 3:17. **20-26**

- **20:20-26** ಮತ್ತಾಯ 22:15-22. **27-40**

- **20:27-40** ಮತ್ತಾಯ 22:23-33. **35**

**20:35** *"ಆ ಲೋಕ"*– ಅಥವಾ "ಆ ಯುಗ" – ಮುಂಬರುವ ಯುಗ.

*"ಸತ್ತವರೊಳಗಿಂದ ಪುನರುತ್ಥಾನ ಹೊಂದುವವರು"*– "ಸತ್ತವರು ಪುನರುತ್ಥಾನಗೊಳ್ಳುವರು" ಎಂಬದಾಗಿ ಹೇಳುವದಕ್ಕಿಂತ ಇದು ಸೂಕ್ತವಾಗಿರುತ್ತದೆ. "ಸತ್ತವರೊಳಗಿಂದ" ಸೂಚಿಸುವದೇನೆಂದರೆ ಈ ಪುನರುತ್ಥಾನದ ಸಮಯದಲ್ಲಿ, ಸತ್ತರವಲ್ಲಿ

ಕೆಲವರು ಪುನರುತ್ಥಾನಗೊಳ್ಳುವದಿಲ್ಲ (ಅವರು ನಂತರದಲ್ಲಿ ಪುನರುತ್ಥಾನಗೊಳ್ಳುತ್ತಾರೆ-ಪ್ರಕ 20:5). ಹಾಗೆಯೇ ಲೂಕ 14:14; ಫಿಲಿಪ್ಪಿ 3:11 ಸಹ ನೋಡಿರಿ. **36**

**20:36** ದೇವರ ಮಕ್ಕಳು (ಯೋಹಾನ 1:12-13; 1 ಯೋಹಾನ 3:1-2) ಎಂದಿಗೂ ಸಾಯುವದಿಲ್ಲ – ಯೋಹಾನ 5:24,29; 6:50-51; 11:25-26; ಪ್ರಕ 20:6. **37**

- **20:37** ವಿಮೋ 3:2,6. **39**

**20:39** ಫರಿಸಾಯರು ಇದನ್ನು ಹೇಳಿದ್ದಾರೆ ಯಾಕಂದರೆ ಅವರು ಪುನರುತ್ಥಾನವನ್ನು ನಂಬುತ್ತಿದ್ದರು ಮತ್ತು ಸದ್ದುಕಾಯರನ್ನು ವಿರೋಧಿಸುತ್ತಿದ್ದರು. ಅಪೊ 23:6-9 ನೋಡಿರಿ. **40**

- **20:40** ಮತ್ತಾಯ 22:46. **41-44**

- **20:41-44** ಮತ್ತಾಯ 22:41-45. **41**

**20:41** *"ದಾವೀದನ ಮಗನು"*– ಮತ್ತಾಯ 1:1 ರಲ್ಲಿ ನೋಟ್ ನೋಡಿರಿ. **46**

- **20:46** ಮತ್ತಾಯ 23:5-7. **47**

- **20:47** ಮಾರ್ಕ 12:40.

# 21 1-4

- **21:1-4** ಮಾರ್ಕ 12:41-44. **5-36**

**21:5-36** ಮತ್ತಾಯ 24:1-44; ಮಾರ್ಕ 13:1-27 ನೋಡಿರಿ. ಮೂರು ಸುವಾರ್ತೆಗಳಲ್ಲಿ (ಮತ್ತಾಯ ಅಧ್ಯಾಯ 24; ಮಾರ್ಕ ಅಧ್ಯಾಯ 13; ಲೂಕ ಅಧ್ಯಾಯ 21) ಶಿಷ್ಯರ ಪ್ರಶ್ನೆಗೆ ಉತ್ತರವಾಗಿ ಯೆರೂಸಲೇಮಿನಲ್ಲಿ ಸಂಭವಿಸುವ ಘಟನೆಗಳನ್ನು ಯೇಸು ಕ್ರಿಸ್ತನು ತಿಳಿಸಿದನು. ಮತ್ತಾಯ 24:3 ರಲ್ಲಿ ಮೂರು ರೀತಿಯ ಪ್ರಶ್ನೆಗಳಿವೆ, ಆದರೆ ಮಾರ್ಕ 13:4 ಮತ್ತು ಲೂಕ 21:17ರಲ್ಲಿ ಪ್ರಶ್ನೆಗಳು ಯೆರೂಸಲೇಮಿನ ನಾಶನಕ್ಕೆ ಸಂಬಂಧಿಸಿದವುಗಳಾಗಿವೆ ಎಂಬದನ್ನು ತಿಳಿಯಬಹುದು. ಲೂಕನ ಸುವಾರ್ತೆಯಲ್ಲಿ ಕ್ರಿ.ಶ 70 ರಲ್ಲಿ ಸಂಭವಿಸಿದ ಘಟನೆಯ ಬಗ್ಗೆ ಹೆಚ್ಚಾಗಿ ತಿಳಿಸಲಾಗಿದೆ ಮತ್ತು ಮತ್ತಾಯನ

ಸುವಾರ್ತೆಯಲ್ಲಿ ಯೇಸು ಕ್ರಿಸ್ತನ ಎರಡನೇ ಬರೋಣ ಹಾಗೂ ಈ ಯುಗದ ಸಮಾಪ್ತಿಯ ಬಗ್ಗೆ ಹೆಚ್ಚಾಗಿ ತಿಳಿಸಲಾಗಿದೆ. **5**

**- 21:5** ಮಾರ್ಕ 13:1. **7**

**- 21:7** ಮತ್ತಾಯ 24:3. **8**

**21:8** ಅವರು ನಾವೇ ಕ್ರಿಸ್ತನು ಎಂಬದಾಗಿ ಹೇಳುವರು ಮತ್ತು ಯುಗದ ಸಮಾಪ್ತಿಯು ಹತ್ತಿರವಾಗಿದೆ ಎಂದು ತಿಳಿಯಬಹುದು. **12-15**

**- 21:12-15** ಮತ್ತಾಯ 10:17-20; ಅಪೊ 6:9-10. **16-19**

**- 21:16-19** ಮತ್ತಾಯ 10:21-22,30,31. **20-24**

**21:20-24** ಮತ್ತಾಯ 24:15-21 ಒಂದೇ ಆಗಿದೆ. ಆದರೆ ಮತ್ತಾಯ ಸುವಾರ್ತೆಯಲ್ಲಿ "ಹಾಳುಮಾಡುವ ಅಸಹ್ಯ ವಸ್ತುವಿನೊಂದಿಗೆ" ಪ್ರಾರಂಭವಾಗುತ್ತದೆ ಮತ್ತು ಮುಖ್ಯ ವಿಷಯವು "ಮಹಾಸಂಕಟಕಾಲವಾಗಿದೆ (ವ 21). ಮತ್ತು ಯೇಸು ಕ್ರಿಸ್ತನು ಭೂಲೋಕಕ್ಕೆ ಹಿಂದಿರುಗಿದ ಕೂಡಲೇ (ಮತ್ತಾಯ 24:29-30) ಇದಾಗುತ್ತದೆ. ಆದರೆ ಲೂಕನ ಸುವಾರ್ತೆಯಲ್ಲಿ ಸೈನ್ಯಗಳು ಯೆರೂಸಲೇಮನ್ನು ಸುತ್ತುವರೆಯುವದರೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಯೆಹೂದ್ಯರು ಬಂಧನದಲ್ಲಿರುವದು ಹಾಗೂ "ಅನ್ಯದೇಶದವರ ಸಮಯಗಳು" ಮುಖ್ಯ ವಿಷಯವಾಗಿದೆ. ಇನ್ನೊಂದು ಮಾತಿನಲ್ಲಿ ಹೇಳುವದಾದರೆ ಯುಗದ ಸಮಾಪ್ತಿಯ ಸಮಯದಲ್ಲಿ ಸಂಭವಿಸುವ ಘಟನೆಗಳನ್ನು ಮತ್ತಾಯನು ಬರೆದಿದ್ದಾನೆ ಆದರೆ ಲೂಕನು ಕ್ರಿ.ಶ 70 ರಲ್ಲಿ ಯೆರೂಸಲೇಮಿನಲ್ಲಿ ಸಂಭವಿಸಿದ ನಾಶನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಬರೆದಿದ್ದಾನೆ (19:41-44) ನೋಡಿರಿ. ಒಂದು ಮತ್ತೊಂದರ ಸಣ್ಣ ಚಿತ್ರಣವಾಗಿದೆ. **22**

**21:22** *"ಬರೆದಿರುವದೆಲ್ಲಾ"*– ಎಂದರೆ ಹಳೆಯ ಒಡಂಬಡಿಕೆಯಲ್ಲಿ ಬರೆದಿರುವಂಥದ್ದು. **24**

**21:24** ಹಳೆಯ ಒಡಂಬಡಿಕೆಯಲ್ಲಿ ಅಬ್ರಹಾಮನ ದಿವಸಗಳಿಂದ ಮತ್ತು ಭೂಲೋಕದಲ್ಲಿ ಯೇಸು ಕ್ರಿಸ್ತನ ಸಮಯದಲ್ಲಿ, ಇಸ್ರಾಯೇಲ್ ದೇವರ ವಿಶೇಷವಾದ ಜನಾಂಗವಾಗಿತ್ತು, ಆತನ ವಾಕ್ಯದ ಸಾಧನವಾಗಿತ್ತು, ಆತನ ಆತ್ಮೀಕ ಕಾರ್ಯಗಳ ನಿರ್ವಹಣೆಯ ಮುಖ್ಯ ಸಾಧನ, ಬೋಧನೆ ಮತ್ತು ಭೂಮಿಯ ಮೇಲಿನ ಪ್ರಕಟನೆಯಾಗಿತ್ತು. ಇಸ್ರಾಯೇಲ್ಯರು ಯೇಸು

ಕ್ರಿಸ್ತನನ್ನು ತಿರಸ್ಕರಿಸಿದ ನಂತರ ದೇವರು ಭೂಲೋಕದ ಇತರೆ ಜನಾಂಗಗಳ ಕಡೆಗೆ ತಿರುಗಿಕೊಂಡನು (ಅನ್ಯರು) – ಮತ್ತಾಯ 21:43; 28:18-20; ಅಪೊ 28:28; ರೋಮಾ 11:11-14. "ಅನ್ಯದೇಶದವರ ಸಮಯಗಳು" (ಈಗ ಸುಮಾರು 1900 ವರ್ಷಗಳು ಕಳೆದಿವೆ). ಯೇಸು ಕ್ರಿಸ್ತನ ಎರಡನೇ ಬರೋಣದೊಂದಿಗೆ ಇವು ಕೊನೆಗೊಳ್ಳುತ್ತವೆ. 1999 ರಿಂದೀಚೆಗೆ ಯೆರೂಸಲೇಮ್ ಇಸ್ರಾಯೇಲಿನ ಹಿಡಿತದಲ್ಲಿದೆ ಆದರೆ ಮತ್ತೊಮ್ಮೆ ಅನ್ಯರ ಶಕ್ತಿಯು ಅದನ್ನು ವಶಪಡಿಸಿಕೊಳ್ಳುವದು ಮತ್ತು ತನ್ನ ಕಾಲ ಕೆಳಗೆ ಅದನ್ನು ತುಳಿದುಬಿಡುವದು – ಪ್ರಕ 11:2; ಜೆಕರ್ಯ 14:2-4. **25**

**21:25** ಈ ವಾಕ್ಯದೊಂದಿಗೆ "ಅನ್ಯದೇಶದವರ ಸಮಯಗಳು" ಮುಗಿಯುತ್ತದೆ ಮತ್ತು ಈ ಯುಗದ ಸಮಾಪ್ತಿಯು ನಮ್ಮೆದುರಿಗೆ ಕಾಣಿಸಿಕೊಳ್ಳುತ್ತದೆ. 27 ನೇ ವಚನದಲ್ಲಿ ಇದು ಸ್ಪಷ್ಟವಾಗುತ್ತದೆ ಯಾಕಂದರೆ ಯೇಸು ಕ್ರಿಸ್ತನು ಪ್ರಭಾವದೊಡನೆ ಬರುವ ಸಮಯದೊಂದಿಗೆ ಆ ಘಟನೆಗಳನ್ನು ಸೇರಿಸಲಾಗಿದೆ. ಮತ್ತಾಯ 24:29 ರಲ್ಲಿ ನೋಟ್ಸ್ ನೋಡಿರಿ. **26**

- **21:26** ಪ್ರಕ 6:15-17. **27**

- **21:27** ಮತ್ತಾಯ 24:30. **28**

**21:28** ಮತ್ತಾಯ 24:33. ಯುಗದ ಸಮಾಪ್ತಿಯ ಸಮಯದಲ್ಲಿ ಜೀವಿಸುವ ವಿಶ್ವಾಸಿಗಳಿಗೆ ಸಮಯವು ಹತ್ತಿರವಾಗಿದೆ ಎಂಬದು ಗೊತ್ತಾಗುತ್ತದೆ.

*"ಬಿಡುಗಡೆ"*– ಮತ್ತಾಯ 20:28 ರ ನೋಟ್ಸ್ ನೋಡಿರಿ. ಪೌಲನು ರೋಮಾ 8:23 ಮತ್ತು ಫಿಲಿಪ್ಪಿ 3:20-21 ರಲ್ಲಿ ಹೇಳಿರುವ ಅಂತಿಮ ಬಿಡುಗಡೆಯನ್ನೇ ಇದು ಸೂಚಿಸುತ್ತದೆ. **29-33**

- **21:29-33** ಮತ್ತಾಯ 24:32-35. **31**

**21:31** *"ದೇವರ ರಾಜ್ಯ"*– ಮತ್ತಾಯ 4:17. ಇದರ ಅರ್ಥ ದೇವರ ರಾಜ್ಯ ಬಾಹ್ಯದ ಪ್ರಕಟನೆ, ಅರಸನು ಪ್ರಭಾವದಲ್ಲಿ ಹಿಂದಿರುಗುವದು. **32**

**21:32** *"ಸಂತತಿ"*– ಮತ್ತಾಯ 24:34ರ ನೋಟ್ಸ್ ನೋಡಿರಿ. **34-36**

**21:34-36** ಈ ಸೂಚನೆಗಳು ಕ್ರಿ.ಶ 70ರಲ್ಲಿ ಯೆರೂಸಲೇಮಿನ ನಾಶನ ಸಂಭವಿಸುವದಕ್ಕಿಂತ ಮುಂಚೆ ಅಲ್ಲಿ ಜೀವಿಸುತ್ತಿದ್ದವರಿಗೆ ಮತ್ತು ಯುಗದ ಸಮಾಪ್ತಿಯ ಸಮಯದಲ್ಲಿ ಜೀವಿಸುವವರಿಗೆ ಅನ್ವಯಿಸುತ್ತವೆ. ಆದರೆ ಆತನು "ಭೂನಿವಾಸಿಗಳೆಲ್ಲರೂ"

ಎಂಬದಾಗಿ ಹೇಳಿರುವದರಿಂದ (ವ 35) ಬಹುತೇಕ ಯುಗದ ಸಮಾಪ್ತಿಯನ್ನೇ ಸೂಚಿಸುತ್ತಿರಬಹುದು. ಮತ್ತಾಯನ ಸುವಾರ್ತೆಯಲ್ಲಿ ಆತನು ಯುಗದ ಸಮಾಪ್ತಿಯ ಸಮಯದ ದಿವಸಗಳನ್ನು ನೋಹನ ದಿವಸಗಳೊಂದಿಗೆ ಹೋಲಿಸಿದ್ದಾನೆ (ಮತ್ತಾಯ 24:37-39). **36**

**21:36** ಯೆರೂಸಲೇಮಿನ ನಾಶನ ಮತ್ತು ಯುಗದ ಸಮಾಪ್ತಿಯ ಸಮಯದಲ್ಲಿ ಭೂಲೋಕದ ಜನರ ಮೇಲೆ ಬರುವ ದೇವರ ಕೋಪದ ಸಮಯ ಎರಡಕ್ಕೂ ಈ ಮಾತುಗಳು ಅನ್ವಯವಾಗುತ್ತವೆ (ಪ್ರಕಟನೆ 15,16 ಅಧ್ಯಾಯಗಳು). ಅದರಿಂದ ತಪ್ಪಿಸಿಕೊಳ್ಳುವವರು ಅಮಾಯಕರು, ಚಿಂತೆಯಿಲ್ಲದವರು ಮತ್ತು ಪ್ರಾರ್ಥನೆಯಿಲ್ಲದವರಾಗಿರುವದಿಲ್ಲ. ಒಂದುವೇಳೆ ನಾವು ಆತನ ಎದುರಿನಲ್ಲಿ ನಾಚಿಕೆಯಿಲ್ಲದೆ, ದೋಷಾರೋಪವಿಲ್ಲದೆ ನಿಲ್ಲಬೇಕೆಂದು ಬಯಸುವದಾದರೆ ಆತನಿಗೆ ಅಧೀನರಾಗಿ ಜೀವಿಸುವವರಾಗಿರಬೇಕು (1 ಯೋಹಾನ 2:28). **37-38**

**21:37-38** ಕರ್ತನಾದ ಯೇಸು ಕ್ರಿಸ್ತನು ತನ್ನ ಜೀವಿತದ ಕಡೆಯ ದಿವಸಗಳನ್ನು ಈ ರೀತಿಯಾಗಿಯೇ ಜೀವಿಸಿದನು.

# **22**1

- **22:1** ವಿಮೋ 12:1-20; ಯಾಜಕ 23:4-8. **2**

**22:2** *"ಯಾಜಕರು"*– ವಿಮೋ 28:1. **3**

**22:3** ಯೋಹಾನ 13:27. ಹೊಸ ಒಡಂಬಡಿಕೆಯಲ್ಲಿ ದುರಾತ್ಮ ಪೀಡನೆಗೆ ಒಳಗಾಗಿದ್ದ ಅನೇಕರ ಬಗ್ಗೆ ಬರೆಯಲಾಗಿದೆ, ಆದರೆ ಇಸ್ಕರಿಯೋತ ಯೂದನ ವಿಷಯದಲ್ಲಿ ಮಾತ್ರವೇ, ದುರಾತ್ಮಗಳ ಮುಖ್ಯಸ್ಥನಾದ, ಸೈತಾನನೇ ಅವನೊಳಗೆ ಹೊಕ್ಕಿದನು ಎಂದು ಹೇಳಲಾಗಿದೆ. ಇದರ ಅರ್ಥ ಸೈತಾನನು ಯೂದನನ್ನು ತನ್ನ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಸಂಪೂರ್ಣವಾಗಿ ಅವನೊಳಗೆ ಸೇರಿಕೊಂಡನು. ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಲು ನಿರಾಕರಿಸುವವರಲ್ಲಿ ಸೈತಾನನು ತಕ್ಕಮಟ್ಟಿಗೆ ಕಾರ್ಯಮಾಡುತ್ತಾನೆ ಎಂಬದು ಸತ್ಯ ಸಂಗತಿಯಾಗಿದೆ. ಎಫೆ 2:2 ನೋಡಿರಿ, ಅಲ್ಲಿ ಸೈತಾನನನ್ನು

“ವಾಯುಮಂಡಲದ ಅಧಿಪತಿ” ಎಂದು ಕರೆಯಲಾಗಿದೆ. ಸೈತಾನನ ಕುರಿತಾದ ನೋಟ್ಸ್ ಗಾಗಿ 1 ಪೂರ್ವ 21:1; ಮತ್ತಾಯ 4:1-10; ಯೋಹಾನ 8:44; 12:31 ನೋಡಿರಿ. **4-6**

**- 22:4-6** ಮತ್ತಾಯ 26:14-16; ಮಾರ್ಕ 14:10-11; ಜೆಕರ್ಯ 11:12. **7**

**22:7** *“ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುವ ದಿವಸ”*– ಪಂಚಾಶತ್ತಮ ದಿನದೊಂದಿಗೆ ಪ್ರಾರಂಭವಾದ, ಎಂಟು ದಿವಸಗಳ ಅವಧಿಯ ಮೊದಲನೆಯ ದಿನ. **8-13**

**- 22:8-13** ಮಾರ್ಕ 14:12-16; ಮತ್ತಾಯ 26:17-19. **15**

**22:15** ಪಸ್ಕಹಬ್ಬವು ಅವರ ಬಿಡುಗಡೆ ಮತ್ತು ರಕ್ಷಣೆಯನ್ನು ಸೂಚಿಸುತ್ತದೆ. ಅವರು ದೇವಜನರಾದ್ದರಿಂದ ಕ್ರಿಸ್ತನು ಅವರ ನಿಮಿತ್ತ ಯಜ್ಞವಾಗಿ ಅರ್ಪಿತನಾಗುವವನಾಗಿದ್ದರೂ, ಆತನು ಅವರಿಗಾಗಿ ಶ್ರಮೆ ಅನುಭವಿಸಿ ಸಾಯುವ ಸಮಯ ಹತ್ತಿರದಲ್ಲಿದ್ದರೂ ಆತನು ಸಂತೋಷವಾಗಿಯೇ ಅವರೊಂದಿಗೆ ಅದನ್ನು ತಿಂದನು. ಅವರ ಮೇಲೆ ಆತನಿಗಿದ್ದ ಅಪಾರವಾದ ಪ್ರೀತಿ ಅಂಥ ಸಮಯದಲ್ಲಿ ಆತನಿಗೆ ಸಂತೋಷವನ್ನುಂಟು ಮಾಡುವದಾಗಿತ್ತು. ಇಬ್ರಿ 12:2 ರೊಂದಿಗೆ ಹೋಲಿಸಿ ನೋಡಿರಿ. **16**

**22:16** “ದೇವರ ಕುರಿಮರಿಯಾಗಿರುವ” ಯೇಸು ಕ್ರಿಸ್ತನ ತ್ಯಾಗ ಪಸ್ಕ ಹಬ್ಬದ ಆತ್ಮೀಕ ನೆರವೇರುವಿಕೆಯಾಗಿದೆ (1 ಕೊರಿಂಥ 5:7). ಮನುಷ್ಯರಲ್ಲಿ ಮತ್ತು ಮನುಷ್ಯರೊಂದಿಗೆ ಇದು ದೇವರ ರಾಜ್ಯವನ್ನು ಸಾಕಾರಗೊಳಿಸಿತು. ಈಗ ಯುಕ್ತವಾದ ರೀತಿಯಲ್ಲಿ “ಕರ್ತನ ಭೋಜನವನ್ನು” –ಆಚರಿಸುವವರ (1 ಕೊರಿಂಥ 11:23-26) ಅದೃಶ್ಯವಾದ ಆತನ ಪ್ರಸನ್ನತೆಯು ನೆಲೆಯಾಗಿದೆ. ಆತನ ಜನರಿಗೆ ಪ್ರಕಟವಾಗಿರುವ ಯೇಸು ಕ್ರಿಸ್ತನ ಪ್ರಸನ್ನತೆಯು ಈ ಯುಗದ ಸಮಾಪ್ತಿಯ ಸಮಯದಲ್ಲಿ ನೆರವೇರುತ್ತದೆ (ಪ್ರಕಟನೆ 19 ನೇ ಅಧ್ಯಾಯ).

*“ದೇವರ ರಾಜ್ಯ”*– ಮತ್ತಾಯ 4:17. **17-20**

**- 22:17-20** ಮತ್ತಾಯ 26:26-29. **21**

**22:21** ಇದರಿಂದ ನಮಗೆ ದೃಢಪಡುವದೇನೆಂದರೆ ಕರ್ತನಾದ ಯೇಸು ಕ್ರಿಸ್ತನು ಕರ್ತನ ಭೋಜನವನ್ನು ಸ್ಥಾಪಿಸುವಾಗ ಯೂದನು ಅವರ ಜೊತೆಯಲ್ಲಿಯೇ ಇದ್ದನು ಮತ್ತು ಅದನ್ನು ಸೇವಿಸಿದನು. **22**

**- 22:22** ಮತ್ತಾಯ 26:24. **23**

**22:23** ಯೂದನು ಅತ್ಯಂತ ಬುದ್ಧಿಯುಳ್ಳ ಕಪಟಿಯಾಗಿದ್ದನು, ಅದ್ದರಿಂದ ಯಾರಿಗೂ ಅವನ ಮೇಲೆ ಸಂದೇಹವೇ ಬರಲಿಲ್ಲ (ಯೋಹಾನ 13:26-29). **24**

**22:24** ಇದು ಅವರಿಗೆ ಹೊಸ ಜಗಳವೇನೂ ಆಗಿರಲಿಲ್ಲ (9:46; ಮತ್ತಾಯ 18:1; ಮಾರ್ಕ 9:33-34 ನೋಡಿರಿ). ಯೇಸು ಕ್ರಿಸ್ತನು ಶಿಲುಬೆಯ ಮರಣಕ್ಕೆ ಒಳಗಾಗುವ ಸಮಯ ಹತ್ತಿರವಾಗಿರುವಾಗಲೂ ಅವರು ಆತ್ಮೀಕತೆಯಿಲ್ಲದೆ, ಪ್ರಬುದ್ಧತೆಯಿಲ್ಲದೆ ಕಿತ್ತಾಡುತ್ತಿದ್ದರು ಎಂಬದು ನಿಜವಾಗಿಯೂ ಅಘಾತಕಾರಿ ಪ್ರಕಟನೆಯಾಗಿದೆ (ಈ ವಿಷಯದಲ್ಲಿ ನಾವೇ ಅವರಿಗಿಂತ ಉತ್ತಮರು ಎಂಬದಾಗಿ ಅಂದುಕೊಳ್ಳಬಹುದೇ?). **25-26**

**22:25-26** ಮತ್ತಾಯ 20:25-27 ರೊಂದಿಗೆ ಹೋಲಿಸಿ ನೋಡಿರಿ. **27**

- **22:27** ಮತ್ತಾಯ 20:28; ಯೋಹಾನ 13:3-5; ಫಿಲಿಪ್ಪಿ 2:5-7 ನೋಡಿರಿ. **28-29**

**22:28-29** ರೋಮಾ 8:17; 2 ತಿಮೊ 2:12; 1 ಪೇತ್ರ 4:13 ರೊಂದಿಗೆ ಹೋಲಿಸಿ ನೋಡಿರಿ. **30**

- **22:30** ಮತ್ತಾಯ 19:28. **31**

**22:31** ಸೀಮೋನ ಪೇತ್ರನ ಇನ್ನೊಂದು ಹೆಸರು. ಸೈತಾನನ ಉದ್ದೇಶ ಪೇತ್ರನನ್ನು ಮತ್ತು ಇತರೆ ಶಿಷ್ಯರನ್ನು ಅಲುಗಾಡಿಸುವದು, ಗೊಂದಲ್ಲೆ ಒಳಪಡಿಸುವದು ಮತ್ತು ಹಾಳುಮಾಡುವದಾಗಿತ್ತು ("ನೀನು" ಪದಕ್ಕೆ ಗ್ರೀಕ್ ಭಾಷೆಯಲ್ಲಿ ಬಹುವಚನ ಉಪಯೋಗಿಸಿರುವದು, ಇತರೆ ಶಿಷ್ಯರೂ ಇದ್ದರು ಎಂಬದನ್ನು ಸೂಚಿಸುತ್ತದೆ. ಒಬ್ಬ ಶಿಷ್ಯನ ಸಂಗಡ ಮಾತನಾಡುವಾಗ ಯೇಸು ಕ್ರಿಸ್ತನು ಸರ್ವನಾಮದ ಏಕವಚನವನ್ನು ಉಪಯೋಗಿಸಿದ್ದಾನೆ). ಆದರೆ ಪೇತ್ರನು ಸೈತಾನನ ಆಕ್ರಮಣದ ವಿಶೇಷ ವ್ಯಕ್ತಿಯಾಗಿದ್ದನು. **32**

**22:32** ಕರ್ತನಾದ ಯೇಸು ಕ್ರಿಸ್ತನು ಈಗ ಎಲ್ಲರಿಗಾಗಿಯೂ ಪ್ರಾರ್ಥನೆ ಮಾಡುವವನಾಗಿದ್ದಾನೆ (ಯೋಹಾನ 17:9,15; ಇಬ್ರಿ 7:25; 1 ಯೋಹಾನ 2:1). ಈ ಕಾರಣದಿಂದಲೇ ಅವರು ಕಡೆಯ ತನಕ ನಂಬಿಗಸ್ತರಾಗಿರುವರು. ಇದರ ಅರ್ಥವನ್ನು ಗ್ರಹಿಸಿಕೊಳ್ಳುವವರಿಗೆ ಇದರಿಂದ ದೊಡ್ಡ ಪ್ರೋತ್ಸಾಹ ದೊರೆಯುತ್ತದೆ. ಯೋಹಾನ 6:39-40; 10:28; ಫಿಲಿಪ್ಪಿ 1:6; ಇಬ್ರಿ 10:39; 1 ಪೇತ್ರ 1:5 ರೊಂದಿಗೆ ಹೋಲಿಸಿ ನೋಡಿರಿ. "ನೀನು ತಿರುಗಿಕೊಂಡ ಮೇಲೆ" ಎಂಬದಾಗಿ ಯೇಸು ಕ್ರಿಸ್ತನು ಹೇಳಿರುವದನ್ನು

ಗಮನಿಸಿರಿ, ಆತನು "ಒಂದುವೇಳೆ ನೀನು ತಿರುಗಿಕೊಂಡ ಮೇಲೆ" ಎಂಬದಾಗಿ ಆತನು ಹೇಳಿಲ್ಲ. ಪೇತ್ರನಿಗಾಗಿ ತಾನು ಮಾಡುವ ವಿಜ್ಞಾಪನೆಗಳಿಗೆ ಉತ್ತರ ಸಿಗುತ್ತವೆ ಎಂಬದು ಯೇಸು ಕ್ರಿಸ್ತನಿಗೆ ಚೆನ್ನಾಗಿ ಗೊತ್ತಿತ್ತು – ಯೋಹಾನ 11:41-42. ಅವರು ನಾಶನವಾಗುವದಿಲ್ಲ ಎಂಬದಕ್ಕೆ ಇದು ಒಂದು ಒಳ್ಳೆಯ ಕಾರಣವಾಗಿದೆ. **33-34**

- **22:33-34** ಮತ್ತಾಯ 26:33-35. **35**

- **22:35** 9:3; 10:4; ಮತ್ತಾಯ 10:9-10 ನೋಡಿರಿ. **36**

**22:36** ಇದನ್ನು ಹೇಳುವ ಮೂಲಕ ಸಮಯವು ಬದಲಾಗುತ್ತಿದೆ ಮತ್ತು ಶಿಷ್ಯರಿಗೆ ಹೆಚ್ಚು ವಿರೋಧ ಹಾಗು ಹಿಂಸೆಗಳು ಎದುರಾಗುವದರಿಂದ ಅವರು ಸಿದ್ಧರಾಗಿರಬೇಕು ಎಂಬದನ್ನು ಯೇಸು ಕ್ರಿಸ್ತನು ಸೂಚಿಸಿದನು (ಮತ್ತಾಯ 10:11-14 ವಚನಗಳಿಗಿಂತ ಇನ್ನು ಭಿನ್ನವಾಗಿದೆ). ಕತ್ತಿ ಎಂಬದಾಗಿ ಹೇಳುವ ಮೂಲಕ ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹಿಂದಿನ ಸೂಚನೆಗಳನ್ನು ಮರೆಯಬೇಕು (ಮತ್ತಾಯ 5:11-12,38-41) ಮತ್ತು ಯುದ್ಧದ ಮಾರ್ಗವನ್ನು ಹಿಡಿಯಬೇಕು ಎಂಬದಾಗಿ ಹೇಳುತ್ತಿಲ್ಲ. ಇಲ್ಲಿ ಆತನು ನಿಸ್ಸಂದೇಹವಾಗಿ "ಕತ್ತಿ" ಪದವನ್ನು ರೂಪಕಾಲಂಕಾರವಾಗಿ ಉಪಯೋಗಿಸಿ, ಮುಂದಿನ ದಿನಗಳಲ್ಲಿ ಎದುರಾಗುವ ದೊಡ್ಡ ಕಷ್ಟಗಳನ್ನು ಸೂಚಿಸಿದ್ದಾನೆ. ಅದನ್ನು ಎದುರಿಸಲು ಅವರು ಮಾನಸಿಕವಾಗಿ ಸಿದ್ಧರಾಗಿರಬೇಕು (ನಿಜವಾದ ಕತ್ತಿ ಹಿಡಿದು ಅಲ್ಲ). ಕ್ರೈಸ್ತರ ಯುದ್ಧಾಯುದ್ಧವು ಲೌಕಿಕವಾದವುಗಳಲ್ಲ ಬದಲಾಗಿ ಆತ್ಮೀಕವಾದವುಗಳಾಗಿವೆ – ಎಫೆ 6:10-18; 1 ಪೇತ್ರ 4:1. ಮತ್ತಾಯ 26:51-52 ರಲ್ಲಿ ಯೇಸು ಕ್ರಿಸ್ತನು ಹಿಂಸೆಯನ್ನು ವಿರೋಧಿಸುತ್ತಿರುವದನ್ನು ನೋಡಿರಿ. **37**

- **22:37** ಯೆಶಾಯ 53:12; ಮತ್ತಾಯ 5:17; ಲೂಕ 24:44-45. **38**

**22:38** ಅವರು ಯೇಸು ಕ್ರಿಸ್ತನ ಮಾತುಗಳನ್ನು ಅಕ್ಷರಾರ್ಥವಾಗಿ ಅರ್ಥಮಾಡಿಕೊಂಡರು (ಮತ್ತಾಯ 16:5-12; ಯೋಹಾನ 6:52 ರೊಂದಿಗೆ ಹೋಲಿಸಿ ನೋಡಿರಿ). ಯೇಸು ಕ್ರಿಸ್ತನು ಅವರ ಮಂಕುತನವನ್ನು ನೋಡಿ, ಆ ಸಮಯದಲ್ಲಿ ಇನ್ನೇನನ್ನೂ ಹೇಳಲಿಲ್ಲ. ನಂತರದಲ್ಲಿ ಆ ವಿಷಯ ಅವರಿಗೆ ಸ್ಪಷ್ಟವಾಯಿತು. **39-46**

- **22:39-46** ಮತ್ತಾಯ 26:36-46. **39**

**22:39** ಅವರು ಎಣ್ಣೇ ಮರಗಳ ಗುಡ್ಡದ ಪಶ್ಚಿಮದಲ್ಲಿದ್ದ ಗೆತ್ಸೆಮನೆ ತೋಟಕ್ಕೆ

ಹೋದರು. **43**

**22:43** ಲೂಕನು ಮಾತ್ರವೇ ಇದನ್ನು ಬರೆದಿದ್ದಾನೆ. ಯೇಸು ಕ್ರಿಸ್ತನು ಅತ್ಯಂತ ವೇದನೆಯುಳ್ಳ ಅನುಭವಕ್ಕೆ ಒಳಗಾಗಿದ್ದನು, ಆತನು ದೊಡ್ಡ ಕಷ್ಟವನ್ನು ಸಹಿಸಿಕೊಳ್ಳಬೇಕಾಗಿತ್ತು ಆದ್ದರಿಂದ ಆತನ ಮಾನವನ ಸ್ವಭಾವ, ದೇಹ ಮತ್ತು ಪ್ರಾಣ ಆ ವೇದನೆಯಿಂದ ಕುಗ್ಗಿಹೋಗಿತ್ತು. ತನಗೆ ಸಂಭವಿಸಲಿಕ್ಕಿರುವ ಘೋರವಾದ ಶ್ರಮೆಗಳನ್ನು ಸಹಿಸಿಕೊಳ್ಳಲು ಆತನಿಗೆ ಬಲ ಬೇಕಾಗಿತ್ತು.

*"ದೇವದೂತರು"*– ಆದಿ 16:7. **44**

**22:44** *"ಮನೋವ್ಯಥೆ"*– ಮನೋವ್ಯಥೆಯುಳ್ಳ ಆಂತರಿಕ ಹೋರಾಟವು ಆತನನ್ನು ಶಾರೀರಿಕವಾಗಿ ಬಾಧಿಸಿತು. ಲೂಕನು ಮಾತ್ರವೇ ಇದನ್ನು ಬರೆದಿದ್ದಾನೆ. ಯೇಸು ಕ್ರಿಸ್ತನ ಶ್ರಮೆಗಳು ಮತ್ತು ದುಃಖದ ತೀವ್ರತೆಯನ್ನು ಇಲ್ಲಿ ಯುಕ್ತವಾಗಿ ವಿವರಿಸಲಾಗಿದೆ. ಆತನು ಕುಡಿಯಬೇಕಾದ "ಪಾತ್ರೆ" –ನಿಜವಾಗಿಯೂ ಅತ್ಯಂತ ಘೋರವಾದದ್ದಾಗಿತ್ತು. ಮತ್ತಾಯ 26:38-39; ಯೋಹಾನ 18:11 ರೊಂದಿಗೆ ಹೋಲಿಸಿ ನೋಡಿರಿ. **45**

**22:45** ಶಿಷ್ಯರು ನಿದ್ದೆ ಮಾಡಿದ್ದಕ್ಕೆ ಕಾರಣವನ್ನು ಲೂಕನು ಮಾತ್ರವೇ ತಿಳಿಸಿದ್ದಾನೆ. ಯೇಸು ಕ್ರಿಸ್ತನ ದುಃಖದ ಆ ನೋಟವು ಅವನ ಹೃದಯಕ್ಕೆ ದುಃಖವನ್ನುಂಟು ಮಾಡಿತು, ಅವರು ನಿದ್ದೆ ಮಾಡುವ ಮೂಲಕ ಅದನ್ನು ತಪ್ಪಿಸಿಕೊಂಡರು. **47-53**

- **22:47-53** ಮತ್ತಾಯ 26:47-56. **48**

**22:48** ಲೂಕನು ಮಾತ್ರವೇ ಈ ಪ್ರಶ್ನೆಯನ್ನು ಬರೆದಿದ್ದಾನೆ, 49 ನೇ ವಚನದಲ್ಲಿ ನಾವು ಆ ಪ್ರಶ್ನೆಯನ್ನು ನೋಡಬಹುದಾಗಿದೆ. **49**

**22:49** ಯೇಸು ಕ್ರಿಸ್ತನು ನಿಶ್ಚಯವಾಗಿಯೂ "ಹೌದು" ಎಂದು ಉತ್ತರಿಸಲಿಲ್ಲ – 36 ನೇ ವಚನದ ನೋಟ್ ನೋಡಿರಿ. ಮತ್ತಾಯ 26:52-53 ನೋಡಿರಿ. **54**

- **22:54** ಮತ್ತಾಯ 26:57-58. **55-62**

- **22:55-62** ಮತ್ತಾಯ 26:69-75; ಮಾರ್ಕ 14:69. **61**

**22:61** ಲೂಕನು ಮಾತ್ರವೇ ಇದನ್ನು ಬರೆದಿದ್ದಾನೆ. ಪೇತ್ರನ ಹೃದಯವನ್ನು ಮುರಿಯಲು ಯೇಸು ಕ್ರಿಸ್ತನ ಒಂದು ನೋಟ ಸಾಕಾಗಿತ್ತು. **63-65**

**22:63-65** ಮತ್ತಾಯ 26:67-68. ಹೆರೋದನು ಮತ್ತು ಅವನ ಸಿಪಾಯಿಗಳು ಸಹ

ಯೇಸು ಕ್ರಿಸ್ತನನ್ನು ಹಾಸ್ಯ ಮಾಡಿದರು (23:11), ಮತ್ತು ಆತನು ಶಿಲುಬೆಯ ಮೇಲಿರುವಾಗಲೂ ಅನೇಕರು ಆತನನ್ನು ಹಾಸ್ಯ ಮಾಡಿದರು (23:35-36). **66-71**

- **22:66-71** ಮತ್ತಾಯ 26:63-66. **69**

- **22:69** ಕೀರ್ತನೆ 110:1; ಅಪೊ 2:33-34; ರೋಮಾ 8:34; ಎಫೆ 1:20; ಇಬ್ರಿ 1:3,13; 8:1.

# 23[1]

- **23:1** ಮತ್ತಾಯ 27:1-2. **2**

**23:2** ವಚನ 14. ಮೊದಲನೆಯ ಆರೋಪವು ಸುಳ್ಳಾಗಿದೆ. ಬರಬ್ಬನು ನಿಜವಾದ ಪ್ರತಿರೋಧಕನಾಗಿದ್ದನು ಯೆಹೂದ್ಯರು ಅವನನ್ನೇ ಬಿಡುಗಡೆ ಮಾಡಬೇಕೆಂದು ಬಯಸಿದರು (ವ 19). ಎರಡನೆಯ ಆರೋಪವೂ ಸುಳ್ಳಾಗಿದೆ. 20:22-25 ನೋಡಿರಿ. ಮೂರನೆಯ ಆರೋಪವೂ, ಅವರು ಮಾಡಿದ ರೀತಿಯ ಆಧಾರದಲ್ಲಿ ಸುಳ್ಳಾಗಿದೆ. ನಾನು ಮೆಸ್ಸೀಯನು ಎಂಬದಾಗಿ ಆತನು ಹೇಳಿದ್ದು ಸತ್ಯವಾಗಿದೆ (22:67-70; ಮತ್ತಾಯ 26:63-64). ಇದರ ಅರ್ಥವನ್ನು ಪಿಲಾತನು ತಪ್ಪಾಗಿ ತಿಳಿದುಕೊಳ್ಳುವನು ಎಂಬದಾಗಿ ಈ ಯೆಹೂದ್ಯರು ನಿರೀಕ್ಷಿಸಿದರು. ಇಸ್ರಾಯೇಲ್ಯರ ಮೇಲಿನ ರೋಮನ್ನರ ಆಳ್ವಿಕೆಯನ್ನು ಕೊನೆಗೊಳಿಸಲು ತಾನು ಬಂದಿಲ್ಲ ಎಂಬದಾಗಿ ಯೇಸು ಕ್ರಿಸ್ತನು ಪಿಲಾತನಿಗೆ ಸ್ಪಷ್ಟಪಡಿಸಿದನು (ಯೋಹಾನ 18:33-37). **3**

- **23:3** ಮತ್ತಾಯ 27:11. **4**

**23:4** ವಚನಗಳು 14,15,22; ಮತ್ತಾಯ 27:23; ಮಾರ್ಕ 15:14; ಯೋಹಾನ 18:38; 19:6. **6-12**

**23:6-12** ಲೂಕನು ಮಾತ್ರವೇ ಈ ಘಟನೆಯನ್ನು ಬರೆದಿದ್ದಾನೆ. ಯೇಸು ಕ್ರಿಸ್ತನಿಗೆ ಶಿಕ್ಷೆ ವಿಧಿಸುವ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳಲು ಪಿಲಾತನು ಈ ವಿಧಾನವನ್ನು ಪ್ರಯತ್ನಿಸಿದನು. ಮತ್ತಾಯ 27:24 ರೊಂದಿಗೆ ಹೋಲಿಸಿ ನೋಡಿರಿ. **7**

**23:7** ಹೆರೋದನು ಗಲಿಲಾಯದ ಅಧಿಪತಿಯಾಗಿದ್ದನು. 3:1 ನೋಡಿರಿ. **8**

**23:8** 9:9. ಹೆರೋದನು ಅತ್ಯಂತ ಕುತೂಹಲವುಳ್ಳವನಾಗಿದ್ದನು. ದೇವರ ಸತ್ಯವನ್ನು ಕಲಿತುಕೊಳ್ಳಲು ಅಥವಾ ಅಭ್ಯಾಸ ಮಾಡಲು ಅವನಿಗೆ ಬಯಕೆ ಇರಲಿಲ್ಲ. ಈ ಕಾರಣದಿಂದಲೇ ಕರ್ತನಾದ ಯೇಸು ಕ್ರಿಸ್ತನು ಅವನಿಗೆ ಏನೂ ಹೇಳಲಿಲ್ಲ (ವ 9). ಮತ್ತಾಯ 14:1-11 ರಲ್ಲಿ ನಾವು ಹೆರೋದನ ಸ್ವಭಾವವನ್ನು ನೋಡಬಹುದಾಗಿದೆ. **10**

**23:10** ಅಧಿಕಾರದಲ್ಲಿರುವ ಯಾರಾದರೂ ಯೇಸು ಕ್ರಿಸ್ತನನ್ನು ಶಿಲುಬೆಗೆ ಹಾಕಬೇಕೆಂಬದು ಅವರ ಬಯಕೆಯಾಗಿತ್ತು; ಅದು ಯಾರಾದರೂ ಆಗಲಿ ಎಂಬದು ಅವರ ಉದ್ದೇಶವಾಗಿತ್ತು. ಯೋಹಾನ 18:31 ನೋಡಿರಿ. **11**

**23:11** 22:63-64. ಹೆರೋದನು ಮೂಢನಂಬಿಕೆಯುಳ್ಳವನಾಗಿದ್ದನು ಮತ್ತು ಪಿಲಾತನ ಹಾಗೆ ಹೇಡಿಯಾಗಿದ್ದನು ಹಾಗೂ ಯೇಸು ಕ್ರಿಸ್ತನಿಗೆ ಮರಣ ಶಿಕ್ಷೆ ವಿಧಿಸುವ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. **12**

**23:12** ಅವರಿಬ್ಬರೂ ಅತ್ಯಂತ ಕಷ್ಟಕರವಾದ ಪರಿಸ್ಥಿತಿಗೆ ಸಿಕ್ಕಿಕೊಂಡಿದ್ದರು, ನಿರಾಪರಾಧಿ ಎಂದು ಗೊತ್ತಿದ್ದರೂ ಆತನಿಗೆ ಶಿಕ್ಷೆ ವಿಧಿಸುವ ಇಕ್ಕಟ್ಟಿಗೆ ಒಳಗಾಗಿದ್ದರು ಮತ್ತು ಇಬ್ಬರೂ ಕ್ರೂರತೆಯನ್ನು ಪ್ರದರ್ಶಿಸಿ ತಮ್ಮ ಸ್ವಂತ ನಿಯಮಗಳು ಹಾಗೂ ದೇವರ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡರು. ಅವರ ಬಲಹೀನತೆಗಳು ಮತ್ತು ದುಷ್ಟತನಗಳು ಅವರ ಹೃದಯಗಳನ್ನು ಒಟ್ಟುಸೇರಿಸಿದವು. ಅಪೊ 4:23-30 ನೋಡಿರಿ. **13-25**

- **23:13-25** ಮತ್ತಾಯ 27:15-26. **16**

**23:16** ಯೇಸು ಕ್ರಿಸ್ತನು ನಿರಪರಾಧಿ ಎಂಬದಾಗಿ ಪಿಲಾತನೇ ಹಲವು ಬಾರಿ ಹೇಳಿದನು. ಯಾವ ಕಾರಣಕ್ಕೆ ಅವನು ಆತನನ್ನು ಶಿಕ್ಷಿಸುವನು? ಶಿಕ್ಷೆ ಎಂದರೆ ಕ್ರೂರವಾಗಿ ಚಡಿಗಳಿಂದ ಹೊಡೆಸುವದು, ಅದರ ನಿಮಿತ್ತ ಕೆಲವೊಮ್ಮೆ ಜನರು ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು (ಮತ್ತಾಯ 27:26). **18**

- **23:18** ಮತ್ತಾಯ 27:15-16. **23**

**23:23** ದುಷ್ಟರ ಕೂಗು ಕೆಲವೊಮ್ಮೆ ಕಟ್ಟಳೆಗಳು ಮತ್ತು ಕಾರಣಗಳು, ಮನಸ್ಸಾಕ್ಷಿ ಮತ್ತು ಮಾನವೀಯತೆಯನ್ನು ಮರೆಸುತ್ತವೆ. **26-49**

- **23:26-49** ಮತ್ತಾಯ 27:32-56; ಮಾರ್ಕ 15:21-41. **29**

**23:29** 27-31 ವಚನಗಳ ವಿಷಯಗಳನ್ನು ಲೂಕನು ಮಾತ್ರವೇ ಬರೆದಿದ್ದಾನೆ. ಈ ಮಾತುಗಳ ಅರ್ಥವೇನೆಂದರೆ ಯೆರೂಸಲೇಮಿಗೆ ಬರುವ ಕಷ್ಟಗಳಿಂದ ಬಳಲುವ ಬದಲು ಮಕ್ಕಳನ್ನು ಪಡೆಯದಿರುವದೇ ಉತ್ತಮವಾಗಿದೆ (19:41-44). **30**

**23:30** ದೀರ್ಘಕಾಲದ ಶ್ರಮೆಗಳಿಗಿಂತಲೂ ಫಕ್ಕನೆ ಸಂಭವಿಸುವ ನಾಶನವು ಉತ್ತಮ ಎಂದು ಅವರು ಆಲೋಚಿಸುವರು. ಪ್ರಕ 6:16 ರೊಂದಿಗೆ ಹೋಲಿಸಿ ನೋಡಿರಿ. **31**

**23:31** ಕ್ರಿ.ಶ 70 ರಲ್ಲಿ ಯೆರೂಸಲೇಮು ನಾಶವಾಗುವ ಸಂಭವಿಸುವ ಕಾರ್ಯಗಳನ್ನು 29,30 ವಚನಗಳಲ್ಲಿ ಯೇಸು ಕ್ರಿಸ್ತನು ಸೂಚಿಸಿದ್ದಾನೆ. ಆತನು ಇನ್ನೂ ಯೆರೂಸಲೇಮಿನಲ್ಲಿ ಇರುವಾಗಲೇ ಕಾರ್ಯಗಳು ಆತ್ಮೀಕವಾಗಿ "ಹಸುರಾಗಿದ್ದವು" – ಜೀವ ಮತ್ತು ನಿರೀಕ್ಷೆ ಇನ್ನೂ ಉಳಿದುಕೊಂಡಿತ್ತು. ಆತನ ನಿರ್ಗಮನದ ನಂತರ, ಆತನನ್ನು ನಿರಾಕರಿಸಿದ ಇಸ್ರಾಯೇಲ್ ಜನಾಂಗವು ಯಾವುದೇ ಆತ್ಮೀಕ ಜೀವಿತವಿಲ್ಲದೆ "ಒಣಗಿ" ಹೋಯಿತು. **32**

- **23:32** ಮತ್ತಾಯ 27:38. **33**

**23:33** ಮತ್ತಾಯ 27:33-35 . ಮತ್ತಾಯ 27:22 ರಲ್ಲಿ ಶಿಲುಬೆಯ ಮರಣದ ಕುರಿತಾದ ನೋಟ್ಸ್ ನೋಡಿರಿ. **34**

**23:34** ಕರ್ತನಾದ ಯೇಸು ಕ್ರಿಸ್ತನು ಇಲ್ಲಿ ತನ್ನ ಶಿಷ್ಯರಿಗೆ ಕಲಿಸಿದ ಸತ್ಯವನ್ನು ಅಭ್ಯಾಸ ಮಾಡುತ್ತಿದ್ದಾನೆ. ಮತ್ತಾಯ 5:44 ನೋಡಿರಿ. (ಆತನು ಯಾವ ಪಾಪವನ್ನು ಮಾಡಲಿಲ್ಲ ಆದ್ದರಿಂದ ಪಾಪ ಕ್ಷಮಾಪಣೆ ಕೇಳುವುದೊಂದನ್ನು ಬಿಟ್ಟು) ತಾನು ಮಾಡದಿರುವ ಯಾವ ಕಾರ್ಯವನ್ನೂ ಇತರರಿಗೆ ಮಾಡುವಂತೆ ಆತನು ಹೇಳಲಿಲ್ಲ. ಆತನು ಇತರರಿಗೆ ಕ್ಷಮಾಪಣೆಯನ್ನು ದೊರಕಿಸಲು ಬಂದನು (24:46-47), ಆತನನ್ನು ಶಿಲುಬೆಗೆ ಹಾಕಿದಾಗ ಆತನ ಬಾಯಿಂದ ಹೊರಟ ಮೊದಲನೆಯ ಮಾತು ಕ್ಷಮಾಪಣೆಯ ಕುರಿತಾದದ್ದಾಗಿದೆ. ಆತನು ಈ ಪ್ರಾರ್ಥನೆಯನ್ನು ರೋಮನ್ ಸಿಪಾಯಿಗಳಿಗಾಗಿ ಮಾಡಿದನು ಯಾಕಂದರೆ ಅವರೇ ಆತನನ್ನು ಶಿಲುಬೆಗೆ ಹಾಕಿದವರು. ಅವರು ತಮಗೆ ಗೊತ್ತಿಲ್ಲದೆ ಯೇಸು ಕ್ರಿಸ್ತನು ಅಪರಾಧಿಗಳಲ್ಲಿ ಒಬ್ಬನು ಎಂಬದಾಗಿ ಅಂದುಕೊಂಡಿದ್ದರು. ಆ ಗುಡ್ಡದ ಮೇಲೆ ಏನಾಗುತ್ತಿದೆ ಎಂಬದರ ಸ್ಪಷ್ಟ ಅರಿವಿಲ್ಲದಿದ್ದರೂ, ಯಾಜಕರೊಂದಿಗೆ ಸೇರಿಕೊಂಡು ಅತನ ಮರಣವನ್ನು ಬಯಸಿದ ಜನರಿಗಾಗಿಯೂ ಆತನು ಪ್ರಾರ್ಥಿಸಿದನು. ಆತನನ್ನು ಶಿಲುಬೆಗೆ ಹಾಕಿದ್ದಕ್ಕಾಗಿ ಅವರನ್ನು ಕ್ಷಮಿಸು ಎಂಬದಾಗಿ ಆತನು ಪ್ರಾರ್ಥಿಸಿದನೆಯೇ ಹೊರತು ಅವರು

ಮಾಡಿದ ಪಾಪಗಳ ಕ್ಷಮಾಪಣೆಗಾಗಿ ಪ್ರಾರ್ಥಿಸಲಿಲ್ಲ. ಸಂಪೂರ್ಣವಾದ ಕ್ಷಮಾಪಣೆ ಬೇಕೆಂದರೆ ದೇವರ ಕಡೆಗೆ ತಿರುಗಿಕೊಳ್ಳುವದು ಅವಶ್ಯವಾಗಿದೆ (24:47; ಮತ್ತಾಯ 3:2). **35**

**- 23:35** ಮತ್ತಾಯ 27:41-43.

*"ದೇವರಾರಿಸಿಕೊಂಡವನು"*– ಯೆಶಾಯ 42:1; 1 ಪೇತ್ರ 2:4. **36**

**- 23:36** ಕೀರ್ತನೆ 69:21; ಮತ್ತಾಯ 27:48. **38**

**- 23:38** ಮತ್ತಾಯ 27:37. **39**

**23:39** ಪ್ರಾರಂಭದಲ್ಲಿ ಕಳ್ಳರಿಬ್ಬರೂ ಯೇಸು ಕ್ರಿಸ್ತನನ್ನು ನಿಂದಿಸಿದರು (ಮತ್ತಾಯ 27:44). ಆದರೆ ಒಬ್ಬನು ಮಾತ್ರ ಆತನ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡನು. **40-41**

**23:40-41** ಪಶ್ಚಾತ್ತಾಪವು ಅವನ ಹೃದಯದಲ್ಲಿ ಕಾರ್ಯಮಾಡಿತು ಎಂಬದಕ್ಕೆ ಇದುವೇ ಪುರಾವೆಯಾಗಿದೆ. ಅವನು ತನ್ನನ್ನು ಸಮರ್ಥಿಸಿಕೊಳ್ಳಲಿಲ್ಲ, ಬದಲಾಗಿ ತನ್ನ ಪಾಪಗಳಿಗೆ ಶಿಲುಬೆಯ ಮರಣ ತಕ್ಕದಾಗಿದೆ ಎಂದು ಒಪ್ಪಿಕೊಂಡನು. ಅಲ್ಲದೆ ಕರ್ತನಾದ ಯೇಸು ಕ್ರಿಸ್ತನು ನಿರಪರಾಧಿ ಮತ್ತು ತಮ್ಮಂತೆ ಯಾವ ಪಾಪವನ್ನೂ ಮಾಡಲಿಲ್ಲ ಎಂಬದನ್ನು ಅವನು ಅರಿತುಕೊಂಡನು. **42**

**23:42** ಆ ಕಳ್ಳನ ಹೃದಯದೊಳಗೆ ಯೇಸು ಕ್ರಿಸ್ತನ ಮೇಲೆ ನಂಬಿಕೆ ಹುಟ್ಟಿಕೊಂಡಿತು, ಅವನ ನಂಬಿಕೆ ಅಮೋಘವಾದದ್ದಾಗಿತ್ತು. ಅವಮಾನಿಸಲ್ಪಟ್ಟು ಶಿಲುಬೆಗೆ ಹಾಕಲ್ಪಟ್ಟಿರುವ ಈ ವ್ಯಕ್ತಿ ಇಸ್ರಾಯೇಲ್ಯರ ಮೆಸ್ಸೀಯನಾಗಿದ್ದು ತಂದೆಯಾದ ದೇವರು ಈತನಿಗೆ ರಾಜ್ಯವನ್ನು ಕೊಟ್ಟಿದ್ದಾನೆ ಎಂಬದನ್ನು ಅವನು ಅರಿತುಕೊಂಡನು. ಮರಣದೊಂದಿಗೆ ಯೇಸು ಕ್ರಿಸ್ತನ ಕಥೆ ಮುಗಿಯುವದಿಲ್ಲ ಬದಲಾಗಿ ಆತನು ತನ್ನ ರಾಜ್ಯಕ್ಕೆ ಬರುವನು ಎಂಬದು ಅವನಿಗೆ ಗೊತ್ತಾಯಿತು. ತಾನು ಅಪರಾಧ ಮಾಡಿರುವ ಕಳ್ಳನಾಗಿದ್ದರೂ, ಯೇಸು ಕ್ರಿಸ್ತನು ತನಗೆ ಕರುಣೆ ತೋರಿಸುವನು ಎಂಬದನ್ನು ಅವನು ನಂಬಿದನು. **43**

**23:43** *"ಪರದೈಸು"*– 16:22 ರಲ್ಲಿ ನೋಟ್ಸ್ ನೋಡಿರಿ. ಈ ಪದವು ನಿತ್ಯವಾದ ಸಂತೋಷ ಮತ್ತು ಆಶೀರ್ವಾದದ ಸ್ಥಳವನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿ ರಕ್ಷಣೆ ಹೊಂದಬೇಕಾದರೆ ಅದಕ್ಕೆ ಏನೇನು ಬೇಕೋ ಅವೆಲ್ಲವನ್ನು ನಾವು ಆ ಕಳ್ಳನಲ್ಲಿ ನೋಡಬಹುದಾಗಿದೆ. ಅವನು ಸಭೆಯ ಯಾವ ಸಂಸ್ಕಾರಗಳಲ್ಲಿಯೂ ಭಾಗಿಯಾಗಲಿಲ್ಲ ಮತ್ತು ಯಾವುದೇ ರೀತಿಯ ಒಳ್ಳೆಯ ಕಾರ್ಯಗಳನ್ನೂ ಮಾಡಲಿಲ್ಲ, ದೀಕ್ಷಾಸ್ನಾನವನ್ನೂ

ಮಾಡಿಸಿಕೊಳ್ಳಲಿಲ್ಲ ಆದರೂ ರಕ್ಷಣೆ ಹೊಂದಿದನು. ಅವನು ಕೂಡಲೇ ರಕ್ಷಣೆ ಹೊಂದಿದನು ಮತ್ತು ತನ್ನ ಮರಣದ ದಿನವೇ ಪರಲೋಕಕ್ಕೆ ಹೋದನು – ಕಾಯುವಿಕೆಯಾಗಲಿ, ಯಾವುದೇ ಅಡಚಣೆಯಾಗಲಿ ಅವನಿಗೆ ಎದುರಾಗಲೇ ಇಲ್ಲ. ಒಂದುವೇಳೆ ಅವನೇನಾದರೂ ಬದುಕಿದ್ದರೆ ಖಂಡಿತವಾಗಿಯೂ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡಿರುತ್ತಿದ್ದ. ಇವುಗಳು ಇಲ್ಲದೆಯೇ ಅವನು ರಕ್ಷಣೆ ಹೊಂದಿದ್ದು, ರಕ್ಷಣೆ ಹೊಂದಲು ಇವುಗಳು ಅವಶ್ಯವಲ್ಲ ಎಂಬದನ್ನು ತೋರಿಸುತ್ತವೆ. ಇವೆಲ್ಲವೂ ಪಶ್ಚಾತ್ತಾಪದಿಂದ, ನಂಬಿಕೆಯ ಮೂಲಕ ದೇವರ ಕೃಪೆಯಿಂದಲೇ ಉಂಟಾದವು. ಎಫೆ 2:8-9; ತೀತ 3:3-7 ನೋಡಿರಿ. ಯೇಸು ಕ್ರಿಸ್ತನು ಮತ್ತು ಯೇಸು ಕ್ರಿಸ್ತನು ಮಾತ್ರವೇ ದೇವರ ಕೃಪೆಯ ಸಾಧನವಾಗಿದ್ದಾನೆ ಹಾಗೂ ಪ್ರತಿಯೊಬ್ಬರಿಗೂ ಏಕೈಕ ನಿರೀಕ್ಷೆಯಾಗಿದ್ದಾನೆ. **45**

**23:45** ಇದು ದೇವರಿಂದ ಉಂಟಾದ ಅಸಾಧಾರಣವಾದ ಕತ್ತಲೆಯಾಗಿದೆಯೇ ಹೊರತು ಮೋಡಗಳು ಸೂರ್ಯನ ಮುಖವನ್ನು ಮರೆಮಾಡಲಿಲ್ಲ. ಪರದೆಯು ಹರಿಯುವ ವಿಷಯವನ್ನು ತಿಳಿಯಲು ಮತ್ತಾಯ 27:51 ನೋಡಿರಿ. **46**

**23:46** ಕೀರ್ತನೆ 31:5; ಯೋಹಾನ 10:17-18 ರಲ್ಲಿ ನೋಟ್ಸ್ ನೋಡಿರಿ. **47**

**23:47** ಮತ್ತಾಯ 27:54 ನೋಡಿರಿ. ಈ ಸುವಾರ್ತೆಯಲ್ಲಿ ಮತ್ತೊಬ್ಬ ದೇವರನ್ನು ಕೊಂಡಾಡುತ್ತಿರುವದನ್ನು ನಾವು ನೋಡಬಹುದು – 1:46,64; 2:13. ರೋಮನ್ನರ ಸೈನ್ಯದ ಈ ಅಧಿಕಾರಿಯು ಯೇಸು ಕ್ರಿಸ್ತನು ಸಮಾಧಾನದಿಂದ ಸಾಯುತ್ತಿದ್ದಾನೆ ಮತ್ತು ದೇವರು ಪರಲೋಕದ ಸೂಚನೆಗಳ ಮೂಲಕ ಅತನನ್ನು ಘನಪಡಿಸಿದ್ದಾನೆ ಎಂಬದನ್ನು ಅರಿತುಕೊಂಡನು. ಯೇಸು ಕ್ರಿಸ್ತನು ಇವನು ನಿಜವಾದ ನಂಬಿಕೆಯನ್ನಿಡುವಂತೆ ದೇವರು ಇವನನ್ನು ಅನುಗ್ರಹಿಸಿದನು ಎಂಬದಾಗಿ ಅನ್ನಿಸುತ್ತದೆ. **48**

**23:48** 18:13 ನೋಡಿರಿ. **49**

- **23:49** ಮತ್ತಾಯ 27:55-56; ಮಾರ್ಕ 15:40-41. **50-56**

- **23:50-56** ಮತ್ತಾಯ 27:57-61; ಮಾರ್ಕ 15:42-47. **51**

- **23:51** ಲೂಕ 2:25-38.

*"ದೇವರ ರಾಜ್ಯ"*– ಮತ್ತಾಯ 4:17. **56**

**23:56** ಮಾರ್ಕ 16:1 ರಲ್ಲಿ ನೋಟ್ಸ್ ನೋಡಿರಿ.

*“ಸಬ್ಬತ್ . . . ಆಜ್ಞೆ”*– ವಿಮೋ 12:16; 20:10.

# 24 1-10

- **24:1-10** ಮತ್ತಾಯ 28:1-8; ಮಾರ್ಕ 16:1-10. **4**

**24:4** ದೇವದೂತರು ಕೆಲವೊಮ್ಮೆ ಮಾನವರ ರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಮತ್ತಾಯನು ಒಬ್ಬ ದೇವದೂತನ ಬಗ್ಗೆ ಮಾತನಾಡಿದ್ದಾನೆ ಮತ್ತು ಮಾರ್ಕನು ಒಬ್ಬನು ಬಿಳೀ ವಸ್ತ್ರ ಧರಿಸಿದ್ದನು ಎಂದು ಹೇಳಿದ್ದಾನೆ. ಇದರಲ್ಲಿ ಆಶ್ಚರ್ಯವೇನಿಲ್ಲ ಯಾಕಂದರೆ ಕೆಲವೊಮ್ಮೆ ಕೇವಲ ಸಂದೇಶಕನನ್ನು ಮಾತ್ರವೇ ಗುರುತಿಸಲಾಗುತ್ತದೆ ಮತ್ತು ಅವನ ಜೊತೆಯಲ್ಲಿರುವವನ ಬಗ್ಗೆ ಯಾವುದೇ ಪ್ರಸ್ತಾಪ ಇರುವದಿಲ್ಲ. ಮಾರ್ಕ 4:1 ರ ನೋಟ್ ನೋಡಿರಿ. **7**

**24:7** *“ನೆನಪಿಗೆ ತಂದುಕೊಳ್ಳಿರಿ”*– ಮತ್ತಾಯ 16:21; 17:22-23; ಲೂಕ 9:22. ಅವರಿನ್ನೂ ಗಲಿಲಾಯದಲ್ಲಿರುವಾಗಲೇ ಆತನು ತನ್ನ ಶಿಷ್ಯರಿಗೆ ಇದರ ಬಗ್ಗೆ ಅನೇಕ ಸಲ ಹೇಳಿದ್ದನು, ಅದಕ್ಕೆ ತಕ್ಕಂತೆ ಸ್ತ್ರೀಯರು ಒಮ್ಮೆಯಾದರೂ ಅಲ್ಲಿಗೆ ಬಂದರು. **9**

- **24:9** ಮಾರ್ಕ 16:14. **11**

- **24:11** ಮಾರ್ಕ 16:11. **12**

**24:12** ಯೇಸು ಕ್ರಿಸ್ತನು ಎದ್ದಿರುವ ಸಾಧ್ಯತೆಯನ್ನು ಪೇತ್ರನು ತನ್ನೊಳಗೆ ದೃಢಪಡಿಸಿಕೊಂಡನು. ಯೋಹಾನನು ಪೇತ್ರನೊಂದಿಗೆ ಹೋದನು ಮತ್ತು ಸಮಾಧಿಯ ಸ್ಥಿತಿಯನ್ನು ನೋಡಿ ಯೇಸು ಕ್ರಿಸ್ತನು ಎದ್ದಿದ್ದಾನೆ ಎಂಬದನ್ನು ನಂಬಿದನು. ಯೋಹಾನ 20:3-9 ನೋಡಿರಿ. **13-35**

**24:13-35** ಮಾರ್ಕನು ಇದನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾನೆ (ಮಾರ್ಕ 16:12-13), ಆದರೆ ಲೂಕನು ಮಾತ್ರವೇ ಇದನ್ನು ವಿವರವಾಗಿ ಹೇಳಿದ್ದಾನೆ. **16**

**24:16** ಯೇಸು ಕ್ರಿಸ್ತನನ್ನು ಅವರು ಗುರುತಿಸದಂತೆ ದೇವರೇ ಮಾಡಿದನು ಆದರೆ ಆತನು ಪುನರುತ್ಥಾನಗೊಂಡ ನಂತರ ಆತನ ಸಾರೂಪ್ಯವು ಹೇಗಿತ್ತೆಂದರೆ ಕೆಲವರಿಗೆ ಆತನನ್ನು ಸುಲಭವಾಗಿ ಗುರುತಿಸಲು ಆಗಲಿಲ್ಲ (ವ 31,36,37; ಮತ್ತಾಯ 28:17; ಯೋಹಾನ 20:14-16,19). **17**

**24:17** ಯೇಸು ಕ್ರಿಸ್ತನು ಕೆಲವೊಮ್ಮೆ ಇಂಥ ಪ್ರಶ್ನೆಗಳನ್ನು ಕೇಳುತ್ತಿದ್ದನು – ಆತನಿಗೆ ಉತ್ತರ ಗೊತ್ತಿರಲಿಲ್ಲ ಎಂಬದಕ್ಕಾಗಿಯಲ್ಲ ಬದಲಾಗಿ ಅವರು ತಮ್ಮ ಆಲೋಚನೆಗಳನ್ನು ಹೇಳಲಿ ಎಂದು ಬಯಸಿದನು. **19**

**24:19** ಯೇಸು ಕ್ರಿಸ್ತನು ಪ್ರವಾದಿ ಎಂಬದನ್ನು ಮಾತ್ರವೇ ಅವರು ನಂಬಿದ್ದರೇ? **21**

**24:21** *"ನಿರೀಕ್ಷಿಸಿಕೊಂಡಿದ್ದೆವು"*– ಪದದ ಕ್ರಿಯಾಪದವನ್ನು ಗಮನಿಸಿರಿ. ಕರ್ತನಾದ ಯೇಸು ಕ್ರಿಸ್ತನ ಮರಣದೊಂದಿಗೆ ಅವರ ನಿರೀಕ್ಷೆಗಳು ಹಾಳಾದವು. **24**

**24:24** ಯೇಸು ಕ್ರಿಸ್ತನು ಜೀವಂತವಾಗಿದ್ದಾನೆ ಎಂಬದನ್ನು ಈ ಶಿಷ್ಯರಿಗೆ ನಿರೂಪಿಸಲು ಖಾಲಿಯಾಗಿರುವ ಸಮಾಧಿಯ ವಿಷಯದಿಂದ ಸಾಧ್ಯವಾಗಲಿಲ್ಲ. ತೋಮನ ಹಾಗೆ ಅವರು ಆತನನ್ನು ನೋಡಬೇಕೆಂದು ಬಯಸಿದರು (ಯೋಹಾನ 20:25). **25-26**

**24:25-26** ಅವರಿಗೆ ಹಳೆಯ ಒಡಂಬಡಿಕೆಯ ಪ್ರವಾದಿಗಳ ಪ್ರವಾದನೆಗಳು ಗೊತ್ತಿದ್ದವು, ಅವರು ತಮಗೆ ಅವುಗಳಲ್ಲಿ ನಂಬಿಕೆಯಿದೆ ಅಂದುಕೊಂಡಿದ್ದರು, ಅವರು ಮೂರ್ಖರಾಗಿದ್ದರು ಮತ್ತು ಆ ಪ್ರವಾದನೆಗಳು ಯೇಸು ಕ್ರಿಸ್ತನ ಕುರಿತಾದದ್ದು ಎಂಬದನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾದರು. ಹಳೆಯ ಒಡಂಬಡಿಕೆಯ ಪ್ರವಾದಿಗಳು ಬರುವ ಮೆಸ್ಸೀಯನ ಶ್ರಮೆಗಳು ಮತ್ತು ಪ್ರಭಾವಗಳು ಎರಡರ ಬಗ್ಗೆಯೂ ಬರೆದಿದ್ದರು (ಕೀರ್ತನೆ 22; ಯೆಶಾಯ 53; 9:6-7; 11:1-16). ಆಗಿನ ಕಾಲದಲ್ಲಿದ್ದ ಯೆಹೂದ್ಯರು ಶ್ರಮೆಯಿಲ್ಲದೆ ಪ್ರಭಾವವನ್ನು ಎದುರುನೋಡುತ್ತಿದ್ದರು. **27**

**24:27** ವಚನ 44. ಯೇಸು ಕ್ರಿಸ್ತನು ಈಗ ಅವರ ತಿಳುವಳಿಕೆಯಲ್ಲಿದ್ದ ಲೋಪವನ್ನು ಸರಿಪಡಿಸಿದನು. ಹಳೆಯ ಒಡಂಬಡಿಕೆಯು ಮೋಶೆಯಿಂದ (ಸತ್ಯವೇದದ ಪ್ರಾರಂಭದ ಪುಸ್ತಕಗಳಿಂದ) ಯೇಸು ಕ್ರಿಸ್ತನ ಬಗ್ಗೆಯೇ ಹೇಳುವದನ್ನು ಗಮನಿಸಿರಿ. ಒಂದುವೇಳೆ ನಾವು ನಂಬುವವರು ಮತ್ತು ವಿಧೇಯತೆಯುಳ್ಳವರೂ ಆಗಿದ್ದರೆ ಕರ್ತನಾದ ಯೇಸು ಕ್ರಿಸ್ತನು ನಮಗೆ ಹಳೆಯ ಒಡಂಬಡಿಕೆಯನ್ನೂ ವಿವರಿಸುತ್ತಾನೆ. ಪವಿತ್ರಾತ್ಮನ ಮೂಲಕ ಆತನು ಈ ಕಾರ್ಯವನ್ನು ಮಾಡುವನು (ಯೋಹಾನ 14:26; 15:26; 16:13-15). **28**

**24:28** ಅವರು ತನ್ನನ್ನು ತಮ್ಮ ಮನೆಗೆ ಆಹ್ವಾನಿಸಲಿ ಎಂಬದಾಗಿ ಆತನು ಬಯಸಿದನು; ಇಲ್ಲವಾದರೆ ಆತನು ಬರುವದಿಲ್ಲ (ಪ್ರಕ 3:20 ರೊಂದಿಗೆ ಹೋಲಿಸಿರಿ). ಆತನು ಯಾರು ಎಂಬದಾಗಿ ಅರಿಯದೆ ಅವರು ಆತನನ್ನು ತನ್ನ ಮನೆಯೊಳಗೆ ಆಹ್ವಾನಿಸಿದರು (ಮತ್ತಾಯ 25:34-40; ಇಬ್ರಿ 13:2 ರೊಂದಿಗೆ ಹೋಲಿಸಿ ನೋಡಿರಿ). **30**

**24:30** 9:16; 22:19 ನೋಡಿರಿ. **31**

**24:31** ಪುನರುತ್ಥಾನದ ನಂತರ ಯೇಸು ಕ್ರಿಸ್ತನು ಬಾಗಿಲು ಹಾಕಿದ್ದರೂ, ಆಗಾಗ ಪ್ರತ್ಯಕ್ಷನಾಗುತ್ತಿದ್ದನು ಮತ್ತು ಮರೆಯಾಗುತ್ತಿದ್ದನು (ವ 36; ಯೋಹಾನ 20:19). ಆತನ ದೇಹವು ಶ್ರಮೆ ಅನುಭವಿಸಿ ಮರಣ ಹೊಂದಿದ ಅದೇ ದೇಹವಾಗಿತ್ತು (ವ 38-43), ಆದರೆ ಅದ್ಭುತವಾದ ರೀತಿಯಲ್ಲಿ ಬದಲಾಗಿತ್ತು. 1 ಕೊರಿಂಥ 15:35-44; ಫಿಲಿಪ್ಪಿ 3:21 ರೊಂದಿಗೆ ಹೋಲಿಸಿ ನೋಡಿರಿ. **32**

**24:32** ಹೃದಯಗಳಲ್ಲಿ ಬೆಂಕಿಹೊತ್ತಿಸಲು ಕರ್ತನಾದ ಯೇಸು ಕ್ರಿಸ್ತನು ಈಗಲೂ ಶಕ್ತನಾಗಿದ್ದಾನೆ. **33**

**24:33** ವಚನ 9. **34**

**24:34** ಸೀಮೋನ, ಪೇತ್ರನ ನಿಜವಾದ ಹೆಸರು. ಅವನನ್ನು ಕೇಫ ಎಂಬದಾಗಿಯೂ ಕರೆಯುತ್ತಿದ್ದರು (1 ಕೊರಿಂಥ 15:5). ಪೇತ್ರನಿಗೆ ಯೇಸು ಕ್ರಿಸ್ತನು ಕಾಣಿಸಿಕೊಂಡದ್ದನ್ನು ಬೇರೆ ಯಾವುದೇ ಸುವಾರ್ತೆಗಳಲ್ಲಿಯೂ ಬರೆಯಲ್ಪಟ್ಟಿಲ್ಲ. **36**

**24:36** ಯೋಹಾನ 20:19. ಬಾಗಿಲಿಗೆ ಬೀಗ ಹಾಕಲಾಗಿತ್ತು. **39**

**24:39** ಆತನನ್ನು ಶಿಲುಬೆಗೆ ಹಾಕುವಾಗ ಆತನ ಕೈ ಕಾಲುಗಳಿಗೆ ಮೊಳೆ ಜಡಿದ ಗಾಯಗಳಿದ್ದವು. ಯೇಸು ಕ್ರಿಸ್ತನ ಈ ಮಾತುಗಳು ಆತನ ದೇಹವು ಸಮಾಧಿಯಿಂದ ಎದ್ದು ಬಂದಿದೆ ಎಂಬದನ್ನು ನಿರೂಪಿಸುತ್ತವೆ. ಆತನ ಪುನರುತ್ಥಾನವು ಯಾವುದೋ ಒಂದು ರೀತಿಯ ಆತ್ಮೀಕ ಪುನರುತ್ಥಾನವಾಗಿರಲಿಲ್ಲ. ಶಿಲುಬೆಗೇರಿಸಲ್ಪಟ್ಟು ಹೂಣಲ್ಪಟ್ಟ ದೇಹವೇ ಈಗ ಜೀವಂತವಾಗಿತ್ತು. ಅದನ್ನು ನೋಡಲು ಮತ್ತು ಮುಟ್ಟಲು ಆಗುತ್ತಿತ್ತು ಮತ್ತು ಆತನು ಆಹಾರವನ್ನು ಸೇವಿಸಿದನು (ವ 42,43). **40-42**

**24:40-42** ಶಿಷ್ಯರು ನಮ್ಮ ಹಾಗೆ ಮಾನವರಾಗಿದ್ದರು. ನಿಜವಾದ ಸಂಗತಿಗಳನ್ನು ಕೂಡಲೇ ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ, ಬಹಳ ಕಷ್ಟವಾಗುತ್ತಾ ಇತ್ತು. **43**

- **24:43** ಯೋಹಾನ 21:12-15. **44**

**24:44** ಯೆಹೂದ್ಯರು ಕೆಲವೊಮ್ಮೆ ಹಳೆಯ ಒಡಂಬಡಿಕೆಯನ್ನು ಎರಡು ಭಾಗಗಳಾಗಿ

ವಿಭಾಗಿಸುತ್ತಿದ್ದರು – ಧರ್ಮಶಾಸ್ತ್ರ ಮತ್ತು ಪ್ರವಾದಿಗಳು (ವ 27; ಮತ್ತಾಯ 5:17); ಕೆಲವೊಮ್ಮೆ ಮೂರು ಭಾಗಗಳಾಗಿ ವಿಭಾಗಿಸುತ್ತಿದ್ದರು – ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಕೀರ್ತನೆಗಳು. ಈಗಿನ ಹಳೆಯ ಒಡಂಬಡಿಕೆಯ ಕ್ರಮದಂತಲ್ಲದೆ ವಿಧವಾಗಿ ಅವರು ಪುಸ್ತಕಗಳನ್ನು ಜೋಡಿಸುತ್ತಿದ್ದರು. ಕೀರ್ತನೆಗಳ ಪುಸ್ತಕವು ಮೂರನೆಯ ಭಾಗದ ಮೊದಲನೆಯ ಪುಸ್ತಕವಾಗಿತ್ತು. ಕ್ರೈಸ್ತರು ಈಗ ಸಾಮನ್ಯವಾಗಿ ಹಳೆಯ ಒಡಂಬಡಿಕೆಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸುತ್ತಾರೆ – ಮೋಶೆಯ ಪುಸ್ತಕಗಳನ್ನು ಪಂಚ ಗ್ರಂಥಗಳು ಎಂದು ಕರೆಯಲಾಗುತ್ತದೆ (ಅಂದರೆ ಐದು ಪುಸ್ತಕಗಳು – ಆದಿಕಾಂಡದಿಂದ ಧರ್ಮೋಪದೇಶಕಾಂಡದ ತನಕ), ಚರಿತ್ರೆಯ ಪುಸ್ತಕಗಳು (ಯೆಹೋಶುವನಿಂದ ಎಸ್ತೇರಳ ತನಕ), ಪದ್ಯ ಪುಸ್ತಕಗಳು (ಯೋಬನಿಂದ ಪರಮಗೀತೆಯ ತನಕ) ಮತ್ತು ಪ್ರವಾದನಾ ಪುಸ್ತಕಗಳು (ಯೆಶಾಯನಿಂದ ಮಲಾಕಿಯ ತನಕ). ಯೇಸು ಕ್ರಿಸ್ತನ ಕುರಿತಾದ ಪ್ರಕಟನೆಗಳು ಮತ್ತು ಕ್ರಿಸ್ತನ ಚಿತ್ರಣಗಳನ್ನು ಹಳೆಯ ಒಡಂಬಡಿಕೆಯ ಎಲ್ಲಾ ಭಾಗಗಳಲ್ಲಿಯೂ ನೋಡಬಹುದಾಗಿದೆ. ಆತನು ಇವೆಲ್ಲವುಗಳನ್ನು ತನ್ನ ಶಿಷ್ಯರಿಗೆ ಸ್ಪಷ್ಟಪಡಿಸಿದನು – ಕೇವಲ ಒಂದು ಕ್ಷಣದಲ್ಲಿಯಲ್ಲ ಬದಲಾಗಿ 40 ದಿವಸಗಳ ಅವಧಿಯಲ್ಲಿ (ಅಪೊ 1:3). **45**

**24:45** ಶಾಸ್ತ್ರವಚನಗಳನ್ನು ಅರ್ಥಮಾಡಿಕೊಳ್ಳಲು ಆತನು ಈಗಲೂ ಮಾನವರ ಕಣ್ಣುಗಳನ್ನು ತೆರೆಯುವವನಾಗಿದ್ದಾನೆ. ಯೆಶಾಯ 54:13; ಯೋಹಾನ 16:13; ಎಫೆ 1:17-18; ಯೋಹಾನ 2:20 ರೊಂದಿಗೆ ಹೋಲಿಸಿ ನೋಡಿರಿ. **46-47**

**24:46-47** *"ದೇವರ ಕಡೆಗೆ ತಿರುಗಿಕೊಳ್ಳುವದು"*– 13:3-5; ಮತ್ತಾಯ 3:2,8; ಅಪೊ 17:30.

*"ಕ್ಷಮಾಪಣೆ"*– ಮತ್ತಾಯ 6:12; 9:5-7; 12:31; 18:23-35; ಎಫೆ 1:7; 1 ಯೋಹಾನ 1:9. ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ಪಾಪಗಳು ಸಂಪೂರ್ಣವಾಗಿ ಕ್ಷಮಿಸಲ್ಪಡುವದಿಲ್ಲ. ಹಾಗೆಯೇ ಅಪೊ 5:31; 26:18 ನೋಡಿರಿ. ಯೇಸು ಕ್ರಿಸ್ತನು ಪಾಪಪರಿಹಾರಕ್ಕಾಗಿ ಶ್ರಮೆ ಅನುಭವಿಸಿ, ಯಜ್ಞವಾಗಿ ಪ್ರಾಣ ಅರ್ಪಿಸಿದ್ದು ಮತ್ತು ಸತ್ತವರೊಳಗಿಂದ ಎದ್ದು ಬಂದದ್ದು, ಕ್ಷಮಾಪಣೆಯ ಮೂಲವಾಗಿದೆ ಮತ್ತು ಅದಕ್ಕೆ ಪರ್ಯಾಯವಾದದ್ದು ಯಾವುದೂ ಇಲ್ಲ. ಈ ಸತ್ಯವನ್ನು ಸರ್ವಲೋಕದಲ್ಲೆಲ್ಲಾ ಸಾರಬೇಕು (ಮತ್ತಾಯ 28:18-20; ಮಾರ್ಕ 16:15), ಆದರೆ ಆತನ ಮರಣವನ್ನು

ಒತ್ತಾಯಪಡಿಸಿದ ಯೆಹೂದ್ಯರಿಗೆ ಮೊದಲು ಸಾರಬೇಕು – ಅಪೊ 1:8; 3:26. **48**

**24:48** ಯೋಹಾನ 15:27; ಅಪೊ 1:8. ಶಿಷ್ಯರು ಯೇಸು ಕ್ರಿಸ್ತನ ಸಾಕ್ಷಿಗಳಾಗಿ ಸ್ವೇಚ್ಛೆಯಿಂದ ಶ್ರಮೆಗಳನ್ನು ಅನುಭವಿಸಿ ತಮ್ಮ ಸಾಕ್ಷಿಗಳ ನಿಮಿತ್ತ ಪ್ರಾಣವನ್ನೇ ಕೊಡುವ ಮೂಲಕ ತಮ್ಮ ಸತ್ಯತೆ ಹಾಗೂ ಯಥಾರ್ಥತೆಯನ್ನು ವ್ಯಕ್ತಪಡಿಸಿದರು (ಅಪೊ 5:40-42; 7:57-60; 12:1-4; 14:19-20; 2 ಕೊರಿಂಥ 11:23-26). **49**

**24:49** ಅಪೊ 1:4 ನೋಡಿರಿ. ತಂದೆಯಾದ ದೇವರು ಪವಿತ್ರಾತ್ಮನನ್ನು ವಾಗ್ದಾನ ಮಾಡಿದ್ದಾನೆ (ಯೆಶಾಯ 44:3; ಯೋವೇಲ 2:28; ಯೋಹಾನ 7:37-39; 14:16-17). ದೇವರ ಶಕ್ತಿಯಿಲ್ಲದೆ ನಾವು ದೇವರ ಕೆಲಸವನ್ನು ಮಾಡಬಹುದು ಎಂಬ ವ್ಯರ್ಥವಾದ ಆಲೋಚನೆ ಕ್ರಿಸ್ತನ ಶಿಷ್ಯರಲ್ಲಿ ಇರಲಿಲ್ಲ. ದೇವರ ಶಕ್ತಿಯ ಮೂಲಕ ಆತನ ಸೇವಕರು ಏನು ಮಾಡಬಹುದು ಎಂಬದನ್ನು ಅಪೊಸ್ತಲರ ಕೃತ್ಯಗಳ ಪುಸ್ತಕವು ನಮಗೆ ತೋರಿಸುತ್ತದೆ. ಸ್ವಾಭಾವಿಕವಾಗಿ ಯಾವ ಮನುಷ್ಯನಿಗೂ ಇರದಂಥ ಬಲ, ಶಕ್ತಿ ಮತ್ತು ಪ್ರಭಾವವನ್ನು ಪವಿತ್ರಾತ್ಮನು ಕೊಡುತ್ತಾನೆ. **50**

**24:50** ಬೆಥಾನ್ಯವು ಯೆರೂಸಲೇಮಿನ ಪೂರ್ವಕ್ಕೆ ಎಣ್ಣೇಮರಗಳ ಗುಡ್ಡದ ಮೇಲಿತ್ತು.

*"ಅವರನ್ನು ಆಶೀರ್ವದಿಸಿದನು"*– ಆದಿ 12:1-3; ಯಾಜಕ 9:22-24; ಸಂಖ್ಯಾ 6:22-27. **51**

- **24:51** ಅಪೊ 1:9. **52**

**24:52** ಶಾಸ್ತ್ರವಚನಗಳನ್ನು ಅರ್ಥಮಾಡಿಕೊಳ್ಳಲು ಅವರ ಮನಸ್ಸುಗಳು ತೆರೆಯಲ್ಪಟ್ಟವು ಮತ್ತು ಸತ್ತವರೊಳಗಿಂದ ಎದ್ದು ಬಂದ ಕರ್ತನಾದ ಯೇಸು ಕ್ರಿಸ್ತನು ಅವರಿಗೆ ಮುಂದಾಗಿ ಹೋದನು. ಆತನು ಮಾನವನಾಗಿ ಬಂದ ದೇವರು ಮತ್ತು ಆರಾಧನೆಗೆ ಯೋಗ್ಯನು ಎಂಬದನ್ನು ಯಾವುದೇ ಸಂದೇಹವಿಲ್ಲದೆ ಅವರು ತಿಳಿದುಕೊಂಡರು. ಮತ್ತಾಯ 28:17; ಯೋಹಾನ 20:28-29 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ಯಾರಾಗಿದ್ದನು ಎಂಬ ಅವರ ತಿಳುವಳಿಕೆ, ಆತನನ್ನು ಆರಾಧಿಸಿದ್ದು ಮತ್ತು ಸಂತೋಷಪಟ್ಟಿದ್ದರ ನಡುವೆಯಿರುವ ಹೊಂದಾಣಿಕೆಯನ್ನು ಗಮನಿಸಿರಿ. ಅವರು ಸಂತೋಷವನ್ನು ಹುಡುಕಿದ್ದರಿಂದ ಮಹಾಸಂತೋಷಪಡಲಿಲ್ಲ ಬದಲಾಗಿ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದರಿಂದ ಬಹುಸಂತೋಷವುಳ್ಳವರಾದರು (1 ಪೇತ್ರ 1:8

ರೊಂದಿಗೆ ಹೋಲಿಸಿ ನೋಡಿರಿ). **53**

**24:53** ಲೂಕನು ತನ್ನ ಸುವಾರ್ತೆಯಾದ್ಯಂತ ವ್ಯಕ್ತಪಡಿಸಿರುವದು– ದೇವರನ್ನು ಸ್ತುತಿಸುವ ಧ್ಯೇಯದೊಂದಿಗೆ ಇದನ್ನು ಕೊನೆಗೊಳಿಸಿದ್ದಾನೆ (1:46,64; 2:13). ಕರ್ತನಾದ ಯೇಸು ಕ್ರಿಸ್ತನಲ್ಲಿ ಮತ್ತು ಆತನ ಮೂಲಕ ಆತನು ಮಾಡಿರುವ ಎಲ್ಲಾ ಅದ್ಭುತಕಾರ್ಯಗಳಿಗಾಗಿ ನಾವೆಲ್ಲರೂ ಆತನನ್ನು ಸ್ತುತಿಸುವದರಲ್ಲಿ ಸೇರಿಕೊಳ್ಳೋಣ.